| 4 | ಹು.ವಿ.ಸ. ಕಂಪನಿ | ಬೆಳಗಾವಿ | ಎಂ. ಕೆ ಹುಬ್ಬಳ್ಳಿ | 1X10 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ,110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 10 | 110 | ಬದಲಾಯಿಸುವುದು | 11–ಜನವರಿ–2019 |

| ಕ್ರ ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
|---|---|---|---|---|---|---|---|---|
| 5 | ಹು.ವಿ.ಸ. ಕಂಪನಿ | ಬೆಳಗಾವಿ | ನೆಹರು ನಗರ | 2X10 ಎಂ.ವಿ.ಎ,110/11 ಕೆವಿ ಪರಿವರ್ತಕವನ್ನು 2X20 ಎಂ.ವಿ.ಎ,110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 20 | 110 | ಬದಲಾಯಿಸುವುದು | ಪರಿವರ್ತಕ 1 : 08–ಸೆಪ್ಟಂಬರ್–2018 ಪರಿವರ್ತಕ 2 : 29–ಅಕ್ಟೋಬರ್–2018 |
| 6 | ಹು.ವಿ.ಸ. ಕಂಪನಿ | ಗದಗ | ದಂಬಾಲ್ | 1X10 ಎಂ.ವಿ.ಎ,110/11 ಕೆವಿ ಪರಿವರ್ತಕವನ್ನು ಅಳವಡಿಸುವುದು | 10 | 110 | ಹೆಚ್ಚುವರಿ | 20–ಮಾರ್ಚ್–2019 |
| 7 | ಹು.ವಿ.ಸ. ಕಂಪನಿ | ಉತ್ತರ ಕನ್ನಡ | ಕಾರವಾರ (ಶೆಜ್ವಾಡ) | ಹೆಚ್ಚುವರಿ 1X20 ಎಂ.ವಿ.ಎ, 110/33–11 ಕೆವಿ ಪರಿವರ್ತಕವನ್ನು ಒದಗಿಸುವುದು. | 20 | 110 | ಹೆಚ್ಚುವರಿ | 06–ಸೆಪ್ಟಂಬರ್–2018 |
| 8 | ಹು.ವಿ.ಸ. ಕಂಪನಿ | ಉತ್ತರ ಕನ್ನಡ | ಶಿರಸಿ | 1X10 ಎಂ.ವಿ.ಎ,110/11 ಕೆವಿ ಪರಿವರ್ತಕವನ್ನು 1X20 ಎಂ.ವಿ.ಎ, 110/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 27–ನವೆಂಬರ್–2018 |
| 9 | ಹು.ವಿ.ಸ. ಕಂಪನಿ | ವಿಜಯಪುರ | ಬಸವನ ಬಾಗೇವಾಡಿ | 1X100 ಎಂ.ವಿ.ಎ 220/66 ಕೆವಿ ಪರಿವರ್ತಕವನ್ನು ಅಳವಡಿಸುವುದು | 100 | 220 | ಹೆಚ್ಚುವರಿ | 02–ಫೆಬ್ರವರಿ–2019 |
| 10 | ಹು.ವಿ.ಸ. ಕಂಪನಿ | ವಿಜಯಪುರ | ದೇವನಗೊನ್ | ಹೆಚ್ಚುವರಿ 1X10 ಎಂ.ವಿ.ಎ ಪರಿವರ್ತಕವನ್ನು 110/11 ಕೆವಿ ಪರಿವರ್ತಕಕ್ಕೆ ಅಳವಡಿಸುವುದು | 10 | 110 | ಹೆಚ್ಚುವರಿ | 17–ಜನವರಿ–2019 |
| 11 | ಹು.ವಿ.ಸ. ಕಂಪನಿ | ವಿಜಯಪುರ | ಹಿರೇಬೇವನೂರು | ಹೆಚ್ಚುವರಿ 1X10 ಎಂ.ವಿ.ಎ ಪರಿವರ್ತಕವನ್ನು 110/11 ಕೆವಿ ಪರಿವರ್ತಕಕ್ಕೆ ಅಳವಡಿಸುವುದು | 10 | 110 | ಹೆಚ್ಚುವರಿ | 22–ಆಗಸ್ಟ್–2018 |
| 12 | ಹು.ವಿ.ಸ. ಕಂಪನಿ | ವಿಜಯಪುರ | ಲಾಚ್ಯನ್ | 1X10 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ, 110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 29–ಮೇ–2018 |
| 13 | ಹು.ವಿ.ಸ. ಕಂಪನಿ | ವಿಜಯಪುರ | ಮೋರಟಗಿ | ಹೆಚ್ಚುವರಿ 1X10 ಎಂ.ವಿ.ಎ ಪರಿವರ್ತಕವನ್ನು 110/11 ಕೆವಿ ಪರಿವರ್ತಕಕ್ಕೆ ಅಳವಡಿಸುವುದು | 10 | 110 | ಹೆಚ್ಚುವರಿ | 24–ಸೆಪ್ಟಂಬರ್–2018 |
| 14 | ಹು.ವಿ.ಸ. ಕಂಪನಿ | ವಿಜಯಪುರ | ಶಿರಬೂರು | 1X10 ಎಂ.ವಿ.ಎ, 110/11 ಕೆವಿ ಪರಿವರ್ತಕವನ್ನು 1X20 ಎಂ.ವಿ.ಎ, 110/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು | 10 | 110 | ಬದಲಾಯಿಸುವುದು | 08–ಅಕ್ಟೋಬರ್–2018 |
| 15 | ಹು.ವಿ.ಸ. ಕಂಪನಿ | ಬೆಳಗಾವಿ | ಸೌಂದತ್ತಿ | 1X10 ಎಂ.ವಿ.ಎ, 110/1 ಕೆವಿ ಪರಿವರ್ತಕವನ್ನು ಅಳವಡಿಸುವುದು | 10 | 110 | ಹೆಚ್ಚುವರಿ | 23–ಅಕ್ಟೋಬರ್–2018 |
| 16 | ಹು.ವಿ.ಸ. ಕಂಪನಿ | ಹಾವೇರಿ | ಹಾವೇರಿ | 1X20 ಎಂ.ವಿ.ಎ 110/33/ 11 ಕೆವಿ ಪರಿವರ್ತಕವನ್ನು ಅಳವಡಿಸುವುದು | 20 | 110 | ಹೆಚ್ಚುವರಿ | 28–ಫೆಬ್ರವರಿ–2019 |
| | | | | **ಒಟ್ಟು ಉಪ ಮೊತ್ತ (ಎಂವಿಎ)** | **280** | | | |

| ಬೆಂಗಳೂರು ಪ್ರಸರಣ ವಲಯ | | | | | | | | |
|---|---|---|---|---|---|---|---|---|
| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
| 17 | ಬೆ.ವಿ.ಸ ಕಂಪನಿ | ಬೆಂಗಳೂರು ಗ್ರಾಮಾಂತರ | ಬೂದಿಗೆರೆ | 1X8 ಎಂ.ವಿ.ಎ 66/11 ಕೆವಿ ಪರಿವರ್ತಕವನ್ನು 1X20 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 12 | 66 | ಬದಲಾಯಿಸುವುದು | 05–ನವೆಂಬರ್–2018 |
| 18 | ಬೆ.ವಿ.ಸ ಕಂಪನಿ | ಬೆಂಗಳೂರು ಗ್ರಾಮಾಂತರ | ಕೆ.ಐ.ಎ.ಡಿ.ಬಿ ದೊಡ್ಡಬಳ್ಳಾಪುರ | 50 ಎಂ.ವಿ.ಎ ಪರಿವರ್ತಕವನ್ನು 100 ಎಂ.ವಿ.ಎ 220/66 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 50 | 220 | ಬದಲಾಯಿಸುವುದು | 21–ಡಿಸೆಂಬರ್–2018 |
| 19 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ಅಬ್ಬಿಗೆರೆ | 2X12.5 ಎಂ.ವಿ.ಎ,66/11 ಕೆವಿ ಪರಿವರ್ತಕವನ್ನು 2X20 ಎಂ.ವಿ.ಎ 66/11 ಕೆವಿ.ಪರಿವರ್ತಕವನ್ನಾಗಿ ಬದಲಾಯಿಸುವುದು | 7.5,01 ಪರಿವರ್ತಕ ಚಾಲನೆ–ಗೊಳಿಸ–ಲಾಗಿದೆ | 66 | ಬದಲಾಯಿಸುವುದು | 15–ಸೆಪ್ಟಂಬರ್–2018 |
| 20 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ಕೋರಮಂಗಲ | 2X20 ಎಂ.ವಿ.ಎ ಪರಿವರ್ತಕವನ್ನು 2X31.5 ಎಂ.ವಿ.ಎ66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 11.5,01 ಪರಿವರ್ತಕ ಚಾಲನೆ–ಗೊಳಿಸ–ಲಾಗಿದೆ | 66 | ಬದಲಾಯಿಸುವುದು | 08–ಫೆಬ್ರವರಿ–2019 |
| 21 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ನೆಲಗದೇರನಹಳ್ಳಿ | 2X20 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 2X31.5 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 11.5,01 ಪರಿವರ್ತಕ ಚಾಲನೆ–ಗೊಳಿಸ–ಲಾಗಿದೆ | 66 | ಬದಲಾಯಿಸುವುದು | 12–ಆಗಸ್ಟ್–2018 |
| 22 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ರಾಜ್ ಮಹಲ್ ವಿಲಾಸ್ (ಆರ್.ಎಮ್.ವಿ) | 2X20 ಎಂ.ವಿ.ಎ ಪರಿವರ್ತಕವನ್ನು 2X31.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 11.5,01 ಪರಿವರ್ತಕ ಚಾಲನೆ–ಗೊಳಿಸ–ಲಾಗಿದೆ | 66 | ಬದಲಾಯಿಸುವುದು | 09–ಸೆಪ್ಟಂಬರ್–2018 |
| 23 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ಟೆಲಿಕಾಂ ಲೇವುಟ್ | 1X20 ಎಂ.ವಿ.ಎ ಪರಿವರ್ತಕವನ್ನು 1X31.5 ಎಂ.ವಿ.ಎ ಪರಿವರ್ತಕಕ್ಕೆ ಬದಲಾಯಿಸುವುದು | 11.5 | 66 | ಬದಲಾಯಿಸುವುದು | 04–ಡಿಸೆಂಬರ್–2018 |
| 24 | ಬೆ.ವಿ.ಸ ಕಂಪನಿ | ಚಿಕ್ಕಬಳ್ಳಾಪುರ | ಇರಗಂಪಲ್ಲಿ | 12.5 ಎಂ.ವಿ.ಎ ಪರಿವರ್ತಕವನ್ನು 20 ಎಂ.ವಿ.ಎ 66/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು | 7.5 | 66 | ಬದಲಾಯಿಸುವುದು | 10–ಡಿಸೆಂಬರ್–2018 |
| 25 | ಬೆ.ವಿ.ಸ ಕಂಪನಿ | ಚಿಕ್ಕಬಳ್ಳಾಪುರ | ವೈ. ಹುಣಸೇನಹಳ್ಳಿ | 1X6.3 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 1X12.5 ಎಂ.ವಿ.ಎ, 66/11 ಕೆವಿ. ಪರಿವರ್ತಕಕ್ಕೆ ಬದಲಾಯಿಸುವುದು | 6.2 | 66 | ಬದಲಾಯಿಸುವುದು | 01–ಜೂನ್–2018 |

| ಕ್ರ ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
|---|---|---|---|---|---|---|---|---|
| 26 | ಬೆ.ವಿ.ಸ ಕಂಪನಿ | ಚಿಕ್ಕಬಳ್ಳಾಪುರ | ಯೇನಿಗದೆಲೆ | 1X6.3 ಎಂ.ವಿ.ಎ 66/11 ಕೆವಿ ಪರಿವರ್ತಕವನ್ನು 1X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 6.2 | 66 | ಬದಲಾಯಿಸುವುದು | 02–ಜೂನ್–2018 |
| 27 | ಬೆ.ವಿ.ಸ ಕಂಪನಿ | ಕೋಲಾರ | ಅಡ್ಡಗಲ್ | 1X8 ಎಂ.ವಿ.ಎ 66/11 ಕೆವಿ ಪರಿವರ್ತಕವನ್ನು 1X20 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 12 | 66 | ಬದಲಾಯಿಸುವುದು | 28–ಜನವರಿ–2019 |
| 28 | ಬೆ.ವಿ.ಸ ಕಂಪನಿ | ಕೋಲಾರ | ಕ್ಯಾಲನೂರು | 1X8 ಎಂ.ವಿ.ಎ,66/11 ಕೆವಿ ಪರಿವರ್ತಕವನ್ನು 1X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 4.5 | 66 | ಬದಲಾಯಿಸುವುದು | 17–ನವೆಂಬರ್–2018 |
| 29 | ಬೆ.ವಿ.ಸ ಕಂಪನಿ | ಕೋಲಾರ | ಲಕ್ಷ್ಮೀಪುರ | 1X8 ಎಂ.ವಿ.ಎ,66/11 ಕೆವಿ ಪರಿವರ್ತಕವನ್ನು 1X12.5 ಎಂ.ವಿ.ಎ,66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 4.5 | 66 | ಬದಲಾಯಿಸುವುದು | 31–ಮೇ–2018 |
| 30 | ಬೆ.ವಿ.ಸ ಕಂಪನಿ | ಕೋಲಾರ | ಟಮಕ | 1X12.5 ಎಂ.ವಿ.ಎ,66/11 ಕೆವಿ ಪರಿವರ್ತಕವನ್ನು 1X20 ಎಂ.ವಿ.ಎ,66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 7.5 | 66 | ಬದಲಾಯಿಸುವುದು | 29–ಅಕ್ಟೋಬರ್–2018 |
| | | | | **ಒಟ್ಟು ಉಪ ಮೊತ್ತ (ಎಂವಿಎ)** | **163.9** | | | |
| **ಹಾಸನ ಪ್ರಸರಣ ವಲಯ** | | | | | | | | |
| 31 | ಮಂ.ವಿ.ಸ ಕಂಪನಿ | ದಕ್ಷಿಣ ಕನ್ನಡ | ಬಂಟ್ವಾಳ | ಹಾಲಿ ಇರುವ 10 ಎಂ.ವಿ.ಎ, 110/33 ಕೆವಿ ಪರಿವರ್ತಕವನ್ನು 20 ಎಂ.ವಿ.ಎ, 110/33 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 05–ಡಿಸೆಂಬರ್–2018 |
| 32 | ಮಂ.ವಿ.ಸ ಕಂಪನಿ | ದಕ್ಷಿಣ ಕನ್ನಡ | ನೆಟ್ಲಮಡ್ನೂರು | ಹೆಚ್ಚುವರಿ 1X10 ಎಂ.ವಿ.ಎ, 110/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 10 | 110 | ಹೆಚ್ಚುವರಿ | 19–ಜನವರಿ–2019 |
| 33 | ಮಂ.ವಿ.ಸ ಕಂಪನಿ | ದಕ್ಷಿಣ ಕನ್ನಡ | ವಿಟ್ಲಾ | 1X10 ಎಂ.ವಿ.ಎ,110/11 ಕೆವಿ ಮತ್ತು 1X10 ಎಂ.ವಿ.ಎ, 110/12.1 ಕೆವಿ ಪರಿವರ್ತಕವನ್ನು 2X20 ಎಂ.ವಿ.ಎ, 110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 20 | 110 | ಬದಲಾಯಿಸುವುದು | ಪರಿವರ್ತಕ 1 : 08–ಡಿಸೆಂಬರ್–2018 ಪರಿವರ್ತಕ 2 : 21–ಮಾರ್ಚ್–2019 |

| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
|---|---|---|---|---|---|---|---|---|
| 34 | ಚಾ.ವಿ.ಸ ಕಂಪನಿ | ಹಾಸನ | ಬಾಗೂರು | 8 ಎಂ.ವಿ.ಎ ಪರಿವರ್ತಕವನ್ನು 12.5 ಎಂ.ವಿ.ಎ 66/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 19–ಡಿಸೆಂಬರ್–2018 |
| 35 | ಚಾ.ವಿ.ಸ ಕಂಪನಿ | ಹಾಸನ | ಬೇಲೂರು | 1X6.3 ಎಂ.ವಿ.ಎ ಪರಿವರ್ತಕವನ್ನು 1X12.5 ಎಂ.ವಿ.ಎ, 66/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 6.2 | 66 | ಬದಲಾಯಿಸುವುದು | 02–ಫೆಬ್ರವರಿ–2019 |
| 36 | ಚಾ.ವಿ.ಸ ಕಂಪನಿ | ಹಾಸನ | ಚನ್ನರಾಯಪಟ್ಟಣ | 1X12.5 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 7.5 | 66 | ಬದಲಾಯಿಸುವುದು | 12–ಡಿಸೆಂಬರ್–2018 |
| 37 | ಚಾ.ವಿ.ಸ ಕಂಪನಿ | ಹಾಸನ | ರಾಮನಾಥಪುರ | 6.3 ಎಂ.ವಿ.ಎ ಪರಿವರ್ತಕವನ್ನು 12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 6.2 | 66 | ಬದಲಾಯಿಸುವುದು | 22–ಡಿಸೆಂಬರ್–2018 |
| 38 | ಚಾ.ವಿ.ಸ ಕಂಪನಿ | ಹಾಸನ | ಶಾಂತಿಗ್ರಾಮ | 2X8 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 2X12.5 ಎಂ.ವಿ.ಎ ಪರಿವರ್ತಕಕ್ಕೆ ಬದಲಾಯಿಸುವುದು | 4.5,01 ಪರಿವರ್ತಕ ಸ್ಥಾಪಿಸ–ಲಾಗಿದೆ | 66 | ಬದಲಾಯಿಸುವುದು | 17–ಡಿಸೆಂಬರ್–2018 |
| 39 | ಚಾ.ವಿ.ಸ ಕಂಪನಿ | ಹಾಸನ | ಸಿಂಗಾಪುರ | 8 ಎಂ.ವಿ.ಎ ಪರಿವರ್ತಕವನ್ನು 12.5 ಎಂ.ವಿ.ಎ 66/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 28–ಡಿಸೆಂಬರ್–2018 |
| 40 | ಮಂ.ವಿ.ಸ ಕಂಪನಿ | ಶಿವಮೊಗ್ಗ | ಕುಂಸಿ | 1X10 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ, 110/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 08–ಫೆಬ್ರವರಿ–2019 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **83.4** | | | |

| | | | | | | | | |
|---|---|---|---|---|---|---|---|---|
| **ಕಲಬುರಗಿ ಪ್ರಸರಣ ವಲಯ** | | | | | | | | |
| 41 | ಗು.ವಿ.ಕಂಪನಿ | ಬಳ್ಳಾರಿ | ಬಿಸಲಹಳ್ಳಿ | ಹೆಚ್ಚುವರಿ 1X20ಎಂ.ವಿ.ಎ, 110/33 ಕೆವಿ ಪರಿವರ್ತಕವನ್ನು ಅಳವಡಿಸುವ ಮೂಲಕ 33 ಕೆವಿ ಪರಿವರ್ತಕವನ್ನು ನಿರ್ಮಿಸುವುದು. | 20 | 110 | ಹೆಚ್ಚುವರಿ | 29–ಮಾರ್ಚ್–2019 |
| 42 | ಗು.ವಿ.ಕಂಪನಿ | ಬಳ್ಳಾರಿ | ಕಂಪ್ಲಿ | 1X10 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ, 110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 10 | 110 | ಬದಲಾಯಿಸುವುದು | 01–ಆಗಸ್ಟ್–2018 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **30** | | | |

| ಮೈಸೂರು ಪ್ರಸರಣ ವಲಯ | | | | | | | | |
|---|---|---|---|---|---|---|---|---|
| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
| 43 | ಚಾ.ವಿ.ಸ ಕಂಪನಿ | ಮಂಡ್ಯ | ಬಿ.ಜಿ.ಪುರ | 1X8 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 1X12.5 ಎಂ.ವಿ.ಎ, 110/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 27–ಆಗಸ್ಟ್–2018 |
| 44 | ಚಾ.ವಿ.ಸ ಕಂಪನಿ | ಮಂಡ್ಯ | ಹ್ಯೊಗೊನಹಳ್ಳಿ | ಹೆಚ್ಚುವರಿ 1X12.5 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 12.5 | 66 | ಹೆಚ್ಚುವರಿ | 26–ಫೆಬ್ರವರಿ–2019 |
| 45 | ಚಾ.ವಿ.ಸ ಕಂಪನಿ | ಮೈಸೂರು | ಹಾನಗೋಡು | 1X8 ಎಂ.ವಿ.ಎ ಪರಿವರ್ತಕವನ್ನು 1X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 4.5 | 66 | ಬದಲಾಯಿಸುವುದು | 19–ಜೂನ್–2018 |
| 46 | ಚಾ.ವಿ.ಸ ಕಂಪನಿ | ಮೈಸೂರು | ಮೇಘಲಾಪುರ | 1X8 ಎಂ.ವಿ.ಎ ಪರಿವರ್ತಕವನ್ನು 1X12.5 ಎಂ.ವಿ.ಎ, 66/11 ಕೆವಿ ಪರಿವರ್ತಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 07–ಜೂನ್–2018 |
| 47 | ಚಾ.ವಿ.ಸ ಕಂಪನಿ | ಮೈಸೂರು | ಸಂತೆಸರ್ಗೂರು | 2X6.3 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 2X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 6.2,01 ಪರಿವರ್ತಕ ಸ್ಥಾಪಿಸ–ಲಾಗಿದೆ | 66 | ಬದಲಾಯಿಸುವುದು | 10–ಜುಲೈ–2018 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **32.2** | | | |

| ತುಮಕೂರು ಪ್ರಸರಣ ವಲಯ | | | | | | | | |
|---|---|---|---|---|---|---|---|---|
| 48 | ಬೆ.ವಿ.ಸ ಕಂಪನಿ | ಚಿತ್ರದುರ್ಗ | ಜಾವಗೊಂಡನ–ಹಳ್ಳಿ | 2X6.3 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು 2X12.5 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 6.2,01 ಪರಿವರ್ತಕ ಸ್ಥಾಪಿಸ–ಲಾಗಿದೆ | 66 | ಬದಲಾಯಿಸುವುದು | 26–ಮಾರ್ಚ್–2019 |
| 49 | ಬೆ.ವಿ.ಸ ಕಂಪನಿ | ದಾವಣಗೆರೆ | ಚಿಲ್ಲೂರು | 1X8 ಎಂ.ವಿ.ಎ ವಿದ್ಯುತ್ ಪರಿವರ್ತಕ–2 66/11 ಕೆವಿಯನ್ನು 1X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 10–ಆಗಸ್ಟ್–2018 |
| 50 | ಬೆ.ವಿ.ಸ ಕಂಪನಿ | ದಾವಣಗೆರೆ | ಸಾಸುವೆಹಳ್ಳಿ | 1X6.3 ಎಂ.ವಿ.ಎ ಮತ್ತು 1X8 ಎಂ.ವಿ.ಎ ಪರಿವರ್ತಕವನ್ನು 2X12.5 ಎಂ.ವಿ.ಎ ಪರಿವರ್ತಕಕ್ಕೆ ಬದಲಾಯಿಸುವುದು. | 6.2,01 ಪರಿವರ್ತಕ ಸ್ಥಾಪಿಸ–ಲಾಗಿದೆ (6.3 ಯಿಂದ 12.5) | 66 | ಬದಲಾಯಿಸುವುದು | 01–ನವೆಂಬರ್–2018 |

| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆ. ವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
|---|---|---|---|---|---|---|---|---|
| 51 | ಬೆ.ವಿ.ಸ ಕಂಪನಿ | ದಾವಣಗೆರೆ | ತೆಲಗಿ | 2X6.3 ಎಂ.ವಿ.ಎ,66/11 ಕೆವಿ ಪರಿವರ್ತಕವನ್ನು 2X12.5 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 6.2,01 ಪರಿವರ್ತಕ ಸ್ಥಾಪಿಸ–ಲಾಗಿದೆ | 66 | ಬದಲಾಯಿಸುವುದು | 13–ಫೆಬ್ರವರಿ–2019 |
| 52 | ಬೆ.ವಿ.ಸ ಕಂಪನಿ | ತುಮಕೂರು | ಅಂಕಸಂದ್ರ | ಹೊಸ 1X8 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 8 | 66 | ಹೆಚ್ಚುವರಿ | 31–ಜನವರಿ–2019 |
| 53 | ಬೆ.ವಿ.ಸ ಕಂಪನಿ | ತುಮಕೂರು | ಗುಬ್ಬಿ | 3 ನೇ 10 ಎಂ.ವಿ.ಎ ಪರಿವರ್ತಕವನ್ನು 20 ಎಂ.ವಿ.ಎ 110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 08–ಆಗಸ್ಟ್–2018 |
| 54 | ಬೆ.ವಿ.ಸ ಕಂಪನಿ | ತುಮಕೂರು | ಹಾಲುಕುರ್ಕಿ | ಹೆಚ್ಚುವರಿ 1X10 ಎಂ.ವಿ.ಎ, 110/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 10 | 110 | ಹೆಚ್ಚುವರಿ | 16–ಮೇ–2018 |
| 55 | ಬೆ.ವಿ.ಸ ಕಂಪನಿ | ತುಮಕೂರು | ಕಲ್ಲೂರು | 1X10 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ 110/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 10 | 110 | ಬದಲಾಯಿಸುವುದು | 27–ಡಿಸೆಂಬರ್–2018 |
| 56 | ಬೆ.ವಿ.ಸ ಕಂಪನಿ | ತುಮಕೂರು | ಯಡವಾಣಿ | ಹೆಚ್ಚುವರಿ 1X12.5 ಎಂ.ವಿ.ಎ 66/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 12.5 | 66 | ಹೆಚ್ಚುವರಿ | 28–ಸೆಪ್ಟೆಂಬರ್–2018 |
| 57 | ಬೆ.ವಿ.ಸ ಕಂಪನಿ | ತುಮಕೂರು | ಹುಲಿಯಾರ್ | ಹೊಸ 1X10 ಎಂ.ವಿ.ಎ,110/11 ಕೆ ವಿ. ಪರಿವರ್ತಕವನ್ನು ಅಳವಡಿಸುವುದು | 10 | 110 | ಹೆಚ್ಚುವರಿ | 22–ಮಾರ್ಚ್–2019 |
| 58 | ಬೆ.ವಿ.ಸ ಕಂಪನಿ | ತುಮಕೂರು | ಕಿಬ್ಬನಹಳ್ಳಿ ಕ್ರಾಸ್ | ಹೆಚ್ಚುವರಿ 1X100 ಎಂ.ವಿ.ಎ, 220/110/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 100 | 220 | ಬಿಡಿ (ಬಳಸಿಕೊಳ್ಳಲಾಗಿದೆ.) | 26–ಫೆಬ್ರವರಿ–2019 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **183.6** | | | |
| **ಒಟ್ಟು (ಎಂವಿಎ)** | | | | | **773.10** | | | |

| ಉ) ಪ್ರಸರಣ ವಲಯವಾರು 2018–19ನೇ ಸಾಲಿನಲ್ಲಿ ಉಪಕೇಂದ್ರಗಳ ಉನ್ನತೀಕರಣಗೊಳಿಸಿದ ವಿವರ (ಬಿಡಿ ಪರಿವರ್ತಕ ಮತ್ತು ಪರಿವರ್ತಕಗಳ ವೋಲ್ಟೇಜ್ ವರ್ಗದಲದಲ್ಲಿ ಬದಲಾವಣೆ) | | | | | | | | |
|---|---|---|---|---|---|---|---|---|
| ಬೆಂಗಳೂರು ಪ್ರಸರಣ ವಲಯ | | | | | | | | |
| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
| 1 | ಬೆ.ವಿ.ಸ ಕಂಪನಿ | ಬೆಂಗಳೂರು ನಗರ | ಪೀಣ್ಯ | 1X100 ಎಂ.ವಿ.ಎ, 220/66 ಕೆವಿ ಬಿಡಿ (Spare) ಪರಿವರ್ತಕವನ್ನು ಅಳವಡಿಸುವುದು | 100 | 220 | ಬಿಡಿ ಭಾಗಗಳು | 12–ಜನವರಿ–2019 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **100** | | | |

| ಹಾಸನ ಪ್ರಸರಣ ವಲಯ | | | | | | | | |
|---|---|---|---|---|---|---|---|---|
| 2 | ಮಂ.ವಿ.ಸ ಕಂಪನಿ | ಚಿಕ್ಕಮಗಳೂರು | ಕಡೂರು | ಬಿಡಿ (Spare) 10 ಎಂ.ವಿ.ಎ 110/11 ಕೆವಿ ಪರಿವರ್ತಕವನ್ನು ಅಳವಡಿಸುವುದು. | 10 | 110 | ಬಿಡಿ ಭಾಗಗಳು | 07–ಮಾರ್ಚ್–2019 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **10** | | | |
| **ಒಟ್ಟು (ಎಂವಿಎ)** | | | | | **110.00** | | | |

| ಊ) 2017–18ನೇ ಸಾಲಿನಲ್ಲಿ ಉನ್ನತೀಕರಣಗೊಳಿಸಿದ ಉಪಕೇಂದ್ರಗಳಲ್ಲಿ 2ನೇ ಪರಿವರ್ತಕಗಳನ್ನು 2018–19ನೇ ಸಾಲಿನಲ್ಲಿ ಅಳವಡಿಸಿರುವ ವಿವರ | | | | | | | | |
|---|---|---|---|---|---|---|---|---|
| ಬೆಂಗಳೂರು ಪ್ರಸರಣ ವಲಯ | | | | | | | | |
| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆವಿ) | ಕೆಲಸದ ರೀತಿ | ಪೂರ್ಣಗೊಳ್ಳುವ ದಿನಾಂಕ |
| 1 | ಬೆ.ವಿ.ಸ ಕಂಪನಿ | ಬೆಂಗಳೂರು ಗ್ರಾಮೀಣ | ತ್ಯಾಮಗೊಂಡ್ಲು | 2X8 ಎಂ.ವಿ.ಎ ಪರಿವರ್ತಕವನ್ನು 2X20 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 12 | 66 | ಬದಲಾಯಿಸುವುದು | 21–ಜನವರಿ–2019 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **12** | | | |

| ಮೈಸೂರು ಪ್ರಸರಣ ವಲಯ | | | | | | | | |
|---|---|---|---|---|---|---|---|---|
| 2 | ಚಾ.ವಿ.ಸ ನಿಗಮ | ಮೈಸೂರು | ಬೈಲುಕುಪ್ಪೆ | 1. ಹೆಚ್ಚುವರಿ 1X8 ಎಂ.ವಿ.ಎ, 66/11 ಕೆವಿ ಪರಿವರ್ತಕವನ್ನು ಅಳವಡಿಸುವುದು.<br>2. 1X8 ಎಂ.ವಿ.ಎ ಪರಿವರ್ತಕವನ್ನು 1X12.5 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು | 8 | 66 | ಹೆಚ್ಚುವರಿ | 20–ಜೂನ್–2018 |
| 3 | ಚಾ.ವಿ.ಸ ನಿಗಮ | ಮೈಸೂರು | ರಾವಂದೂರು | 1. ಹೆಚ್ಚುವರಿ 1X8 ಎಂ.ವಿ.ಎ 66/11 ಕೆವಿ ಪರಿವರ್ತಕವನ್ನು ಅಳವಡಿಸುವುದು<br>2. 1X8 ಎಂ.ವಿ.ಎ ಪರಿವರ್ತಕವನ್ನು 1X12.5 ಎಂ.ವಿ.ಎ, 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 8 | 66 | ಹೆಚ್ಚುವರಿ | 20–ಜೂನ್–2018 |
| **ಒಟ್ಟು ಉಪ ಮೊತ್ತ (ಎಂವಿಎ)** | | | | | **16** | | | |

| ತುಮಕೂರು ಪ್ರಸರಣ ವಲಯ | | | | | | | | |
|---|---|---|---|---|---|---|---|---|
| ಕ್ರ. ಸಂ | ವಿದ್ಯುತ್ ಸರಬರಾಜು ಕಂಪನಿ | ಜಿಲ್ಲೆಗಳು | ಉಪಕೇಂದ್ರದ ಹೆಸರು | ಸಾಮರ್ಥ್ಯ | ಎಂ.ವಿ.ಎ | ವೋಲ್ಟೇಜ್ (ಕೆವಿ) | ಕೆಲಸದ ರೀತಿ | ಚಾಲನೆಗೊಂಡ / ಪೂರ್ಣಗೊಂಡ ದಿನಾಂಕ |
| 4 | ಬೆವಿಸ ಕಂಪನಿ | ದಾವಣಗೆರೆ | ಉಚ್ಚಂಗಿದುರ್ಗ | 2X8 ಎಂ.ವಿ.ಎ ಪರಿವರ್ತಕವನ್ನು 2X12.5 ಎಂ.ವಿ.ಎ 66/11 ಕೆವಿ ಪರಿವರ್ತಕಕ್ಕೆ ಬದಲಾಯಿಸುವುದು. | 4.5 | 66 | ಬದಲಾಯಿಸುವುದು | 09–ಆಗಸ್ಟ್–2018 |
| ಒಟ್ಟು ಉಪ ಮೊತ್ತ (ಎಂವಿಎ) | | | | | **4.5** | | | |
| ಒಟ್ಟು (ಎಂವಿಎ) | | | | | **32.5** | | | |

**ಕ.ವಿ.ಪ್ರ.ನಿ.ನಿ. ಸ್ಕಾಡ ಮತ್ತು ಸಂಪರ್ಕ ವ್ಯವಸ್ಥೆ:**

ಕ.ವಿ.ಪ್ರ.ನಿ.ನಿ. ಯಲ್ಲಿ 1066 ವಿದ್ಯುತ್ ಕೇಂದ್ರಗಳಿಂದ ಸ್ಕಾಡ ಮೂಲಕ ಮಾಹಿತಿಯನ್ನು ಮಾಸ್ಟರ್ ಕಂಟ್ರೋಲ್ ಸೆಂಟರ್‌ನಲ್ಲಿ(ಎಂ.ಸಿ.ಸಿ.) ಪಡೆಯಲಾಗುತ್ತಿದೆ. ಇದರಲ್ಲಿ 66ಕೆ.ವಿ., 110ಕೆ.ವಿ. 220ಕೆ.ವಿ. ಮತ್ತು 400ಕೆ.ವಿ. ಉಪಕೇಂದ್ರಗಳು ಮತ್ತು ಸ್ವೀಕರಣಾ ಕೇಂದ್ರಗಳು, ಪ್ರಮುಖ ವಿದ್ಯುತ್ ಉತ್ಪಾದನಾ ಕೇಂದ್ರಗಳು ಸೇರಿರುತ್ತವೆ. ಎಸ್ಕಾಂ ವ್ಯಾಪ್ತಿಗೆ ಒಳಪಡುವ 286 ಸಂಖ್ಯೆ 33 ಕೆ.ವಿ. ಉಪಕೇಂದ್ರಗಳಿಗೂ ಸಹ ಸ್ಕಾಡಾ ವ್ಯವಸ್ಥೆ ಕಲ್ಪಿಸಲಾಗಿದೆ.

ಈ ಯೋಜನೆಯನ್ನು ರೂ.246.38 ಕೋಟಿ ವೆಚ್ಚದಲ್ಲಿ (ಮೊದಲನೇ ಹಂತ ರೂ.189.73 ಕೋಟಿ + ಎರಡನೇ ಹಂತ ರೂ.56.65 ಕೋಟಿ) ಅನುಷ್ಠಾನಗೊಳಿಸಲಾಗಿದ್ದು, ಇದರಲ್ಲಿ ರೂ.187.96 ಕೋಟಿ ಕವಿಪ್ರನಿನಿಗೆ ಸಂಬಂಧಿಸಿದ ಕೆಲಸಗಳಿಗೆ ಮತ್ತು ರೂ.58.42 ಕೋಟಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಕೆಲಸಗಳಿಗೆ ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯನ್ನು ಡಿಸೆಂಬರ್–2006 ರಲ್ಲಿ ಪ್ರಾರಂಭಿಸಿದ್ದು, ಮೊದಲನೆ ಹಂತದಲ್ಲಿ ಕವಿಪ್ರನಿನಿಯ 588 ಕೇಂದ್ರಗಳು, 6 ಪ್ರಾದೇಶಿಕ ನಿಯಂತ್ರಣ ಕೇಂದ್ರಗಳು, 5 ಪ್ರಾದೇಶಿಕ ವಿತರಣಾ ನಿಯಂತ್ರಣಾ ಕೇಂದ್ರಗಳು ಮತ್ತು 286 ಸಂಖ್ಯೆಯ 33ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳು ಒಳಗೊಂಡಿರುತ್ತದೆ. ಎರಡನೇ ಹಂತದ ಯೋಜನೆಯಲ್ಲಿ ಕವಿಪ್ರನಿನಿಯ 390 ವಿದ್ಯುತ್ ವಿತರಣಾ ಕೇಂದ್ರಗಳು ಮತ್ತು 28 ಎಸ್.ಎ.ಎಸ್ ಕೇಂದ್ರಗಳು ಒಳಗೊಂಡಿರುತ್ತದೆ.

ವಿದ್ಯುತ್ ಉತ್ಪಾದನೆಯ ಪೂರ್ಣ ವಾಸ್ತವಿಕ ಮಾಹಿತಿ ಮತ್ತು ಪ್ರಸರಣ ಜಾಲದ ಮಾಹಿತಿಯು ಬೆಂಗಳೂರು ಆನಂದರಾವ್ ವೃತ್ತದಲ್ಲಿರುವ ಮಾಸ್ಟರ್ ಕಂಟ್ರೋಲ್ ಕೇಂದ್ರದಲ್ಲಿ ಲಭ್ಯವಿರುವುದರಿಂದ ರಾಜ್ಯ ವಿದ್ಯುತ್ ರವಾನೆ ಕೇಂದ್ರವು ದೈನಂದಿನ ಕಾರ್ಯಾಚರಣೆ ಮಾಡಲು ಅನುಕೂಲವಾಗುತ್ತದೆ. ರಾಜ್ಯ ವಿದ್ಯುತ್ ರವಾನೆ ಕೇಂದ್ರದ ಪ್ರಧಾನ ನಿಯಂತ್ರಣಾ ಕೇಂದ್ರದಿಂದ ರಾಜ್ಯದ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳ ಮತ್ತು ವಿದ್ಯುತ್ ಪ್ರಸರಣಾ ಕೇಂದ್ರಗಳ ವ್ಯವಸ್ಥೆಯನ್ನು ವಾಸ್ತವಿಕ ಸಮಯದಲ್ಲಿ(ರಿಯಲ್‌ಟೈಂನಲ್ಲಿ) ವೀಕ್ಷಿಸಬಹುದಾಗಿರುತ್ತದೆ. ವಾಸ್ತವಿಕ ಸಮಯದ ವೀಕ್ಷಣಾ ವ್ಯವಸ್ಥೆಯಿಂದ ಗ್ರಿಡ್ ಆಪರೇಷನ್ ಮತ್ತು ಲೋಡ್ ಮ್ಯಾನೇಜ್‌ಮೆಂಟ್ ಮಾಡಲು ಅನುಕೂಲವಾಗುತ್ತಿದೆ.

ವಿದ್ಯುತ್ ಉತ್ಪಾದನೆಯ ಕೊರತೆಯ ಸಂದರ್ಭದಲ್ಲಿ ವಿತರಣೆಯಾದ 3 ಫೇಸ್ ಹಾಗೂ ಸಿಂಗಲ್ ಫೇಸನ ಪೂರ್ಣ ವಿವರಗಳನ್ನು ಸ್ಕಾಡಾ ವ್ಯವಸ್ಥೆಯಿಂದ ವೀಕ್ಷಿಸಬಹುದು. ದಕ್ಷಿಣ ಗ್ರಿಡ್ ನಲ್ಲಿ ವಿದ್ಯುತ್ ಕೊರತೆಯಿದ್ದಾಗ, ಅಂತರ ರಾಜ್ಯಗಳ ನಡುವೆ ವಿದ್ಯುತ್ ಪಡೆಯುವ ಗ್ರಿಡ್ ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿದ್ಯುತ್ ರವಾನೆ ಕೇಂದ್ರಕ್ಕೆ ಸ್ಕಾಡಾ ವೀಕ್ಷಣೆಯಿಂದ ಅನೂಕೂಲವಾಗುತ್ತದೆ. ಕಳೆದ 5 ವರ್ಷಗಳಿಂದ ಸಮರ್ಪಕವಾಗಿ ಗ್ರಿಡ್ ನಿರ್ವಹಣೆ ಮಾಡಿರುವುದರಿಂದ ದಕ್ಷಿಣ ವಲಯ ವಿದ್ಯುತ್ ಸಮಿತಿಯವರು ಕ.ವಿ.ಪ್ರ.ನಿ.ನಿ. ಯನ್ನು ಶ್ಲಾಘಿಸಿರುತ್ತಾರೆ.

ಎಲ್ಲಾ ಐದು (5) ಎಸ್ಕಾಂಗಳ ಕೇಂದ್ರ ಸ್ಥಾನದಲ್ಲಿ ವಿತರಣಾ ನಿಯಂತ್ರಣಾ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ ಎಸ್ಕಾಂಗಳು ವಿದ್ಯುತ್ ಹೊರೆಯನ್ನು ಸ್ವತಂತ್ರ್ಯವಾಗಿ ನಿರ್ವಹಿಸುತ್ತಿವೆ.

ಕೆ.ಇ.ಆರ್.ಸಿ ಅಗತ್ಯತೆಯಂತೆ ಎಸ್ಕಾಂವಾರು ನಿಖರವಾದ ವಾಸ್ತವ ಹೊರೆ ಮತ್ತು ಬಳಕೆಯನ್ನು ಲೆಕ್ಕಾಚಾರ ಮಾಡಿ ರಾಜ್ಯದ ಆಂತರಿಕ ABT ಯಲ್ಲಿ ಸೇರ್ಪಡಿಸಿ UI ಬಿಲ್ಲುಗಳನ್ನು ತಯಾರಿಸಲಾಗುತ್ತಿದೆ.

ಸ್ಕಾಡ ವ್ಯವಸ್ಥೆಯಲ್ಲಿ ಈ ಕೆಳಕಂಡ ಮಾಹಿತಿಗಳು ಮತ್ತು ನಿಯಂತ್ರಣಗಳು ಲಭ್ಯವಿರುತ್ತದೆ :

- ಸ್ವತಂತ್ರ ವಿದ್ಯುತ್ ಉತ್ಪಾದಕರು (ಐ.ಪಿ.ಪಿ.) ಯವರು ರಾಜ್ಯದ ಗ್ರಿಡ್‌ಗೆ ಸೇರ್ಪಡಿಸುವ ವಿದ್ಯುತ್ ಮಾಹಿತಿ ಮತ್ತು ನಿಯಂತ್ರಣ.
- 220 ಕೆ.ವಿ. ವಿದ್ಯುತ್ ಉಪ ಕೇಂದ್ರ ಮತ್ತು ವಿದ್ಯುತ್ ಉತ್ಪಾದನಾ ಘಟಕಗಳ ಹಾಗೂ ಪವನಶಕ್ತಿ, ಸೌರ ಶಕ್ತಿಯ ಮಾಹಿತಿಗಳನ್ನು ಎಸ್.ಆರ್.ಎಲ್.ಡಿ.ಸಿ. ಯೊಂದಿಗೆ ಸಿ.ಇ.ಆರ್.ಸಿ. ಪ್ರಕಾರ ಹಂಚಿಕೊಳ್ಳಲಾಗುತ್ತಿದೆ.
- 11 ಕೆ.ವಿ. ಯವರೆಗಿನ ಫೀಡರ್‌ಗಳ ದಿನನಿತ್ಯ ವರದಿ.
- ರಾಜ್ಯದ ಆಂತರಿಕ ಎ.ಬಿ.ಟಿ. ಕಾರ್ಯವೈಖರಿಯ ಸಂಕ್ಷಿಪ್ತ ನೋಟ.
- ಎಲ್ಲಾ ಎಸ್ಕಾಂಗಳ ವಾಸ್ತವಿಕ ಸಮಯದ ಮೇಲ್ವಿಚಾರಣೆಯ ವ್ಯವಸ್ಥೆ.
- ಎಲ್ಲಾ 11 ಕೆ.ವಿ. ಯಿಂದ 400 ಕೆ.ವಿ. ವರೆಗೆ ವಿದ್ಯುತ್‌ಛೇದಕ (ಬ್ರೇಕರ್) ಕಾರ್ಯಾಚರಣೆ.
- ಅನಿವಾರ್ಯ ಸಂಧರ್ಭಗಳಲ್ಲಿ ಎಲ್ಲಾ 11 ಕೆ.ವಿ. ಮತ್ತು 66 ಕೆ.ವಿ. ಮಟ್ಟದಲ್ಲಿ ವಿದ್ಯುತ್ ನಿಲುಗಡೆಯನ್ನು ಮಾಡಬಹುದಾಗಿದೆ.

ಆರು(6) ಪ್ರಾದೇಶಿಕ ವಿದ್ಯುತ್‌ರವಾನೆ ಕೇಂದ್ರಗಳನ್ನು ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಗುಲ್ಬರ್ಗ ಪ್ರಸರಣ ವಲಯಗಳಲ್ಲಿ ಸ್ಥಾಪಿಸಲಾಗಿದ್ದು, ಇಲ್ಲಿಂದ ಆ ಕೇಂದ್ರ ವ್ಯಾಪ್ತಿಯ ಪ್ರಸರಣ ಜಾಲದ ಸ್ಥಿರತೆ ಮತ್ತು ಹೊರೆ ನಿರ್ವಹಣೆ ಮಾಡಲಾಗುತ್ತಿದೆ.

ಪರಿಣಾಮಕಾರಿಯಾಗಿ ವಿದ್ಯುತ್ ವ್ಯವಸ್ಥೆಯನ್ನು ನಿರ್ವಹಿಸಲು ಪರೀಕ್ಷಾರ್ಥಕವಾಗಿ ಬೆಂಗಳೂರು ನಗರದಲ್ಲಿ 6 ಉಪಕೇಂದ್ರಗಳನ್ನು ಸ್ಕಾಡ ತಾಂತ್ರಿಕತೆಯಿಂದ ದೂರಸ್ಥ ಕಾರ್ಯಾಚರಣೆ (ರಿಮೋಟ್ ಆಪರೇಷನ್) ಮಾಡಲಾಗಿದೆ

ಸ್ಕಾಡ ವ್ಯವಸ್ಥೆಯಿಂದ ವಿಶೇಷ ರಕ್ಷಣಾ ವಿಧಾನ (Special Protection Scheme) ವನ್ನು ಪ್ರಮುಖ ಉತ್ಪಾದನೆ ಮತ್ತು ಮಾರ್ಗಗಳ ಗ್ರಿಡ್ ರಕ್ಷಣೆಗಾಗಿ ಅಳವಡಿಸಲಾಗಿದೆ.

ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (CERC) ನಿರ್ದೇಶನ ಪೂರೈಸಲು SCADA ಅನುಷ್ಠಾನದೊಂದಿಗೆ ಪವರ್‌ಲೈನ್ ಕ್ಯಾರಿಯರ್ ಮತ್ತು ಪ್ರೋಗ್ರಾಮೆಬಲ್ ತರ್ಕ ನಿಯಂತ್ರಕಗಳನ್ನು ಬಳಸಿಕೊಂಡು 4 ಪ್ರಸರಣ ಕಾರಿಡಾರ್‌ನಲ್ಲಿ ಕೋಡಂಕುಲಮ್ ಉತ್ಪಾದನೆ ಸ್ಥಗಿತವಾದ್ದಲ್ಲಿ 367MW, ರಾಯಚೂರು-ಸೊಲ್ಲಾಪುರದ 765KV ಮಾರ್ಗ ಸ್ಥಗಿತವಾದ್ದಲ್ಲಿ 198 MW ವಿದ್ಯುತ್ ಹೊರೆಯ ಒತ್ತಡವನ್ನು ಸ್ವಯಂಚಾಲಿತವಾಗಿ ನಿಯಂತ್ರಿಸಲು ವಿಶೇಷ ರಕ್ಷಣಾ ಯೋಜನೆಯನ್ನು ರೂಪಿಸಲಾಗಿದೆ. ಹಾಗೂ ತರ್ಕ ನಿಯಂತ್ರಕಗಳಿಂದ ಗ್ರಿಡ್ ಅನಿಶ್ಚಯತೆ ಸಮಯದಲ್ಲಿ ಆದ್ಯತೆ ಇಲ್ಲದ ಲೋಡ್‌ಗಳನ್ನು CERC ನಿರ್ದೇಶನದಂತೆ ನಿಯಂತ್ರಿಸಲು ಅಳವಡಿಸಲಾಗಿದೆ. ವಿವಿಧ ಮಾದರಿಯ ಉಪಕೇಂದ್ರಗಳ ಯಾಂತ್ರೀಕರಣವನ್ನು (SAS) ಕೆಪಿಟಿಸಿಎಲ್ SCADA ವ್ಯವಸ್ಥೆಗೆ ಸಂಯೋಜನೆ ಮಾಡಲಾಗಿದೆ.

ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಸ್ಕಾಡಾ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಎ.ಡಿ.ಎಂ.ಎಸ್.ನ್ನು ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿರುವ 11 ಕೆ.ವಿ. ಫೀಡರ್‌ಗಳನ್ನು ಅಧಿಕ ವಿದ್ಯುತ್ ಬಳಕೆಯಾಗುವ ಪರಿಸ್ಥಿತಿಯಲ್ಲಿ ಸ್ವಯಂ ಚಾಲಿತ (ಆಟೋಮ್ಯಾಟಿಕ್) ನಿಲುಗಡೆ (ಟ್ರಿಪ್) ಮಾಡುವ ವ್ಯವಸ್ಥೆಯಿದ್ದು, 2014-15ನೇ ಸಾಲಿನಿಂದ ಪ್ರತಿ ವಿದ್ಯುತ್ ಸರಬರಾಜು ಕಂಪನಿಯ ಅಧಿಕ ವಿದ್ಯುತ್ ಬಳಕೆಯನ್ನು ಆಧರಿಸಿ ನಿಲುಗಡೆ ಮಾಡಲಾಗುತ್ತಿದೆ.

49.8 ಹರ್ಡ್‌ಜ್‌ಕ್ಕಿಂತ ಕಡಿಮೆಯಾಗುವ ಫ್ರೀಕ್ವೆನ್ಸಿಯನ್ನು ಸ್ವಯಂಚಾಲಿತವಾಗಿ ಪತ್ತೆ ಹಚ್ಚುವ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ಗುರುತಿಸಿದ 11 ಕೆ.ವಿ. ಫೀಡರ್‌ಗಳಿಗೆ ಸ್ವಯಂಚಾಲಿತವಾಗಿ ವಿದ್ಯುತ್ ನಿಲುಗಡೆಯಾಗುವ ವ್ಯವಸ್ಥೆಯನ್ನು **"Round Robin"** ಮಾದರಿಯಲ್ಲಿ ಮಾಡಲಾಗುತ್ತಿದೆ ಹಾಗೂ ಭಾರತ ದೇಶದಲ್ಲಿಯೇ ಕ.ವಿ.ಪ್ರ.ನಿ.ನಿ.ಯು ಎ.ಡಿ.ಎಂ.ಎಸ್. ನಿರ್ವಹಣೆಯನ್ನು 11 ಕೆ.ವಿ. ಫೀಡರ್‌ಗಳ ಹಂತದಲ್ಲಿ ಮಾಡುತ್ತಿರುವ ಏಕೈಕ ಸಂಸ್ಥೆಯಾಗಿದೆ.

ನೈಜ ಸಮಯದಲ್ಲಿ ಮಾಹಿತಿಯನ್ನು ಕವಿಪ್ರನಿನಿ ಎಸ್‌ಎಲ್‌ಡಿಸಿ ಜಾಲತಣದಲ್ಲಿ ಅಪ್ಲೋಡ್ ಮಾಡಲಾಗುತ್ತಿದೆ. ಇದರಿಂದ ಎಲ್ಲಾ ಸಮಯದಲ್ಲಿ ಗ್ರಿಡ್ ಮೇಲ್ವಿಚಾರಣೆಗೆ ಸಹಾಯವಾಗುತ್ತದೆ ಹಾಗೂ ನೆಟ್ವರ್ಕ್ ಸ್ಥಿತಿಯನ್ನು ತಿಳಿಯಲು ವಿದ್ಯುತ್ ಕ್ಷೇತ್ರದಲ್ಲಿ ಸಹಾಯ ಮಾಡುವ ಜಾಲತಾಣ ಇದಾಗಿದೆ.

ಕೇಂದ್ರ ವಿದ್ಯುತ್ ಪ್ರಾಧಿಕಾರವು ಸ್ಕಾಡ ಮತ್ತು ಸಂವಹನದ ಬಗೆಗಿನ ಚರ್ಚೆಯ ಸಮಯದಲ್ಲಿ ಕವಿಪ್ರನಿನಿಯ ಸ್ಕಾಡಾ ಮಾದರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ ಮತ್ತು ಕೇಂದ್ರ ವಿದ್ಯುತ್ ಪ್ರಾಧಿಕಾರವು ಕವಿಪ್ರನಿನಿಯ ಮಾದರಿ ಮತ್ತು ಅನುಭವಗಳನ್ನು ಭಾರತದ ಇತರ ರಾಜ್ಯಗಳ ಜೊತೆಯಲ್ಲಿ ಹಂಚಿಕೊಳ್ಳಲು ಕೋರಿರುತ್ತಾರೆ.

ಕ.ವಿ.ಪ್ರ.ನಿ.ನಿ.ಯ ಸ್ಕಾಡ ವ್ಯವಸ್ಥೆಯನ್ನು ದೇಶದ ಹಲವು ತಜ್ಞರು ಪ್ರಶಂಸಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಭಾರತ ಸರ್ಕಾರದ ಇಂಧನ ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷರು, ಕೇಂದ್ರ ವಿದ್ಯುತ್ ಪ್ರಾಧಿಕಾರದ ನಿರ್ದೇಶಕರು, ಹೆಡ್ ಆಪರೇಷನ್ಸ್ ಟಾಟಾ ಪವರ್ ಮುಂಬೈ, ಯು.ಪಿ.ಸಿ.ಎಲ್‌ನ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಪವರ್ ಗ್ರಿಡ್, ಸಿ.ಪಿ.ಆರ್.ಐ.ನ ಡೈರಕ್ಟರ್ ಜನರಲ್, ಮುಖ್ಯ ಸಲಹೆಗಾರರು ಸ್ಕಾಡಾ ರಿಲೆಯನ್ಸ್ ಎನರ್ಜಿ. ಮುಂದುವರೆದಂತೆ ಇತರೆ ವಿದ್ಯುತ್ ವಿತರಣಾ ಬಳಕೆಯ ಸಂಸ್ಥೆಗಳು ಕ.ವಿ.ಪ್ರ.ನಿ.ನಿ.ಯ ಸ್ಕಾಡಾ ವ್ಯವಸ್ಥೆಯನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಆಸಕ್ತಿ ತೋರಿಸಿರುತ್ತಾರೆ.

ಕ.ವಿ.ಪ್ರ.ನಿ.ನಿ.ಯು ಸ್ಕಾಡಾ ಯೋಜನೆಯ ಅಳವಡಿಕೆಯಿಂದ ವಿದ್ಯುತ್ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ ಮತ್ತು ಈ ಕೆಳಗಿನ ವಿಷಯದಲ್ಲಿ ದೇಶದಲ್ಲೇ ಅನನ್ಯತೆ ಹೊಂದಿದೆ.

- ಕವಿಪ್ರನಿನಿಯು ದೇಶದಲ್ಲಿಯೇ ಅತ್ಯಂತ ಬೃಹತ್ ಸ್ಕಾಡಾ ಜಾಲ ಮತ್ತು ನಿಯಂತ್ರಣ ಕೇಂದ್ರಗಳನ್ನು ಹೊಂದಿದೆ.
- ಕವಿಪ್ರನಿನಿಯು ತನ್ನದೇ ಆದ ಸ್ವತಂತ್ರ ವಿ–ಸ್ಯಾಟ್ ಕಾರ್ಯಜಾಲ ಹೊಂದಿದ್ದು ಇದರ ಸಹಾಯದಿಂದ ಸ್ಕಾಡ ಮಾಹಿತಿಯನ್ನು ವಾಸ್ತವಿಕವಾಗಿ ಕ್ಷಣಾರ್ಧದಲ್ಲೇ ತಿಳಿಯಬಹುದಾಗಿದೆ.
- ದೇಶದಲ್ಲಿಯೇ ಕವಿಪ್ರನಿನಿ ಮತ್ತು ಎಸ್ಕಾಂಗಳು ರಾಜ್ಯದ ವಿದ್ಯುತ್ ಅವಶ್ಯಕತೆಗೆ ಅನುಗುಣವಾಗಿ ಸ್ವತಂತ್ರ ನಿಂಯತ್ರಣ ಕೇಂದ್ರಗಳನ್ನು ಹೊಂದಿದೆ.
- ರಾಜ್ಯದ ವಿದ್ಯುತ್ ಬಳಕೆ ಸಂಬಂಧ ಕವಿಪ್ರನಿನಿ ಮತ್ತು ಎಸ್ಕಾಂಗಳು ತನ್ನದೆ ಆದ ಸ್ವತಂತ್ರ ನಿಂಯತ್ರಣ ಕೇಂದ್ರಗಳನ್ನು ಹೊಂದಿದ್ದು ಸಮಗ್ರ ಮಾಹಿತಿಯನ್ನು ನೀಡುವ ಸ್ವಯಂಚಾಲಿತ ವ್ಯವಸ್ಥೆ ಹೊಂದಿದ್ದು ಇದು ಇಡೀ ದೇಶದಲ್ಲೇ ಪ್ರಥಮವಾಗಿರುತ್ತದೆ.
- ಕವಿಪ್ರನಿನಿಯು ವಿಪತ್ತು ನಿರ್ವಹಣೆ ಸಂಬಂಧ ಪ್ರಧಾನ ನಿಂಯತ್ರಣ ಕೇಂದ್ರವನ್ನು ಹೊಂದಿರುತ್ತದೆ.
- ಕವಿಪ್ರನಿನಿ ಸಂಸ್ಥೆಯು ರಾಜ್ಯದಲ್ಲಿನ ನವೀಕರಿಸಬಹುದಾದ ಇಂಧನ ಮೂಲದ ಉತ್ಪಾದನ ಕೇಂದ್ರಗಳ ಮೇಲ್ವಿಚಾರಣಾ ಸೌಲಭ್ಯ ಹೊಂದಿರುತ್ತದೆ.

ಸಂವಹನ ಮೂಲಸೌಕರ್ಯವನ್ನು ಸುಧಾರಿಸುವ ಕಡೆಗೆ ರಾಷ್ಟ್ರೀಯ ನೀತಿಯ ಒಂದು ಭಾಗವಾಗಿ ಸಂವಹನ ಜಾಲವನ್ನು ಬಲಪಡಿಸುವ ಸಲುವಾಗಿ ಸ್ಕಾಡ, ಕವಿಪ್ರನಿನಿಯ ಉದ್ದೇಶಿತ ಕಾರ್ಯಯೋಜನೆಗಳು:

1. ಉತ್ತಮ ಸಂವಹನೆಗಾಗಿ ರಾಜ್ಯದ ಎಲ್ಲಾ ಉತ್ಪಾದನಾ ಕೇಂದ್ರಗಳು ಹಾಗೂ 400ಕೆವಿ ಮತ್ತು 220ಕೆವಿ ಸ್ವೀಕರಣಾ ಕೇಂದ್ರಗಳನ್ನು ಸಂಪರ್ಕಿಸಲು 6000ಕಿ.ಮಿ ಮಾರ್ಗಕ್ಕೆ ಆಪ್ಟಿಕಲ್ ಗ್ರೌಂಡ್ ವೈರನ್ನು ಅಳವಡಿಸಲು ವಿದ್ಯುತ್‌ಕ್ಷೇತ್ರ ಅಭಿವೃದ್ಧಿ ನಿಧಿಯ ಅನುದಾನದಲ್ಲಿ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ.
2. 188ಸಂಖ್ಯೆಯ RTUಗಳು ಮತ್ತ 83 ಸಂಖ್ಯೆಯ VSAT ಉಪಕರಣಗಳನ್ನು ಹೊಸದಾಗಿ ಕಾರ್ಯಾರಂಭಗೊಂಡ ಉಪಕೇಂದ್ರಗಳಲ್ಲಿ ಅಳವಡಿಸಲು ಕಾರ್ಯಾಪ್ರೇಷಣೆ ನೀಡಲಾಗಿದೆ.
3. ಫೇಸರ್ ಮಾಪನ ಘಟಕಗಳನ್ನು (Phasor Measurement Units) 400 ಕೆ.ವಿ ನೆಲಮಂಗಲ, ಗುತ್ತೂರು ಮತ್ತು ರಾಯಚೂರು ವಿದ್ಯುತ್ ಕೇಂದ್ರಗಳಲ್ಲಿ URTDSM ಹಂತ–1 ರ ಯೋಜನೆಯ ಅಡಿಯಲ್ಲಿ ಅಳವಡಿಸಲಾಗಿದೆ. ಈ ಸಂಬಂಧ ಮಾಹಿತಿಗಳು ಫೇಸರ್ ಡಾಟಾ ಕಾನ್ಸ್‌ಟ್ರೇಟರ್ ಮೂಲಕ ರಾಜ್ಯ ವಿದ್ಯುತ್ ರವಾನೆ ಕೇಂದ್ರದಲ್ಲಿ ಲಭ್ಯವಿದೆ.
4. ನವೀಕರಿಸಬಹುದಾದ ಇಂಧನ ನಿರ್ವಹಣಾ ಕೇಂದ್ರ (REMC)ದ ಸ್ಥಾಪನಾ ಕಾರ್ಯವು ಮುಕ್ತಾಯ ಹಂತದಲ್ಲಿದ್ದು, ಪರಿಕ್ಷೇಗಳು ಪ್ರಗತಿಯಲ್ಲಿದೆ.

5. ವೇಳಾಪಟ್ಟಿ, ಲೆಕ್ಕಪತ್ರ, ಮಾಪಕ ಮತ್ತು ಒಪ್ಪಂದ ವಹಿವಾಟು (Scheduling Accounting Metering &Settlement of Transaction-SAMAST) ಕಾರ್ಯದ ಅನುಷ್ಠಾನಕ್ಕಾಗಿ ವಿಸ್ತೃತ ಯೋಜನಾ ವರದಿ ಅನ್ನು PSDFಗೆ ಅನುದಾನಕ್ಕಾಗಿ ಸಲ್ಲಿಸಲಾಗಿದೆ.

6. 15000 ಸಂಖ್ಯೆಯ ಮಧ್ಯವರ್ತಿ ಬಿಂದುಗಳು (Interface Point) ಮತ್ತು 11ಕೆವಿ ಫೀಡರ್‌ಗಳ ಮಾಪಕಗಳನ್ನು DLMS ವಿದ್ಯುತ್ ಮಾಪಕಗಳಿಗೆ ಬದಲಾಯಿಸುವ ಕಾರ್ಯಕ್ಕೆ ಕಾರ್ಯಾಪ್ರೇಷಣೆ ನೀಡಲಾಗಿದೆ. MDASಗಾಗಿ ಎಲ್ಲಾ ಉತ್ಪಾದನಾ ಮತ್ತು ಉಪಕೇಂದ್ರಗಳಿಗೆ ಡೇಟಾ ಕಾನ್ಸ್‌ನ್‌ಟ್ರೇಟರ್ ಯುನಿಟ್ (DCUs)ಗಳನ್ನು ಅಳವಡಿಸುವ ಕಾರ್ಯದ ಸಲುವಾಗಿ ಕರ್ನಾಟಕ ರಾಜ್ಯಕ್ಕೆ Rural Electrification Corporation ಅವರು DCUಗಳನ್ನು ಸರಬರಾಜು ಮಾಡಲಿದ್ದಾರೆ.

**ಆರ್ಥಿಕ ವರ್ಷ 2018–19ರಲ್ಲಿ ಉ.ಪ್ರ.ವ್ಯ(ತಾ) ರವರ ಶಾಖೆಯಿಂದ ಹೊರಡಿಸಲಾದ ಆದೇಶ/ಸುತ್ತೋಲೆಗಳು.**

1. ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85–86 ದಿನಾಂಕ 03.04.2018ರಲ್ಲಿ "ಡಿಡಬ್ಲ್ಯೂಎ ನಲ್ಲಿ ನೀಡಲಾದ ಸಾಮಾಗ್ರಿ ಹಾಗೂ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಪ್ರಮಾಣದ ವ್ಯತ್ಯಾಸಗಳಿಗೆ ಅನುಮೊದನೆ ನೀಡುವ ಅಧಿಕಾರ".
2. ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85–86 ದಿನಾಂಕ 27.06.2018ರಲ್ಲಿ "ಕವಿಪ್ರನಿನಿ ಯಿಂದ ಕೈಗೊಳ್ಳುವ ಠೇವಣಿ ವಂತಿಕೆ ಕಾಮಗಾರಿಗಳ ಸಲಹಾ ಶುಲ್ಕವನ್ನು ವಸೂಲಿ ಮಾಡುವ ಬಗ್ಗೆ".
3. ಆದೇಶ ಸಂಖ್ಯೆ ಕವಿಪ್ರನಿನಿ/ಬಿ19/345/85–86 ದಿನಾಂಕ 27.06.2018ರಲ್ಲಿ "ಸ್ವಯಂ ನಿರ್ವಹಣಾ ಕಾಮಗರಿಗಳಿಗೆ ಮೇಲ್ವಿಚಾರಣಾ ಶುಲ್ಕದ ವಸೂಲಿ ಮಾಡುವ ಬಗ್ಗೆ".
4. "ಸ್ವಯಂ ನಿರ್ವಹಣಾ ಕಾಮಗರಿಗಳಿಗೆ ಮೇಲ್ವಿಚಾರಣಾ ಶುಲ್ಕದ ವಸೂಲಿ ಮಾಡುವ ಬಗ್ಗೆ ತಿದ್ದುಪಡಿಯನ್ನು" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85–86ನ್ನು ದಿನಾಂಕ 27.06.2018ರಲ್ಲಿ ಹೊರಡಿಸಿರುತ್ತದೆ.
5. "ಕ.ವಿ.ಪ್ರ.ನಿ.ನಿ.ಯಲ್ಲಿ ಹಾಲಿ ಇರುವ ವಿದ್ಯುತ್ ಉಪಕೇಂದ್ರಗಳನ್ನು 400 ಕೆ.ವಿ., 220 ಕೆ.ವಿ., 110 ಕೆ.ವಿ. ಮತ್ತು 66 ಕೆ.ವಿ. ವೋಲ್ಟೇಜ್ ವರ್ಗಗಳ ಅನುಸಾರ ಪ್ರತ್ಯೇಕಗೊಳಿಸಿ, ಉಪಕೇಂದ್ರಗಳಿಗೆ ಹೊಸದಾಗಿ ಉಪಕೇಂದ್ರ ಸಂಕೇತವನ್ನು ನೀಡುವ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ /ಬಿ19/ಬಿ72/89161/2018–19 ನ್ನು ದಿನಾಂಕ:25.10.2018 ರಲ್ಲಿ ಹೊರಡಿಸಿರುತ್ತದೆ.
6. "ಟೆಂಡರ್ ದಾಖಲೆಗಳಲ್ಲಿ ಹೊರಗಿನಿಂದ ಖರೀದಿಸಲಾದ ಸಾಮಾಗ್ರಿಗಳ ದರ ವ್ಯತ್ಯಾಸದ ಷರತ್ತಿಗೆ ತಿದ್ದುಪಡಿಯ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85–86ನ್ನು ದಿನಾಂಕ 19.12.2018ರಲ್ಲಿ ಹೊರಡಿಸಿರುತ್ತದೆ.
7. ಆದೇಶ ಸಂಖ್ಯೆ ಕವಿಪ್ರನಿನಿ/ಬಿ14/6014/2002–03 ದಿನಾಂಕ 27.12.2018ರಲ್ಲಿ "ಕವಿಪ್ರನಿನಿಯ ಟಿಎಲ್ & ಎಸ್‌ಎಸ್ ವಿಭಾಗಗಳ ನೋಡಲ್ ಅಧಿಕಾರಿಗಳನ್ನು ವಿದ್ಯುತ್ ಸುರಕ್ಷಾ ಅಧಿಕಾರಿಗಳೆಂದು ನಾಮನಿರ್ದೇಶನ ಮಾಡುವ ಬಗ್ಗೆ".
8. "ಟೆಂಡರ್ ದಾಖಲೆಗಳಲ್ಲಿ ಹೊರಗಿನಿಂದ ಖರೀದಿಸಲಾದ ಸಾಮಾಗ್ರಿಗಳಿಗೆ ದರ ವ್ಯತ್ಯಾಸದ ಷರತ್ತಿಗೆ ಹೊರಡಿಸಲಾದ ಸುತ್ತೋಲೆಯನ್ನು ಹಿಂಪಡೆಯುವ ಬಗ್ಗೆ". ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/345/85–86ನ್ನು ದಿನಾಂಕ 21.03.2019ರಲ್ಲಿ ಹೊರಡಿಸಿರುತ್ತದೆ.
9. "ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಮೇಲ್ವಿಚಾರಣಾ ಶುಲ್ಕಗಳು, ಪ್ರಕ್ರಿಯೆ ಶುಲ್ಕಗಳು, ಹಿಂಪಾವತಿಸಲಾಗದ ಒಂದುಬಾರಿಯ ಶುಲ್ಕಗಳು ಹಾಗೂ ಇತರೆ ಶುಲ್ಕಗಳನ್ನು ಆನ್ ಲೈನ್ ನಲ್ಲಿ ವಸೂಲಾತಿ ಮಾಡುವ ವಿಧಾನ ಮತ್ತು ಅದನ್ನು ಲೆಕ್ಕೀಕರಿಸುವ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ28(ಎ)/ಆಸ(ಲೆ&ಸಂ)/ಕೆಸಿಇ–21/6936/13–14ನ್ನು ದಿನಾಂಕ 23.06.2018ರಲ್ಲಿ ಹೊರಡಿಸಿರುತ್ತದೆ.
10. ಆದೇಶ ಸಂಖ್ಯೆ ಕವಿಪ್ರನಿನಿ/ಬಿ28(ಎ)/20942/15–16 ದಿನಾಂಕ 25.07.2018ರಲ್ಲಿ "ಸೌರ ವಿದ್ಯುತ್ ಯೋಜನೆಗಳಿಗೆ ಮೇಲ್ವಿಚಾರಣಾ ಶುಲ್ಕವನ್ನು 10% ರಿಂದ 5% ಗೆ ಇಳಿಕೆ ಮಾಡಿರುವ ಬಗ್ಗೆ".
11. "ಕವಿಪ್ರನಿನಿ ಯ ಜಾಲಗಳಲ್ಲಿ ಇಂಟರ್ ಕನೆಕ್ಷನ್ ಪಾಯಿಂಟ್‌ಗಳಿಗೆ ಒದಗಿಸಿರುವ ಇಂಟರ್‌ಫೇಸ್ ಮಾಪಕಗಳ ಮಾಪನಾಂಕ ನಿರ್ಣಯದ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ28(ಎ)/ಮುಇಂವಿ/ಆರ್‌ಟಿ&ಆರ್‌ಡಿ/ಕೆಸಿಇ–80/45953/16–17/107ನ್ನು ದಿನಾಂಕ 07.08.2018ರಲ್ಲಿ ಹೊರಡಿಸಿರುತ್ತದೆ.

12. "ಸ್ವಂತಂತ್ರ ವಿದ್ಯುತ್ ಉತ್ಪಾದಕರಿಂದ ಉತ್ಪಾದಿಸಲಾದ ವಿದ್ಯುತ್‌ನ್ನು ಸ್ಥಳಾಂತರಿಸುವ ಸಲುವಾಗಿ(Evacuation) ಕವಿಪ್ರನಿನಿ ಉಪಕೇಂದ್ರಗಳ ಆವರಣದೊಳಗೆ ಟೇಕ್-ಆಫ್ ಟವರ್ ನಿರ್ಮಿಸಲು ಕವಿಪ್ರನಿನಿ ಯ ಭೂಮಿಯನ್ನು ನೀಡುವ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ28(ಎ)/70151/17-18ನ್ನು ದಿನಾಂಕ 23.07.2018ರಲ್ಲಿ ಹೊರಡಿಸಿರುತ್ತದೆ.
13. "ಪ್ರಸರಣ ಮಾರ್ಗ,ಗೋಪುರಗಳು ಮತ್ತು ಉಪಕೇಂದ್ರಗಳ ಯಂತ್ರೋಪಕರಣಗಳ ವೈಫಲ್ಯವನ್ನು ವರದಿ ಮಾಡುವ ಬಗ್ಗೆ" ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ28(ಎ)/87135/18-19ನ್ನು ದಿನಾಂಕ 23.01.2019ರಲ್ಲಿ ಹೊರಡಿಸಿರುತ್ತದೆ.
14. ಆದೇಶ ಸಂಖ್ಯೆ ಕವಿಪ್ರನಿನಿ/ಬಿ25/23720/2011-12 ದಿನಾಂಕ 12.10.2018ರಲ್ಲಿ "ಆರ್ಥಿಕ ಅಧಿಕಾರಗಳ ನಿಯೋಜನೆಯ ಕೈಪಿಡಿಯ ಪರಿಷ್ಕರಣೆಯ ಬಗ್ಗೆ".
15. ಆದೇಶ ಸಂಖ್ಯೆ ಕವಿಪ್ರನಿನಿ/ಬಿ25/ಬಿ5ಎ/ಕೆಸಿಒ-01/94009/2018-19 ದಿನಾಂಕ 17.01.2019ರಲ್ಲಿ "ಆರ್ಥಿಕ ಅಧಿಕಾರಗಳ ನಿಯೋಜನೆಯ ಕೈಪಿಡಿ-2018 ಅನುಬಂಧ-1ರ ತಿದ್ದುಪಡಿ ಮಾಡಿರುವ ಬಗ್ಗೆ".

## ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್

**ಅ) ಸಾಮಗ್ರಿಗಳ ಖರೀದಿ:**

2018-19 ನೇ ವರ್ಷದಲ್ಲಿ ಕ.ವಿ.ಪ್ರ.ನಿ.ನಿಯು ಟಿ ಮತ್ತು ಪಿ ಶಾಖೆಯಲ್ಲಿ 400ಕೆವಿ ವರೆಗಿನ ಪ್ರಮುಖ ಯಂತ್ರೋಪಕರಣಗಳಾದ 100ಎಂವಿಎ ವಿದ್ಯುತ್ ಪರಿವರ್ತಕಗಳು, ಬ್ಯಾಟರಿ ಸೆಟ್ಸ್ ಮತ್ತು 11ಕೆವಿ ಸ್ವಿಚ್‌ಗೇರ್ಸ್ ಖರೀದಿಸಿರುತ್ತದೆ. ಇದಲ್ಲದೇ, 400 ಕೆವಿ ವರೆಗಿನ ಪ್ರಸರಣ ಮಾರ್ಗಗಳ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ವಿದ್ಯುತ್ ಪ್ರಸರಣಕ್ಕೆ ಅಡಚಣೆಯಾಗದಂತೆ ಚಾಲನಾ ಸ್ಥಿತಿಯಲ್ಲೇ ನಿರ್ವಹಣೆ ಕೈಗೊಳ್ಳಲು ವಿದ್ಯುತ್ ನಿರೋಧಕ ವ್ಯವಸ್ಥೆಯುಳ್ಳ ವೇದಿಕೆ(Platform), ಆರ್‌ಟಿ ಮತ್ತು ಆರ್&ಡಿ ಶಾಖೆಗೆ ಅಗತ್ಯವಿದ್ದ ಪರೀಕ್ಷಣಾ ಯಂತ್ರಗಳಾದ ಸ್ವೀಪ್ ಫ್ರೀಕ್ವೆನ್ಸೀ, ರೆಸ್ಪಾನ್ಸ್ ಅನಲೈಸರ್ಸ್, ಬಿಡಿವಿ ಕಿಟ್, ಪರಿಪೂರ್ಣ ಆಟೋಮ್ಯಾಟಿಕ್ ಇನ್ಸುಲೇಷನ್ ಡಯಾಗ್ನಾಸ್ಟಿಕ್ ಅನಲೈಸರ್ಸ್ ಮತ್ತು ಡಿಜಿಟಲ್ ಅರ್ಥ್ ಟೆಸ್ಟರ್‌ಗಳನ್ನು ಖರೀದಿಸಲಾಗಿದೆ. ಇದಲ್ಲದೇ, ಬೆಂಗಳೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿನ ವಿದ್ಯುತ್ ವಿತರಣಾ ಕೇಂದ್ರ, ವಿದ್ಯುತ್ ಪ್ರಸರಣ ಮಾರ್ಗಗಳು ಮತ್ತು ಭೂಗತ ಕೇಬಲ್‌ಗಳನ್ನು ಜಿ.ಪಿ.ಎಸ್. ಸರ್ವೆಮಾಡಿ ಮಾಹಿತಿಯನ್ನು ಕಲೆಹಾಕಲು ಅಗತ್ಯವಿರುವ ಜಿಐಎಸ್ ತಂತ್ರಾಂಶದ ಅಭಿವೃದ್ಧಿಗೆ ಕಾರ್ಯಾದೇಶ ನೀಡಲಾಗಿದೆ.

**ಆ) ಟೆಂಡರ್ ಆಹ್ವಾನಿಸಿದ ದೊಡ್ಡ ಪ್ರಮಾಣದ ಕಾಮಗಾರಿಗಳ ವಿವರ:**

i. ತುಮಕೂರು ಜಿಲ್ಲೆಯ ಶಿರಾ ತಾಲೂಕಿನ **ಶಿರಾ(ಕಲ್ಲುಕೋಟೆ)**ದಲ್ಲಿ 2X100 ಎಂವಿಎ, 220/66/11 ಕೆವಿ ವಿದ್ಯುತ್ ಉಪಕೇಂದ್ರ ಹಾಗೂ 220ಕೆವಿ, 66ಕೆವಿ ಪ್ರಸರಣ ಮಾರ್ಗಗಳ ನಿರ್ಮಾಣ.

ii. ಟಿ.ಕೆ. ಹಳ್ಳಿಯಲ್ಲಿ ಹಾಲಿಯಿರುವ 220/66ಕೆವಿ ಉಪಕೇಂದ್ರದಿಂದ ಸೋಮನಹಳ್ಳಿಯಲ್ಲಿ ಹಾಲಿಯಿರುವ 220/66ಕೆವಿ ಉಪಕೇಂದ್ರದವರೆಗೆ 62.22ಕಿ.ಮೀ.ಗಳ ದೂರಕ್ಕೆ ಹಾಲಿಯಿರುವ 220ಕೆವಿ **ಸೋಮನಹಳ್ಳಿ – ಟಿ. ಕೆ. ಹಳ್ಳಿ** ಎಸ್‌ಸಿ ಮಾರ್ಗವನ್ನು ಡಿಸಿ ಮಾರ್ಗವನ್ನಾಗಿ ಪರಿವರ್ತಿಸುವುದು.

iii. ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ, **ಆಹೇರಿಯಲ್ಲಿ** 2X100ಎಂ.ವಿ.ಎ, 220/66/11ಕೆವಿ ಉಪಕೇಂದ್ರ ಹಾಗೂ ಸಂಬಂಧಿಸಿದ 220ಕೆವಿ, 110ಕೆವಿ ಪ್ರಸರಣ ಮಾರ್ಗಗಳ ನಿರ್ಮಾಣ.

iv. ಬೆಳಗಾವಿ ಜಿಲ್ಲೆ, **ಮುಗಳ್ಖೋಡ್–ಕಬ್ಬೂರು** ಗ್ರಾಮದಲ್ಲಿ 2X100 ಎಂವಿಎ, 220/66/11ಕೆವಿ ಉಪ-ಕೇಂದ್ರದ ಜೊತೆಗೆ ಸಂಬಂಧಿತ 220ಕೆವಿ ಮತ್ತು 110ಕೆವಿ ಮಾರ್ಗಗಳ ನಿರ್ಮಾಣ ಕಾಮಗಾರಿಗಳಿಗೆ ಹಸಿರು ಇಂಧನದ ಪ್ರಸರಣೆಗಾಗಿ ಗ್ರೀನ್ ಕಾರಿಡಾರ್ ಟ್ರಾನ್ಸ್ಮಿಷನ್ ಯೋಜನೆಯ ಅಡಿಯಲ್ಲಿ ಹೊಸ ಮತ್ತು ನವೀಕರಿಸಬಹುದಾದ ವಿದ್ಯುತ್ (MNRE) ನಿಧಿಯನ್ನು ಬಳಕೆ ಮಾಡಿಕೊಂಡು ಪ್ರಸ್ಥಾವಿತ ವಿದ್ಯುತ್ ವಿತರಣಾ ಕೇಂದ್ರದ ಸ್ಥಾಪನೆ.

v. ಬೆಂಗಳೂರಿನ **ಸೆಸ್ನಾ ಪಾರ್ಕ್, ಹೆಚ್‌ಬಿಆರ್ ಲೇಔಟ್ ಮತ್ತು ಸಹಕಾರಿನಗರಗಳಲ್ಲಿ** 2X150 ಎಂವಿಎ, 220/66/11 ಕೆವಿ ಜಿಐಎಸ್ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವುದು.

vi. ಹಾಲಿ ಇರುವ 66ಕೆ.ವಿ ಸೋಮನಹಳ್ಳಿ-ಕನಕಪುರ-ಟಿ.ಕೆ ಹಳ್ಳಿ ಬಿ2 ಮಾರ್ಗದ ಹಳೆಯ ಹೆಚ್-ಫ್ರೇಮ್ ಗೋಪುರಗಳು ಮತ್ತು ಕ್ಯಾಟ್ ಕಂಡಕ್ಟರ್ ಬದಲಾಗಿ ಎಂಸಿ/ಡಿಸಿ ಗೋಪುರಗಳ ಮೇಲೆ 60.561 ಕಿ.ಮೀ. ಗಳ ಉದ್ದಕ್ಕೆ ಡ್ರೇಕ್ ಎಸಿಎಸ್‌ಆರ್ ಕಂಡಕ್ಟರ್‌ನೊಂದಿಗೆ 66ಕೆ.ವಿ ಎಂಸಿ/ಡಿಸಿ ಮಾರ್ಗದ ನಿರ್ಮಾಣ.

vii. 220 ಕೆ.ವಿ ಎಸ್.ಆರ್.ಎಸ್. ಹುಬ್ಬಳ್ಳಿ ಉಪಕೇಂದ್ರದಿಂದ 220 ಕೆವಿ ಹಾವೇರಿ ಉಪಕೇಂದ್ರದವರೆಗೆ ಸುಮಾರು 68.318 ಕಿ.ಮೀ.ಗಳ ಉದ್ದಕ್ಕೆ ಹಾಲಿ ಇರುವ 110 ಕೆವಿ ಎಸ್‌ಸಿ ಗೋಪುರಗಳ ಮೇಲೆ ಇರುವ ಎಸ್‌ಸಿ ಮಾರ್ಗವನ್ನು ಹೊಸ ಡಿಸಿ ಗೋಪುರದ ಮೇಲೆ ಲಿಂಕ್ಸ್ (Lynx) ಕಂಡಕ್ಟರ್ ಮತ್ತು ಗ್ರೌಂಡ್ ವೈರ್‌ಗಳನ್ನೊಳಗೊಂಡ 110 ಕೆವಿ ಎಸ್‌ಸಿ ಮಾರ್ಗಕ್ಕೆ ಬದಲಾಯಿಸುವುದು ಹಾಗೂ 110 ಕೆವಿ ಎಸ್.ಆರ್.ಎಸ್. ಹುಬ್ಬಳ್ಳಿ – ಹಾವೇರಿ ಎಸ್.ಸಿ. ಮಾರ್ಗದ ಟ್ಯಾಪಿಂಗ್ ಪಾಯಿಂಟ್‌ನಿಂದ ಮುಂಡಗೋಡು ಉಪಕೇಂದ್ರದವರೆಗೆ ಸುಮಾರು 17.77 ಕಿ.ಮೀ.ಗಳ ಉದ್ದಕ್ಕೆ ಹಾಲಿ ಇರುವ 110 ಕೆವಿ ಎಸ್‌ಸಿ ಗೋಪುರಗಳಲ್ಲಿ ಖಾಲಿ ಇರುವ (Vacant) ಕ್ರಾಸ್ ಆರ್ಮ್ಸ್‌ಗಳ ಮೇಲೆ 110 ಕೆವಿ 2ನೇ ಸರ್ಕ್ಯೂಟ್ ಎಳೆಯುವುದು.

ಇ) 2018–19 ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ಮತ್ತು ಖರೀದಿಗೆ ಸಂಬಂಧಿಸಿದಂತೆ ಕಾರ್ಯಾದೇಶ ನೀಡಿರುವ ವಿವರಗಳು ಕೆಳಕಂಡಂತಿದೆ.

**1) ಕಾಮಗಾರಿಗಳು:**

**i. 400ಕೆವಿ ಮತ್ತು 220ಕೆವಿ ಕಾಮಗಾರಿಗಳು:**

| ಆಹ್ವಾನಿಸಿದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 220ಕೆವಿ ಮತ್ತು ಹೆಚ್ಚಿನ ವೋಲ್ಟೇಜ್‌ನ ಕಾಮಗಾರಿಗಳು | 16 | 126555.64 | 400ಕೆವಿ ಎಐಎಸ್ | ಇಲ್ಲ. |
| | | | 400ಕೆವಿ ಜಿಐಎಸ್ | ಇಲ್ಲ. |
| | | | 220ಕೆವಿ ಎಐಎಸ್ | 04 ಸಂ. |
| | | | 220ಕೆವಿ ಜಿಐಎಸ್ | 05 ಸಂ. |
| | | | 400/220ಕೆವಿ, 500ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 220/66/11ಕೆವಿ, 150ಎಂವಿಎ, ವಿದ್ಯುತ್ ಪರಿವರ್ತಕಗಳು | 12 ಸಂ. |
| | | | 220/110ಕೆವಿ, 100ಎಂವಿಎ, ವಿದ್ಯುತ್ ಪರಿವರ್ತಕಗಳು | 07 ಸಂ. |
| | | | 220/66/11ಕೆವಿ, 100ಎಂವಿಎ, ವಿದ್ಯುತ್ ಪರಿವರ್ತಕಗಳು | 06ಸಂ. |
| | | | 110/11ಕೆವಿ, 10 ಎಂವಿಎ, ವಿದ್ಯುತ್ ಪರಿವರ್ತಕಗಳು | 02 ಸಂ. |
| | | | 66/11ಕೆವಿ, 12.5ಎಂವಿಎ, ವಿದ್ಯುತ್ ಪರಿವರ್ತಕಗಳು | 02 ಸಂ. |
| | | | 220ಕೆವಿ ಆರ್ ಮತ್ತು ಎಂ ಕಾಮಗಾರಿಗಳು | ಇಲ್ಲ. |
| | | | 400ಕೆವಿ ಪ್ರಸರಣ ಮಾರ್ಗಗಳು | ಇಲ್ಲ. |
| | | | 220ಕೆವಿ ಪ್ರಸರಣ ಮಾರ್ಗಗಳು | 168.19 ಕಿ.ಮೀಗಳು. |
| | | | 110ಕೆವಿ ಪ್ರಸರಣ ಮಾರ್ಗಗಳು | 121.39 ಕಿ.ಮೀಗಳು. |
| | | | 66ಕೆವಿ ಪ್ರಸರಣ ಮಾರ್ಗಗಳು | 115.99 ಕಿ.ಮೀಗಳು. |
| | | | 400ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 220ಕೆವಿ ಟರ್ಮಿನಲ್ ಬೇ ಗಳು | 05 ಸಂ. |
| | | | 110ಕೆವಿ ಟರ್ಮಿನಲ್ ಬೇ ಗಳು | 03 ಸಂ. |
| | | | 66ಕೆವಿ ಟರ್ಮಿನಲ್ ಬೇ ಗಳು | 09 ಸಂ. |
| | | | 220ಕೆವಿ ಯೂ.ಜಿ.ಕೇಬಲ್ | 11.332 ಕಿ.ಮೀಗಳು. |
| | | | 66ಕೆವಿ ಯೂ.ಜಿ.ಕೇಬಲ್ | 11.12 ಕಿ.ಮೀಗಳು. |

| ಕೈ ಬಿಡಲಾದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 220ಕೆವಿ ಮತ್ತು ಹೆಚ್ಚಿನ ವೋಲ್ಟೇಜ್‌ನ ಕಾಮಗಾರಿಗಳು | 05 | 42603.67 | 400ಕೆವಿ ಎಐಎಸ್ | ಇಲ್ಲ. |
| | | | 400ಕೆವಿ ಜಿಐಎಸ್ | ಇಲ್ಲ. |
| | | | 220ಕೆವಿ ಎಐಎಸ್ | ಇಲ್ಲ. |
| | | | 220ಕೆವಿ ಜಿಐಎಸ್ | 03 ಸಂ. |
| | | | 400/220ಕೆವಿ, 500ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 220/66/11ಕೆವಿ, 150ಎಂವಿಎ, ವಿದ್ಯುತ್ ಪರಿವರ್ತಕಗಳು | 06 ಸಂ. |
| | | | 220/110ಕೆವಿ, 100ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 220/66/11ಕೆವಿ, 100ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 110/11ಕೆವಿ, 10 ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 66/11ಕೆವಿ, 12.5ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 220ಕೆವಿ ಆರ್ ಮತ್ತು ಎಂ ಕಾಮಗಾರಿಗಳು | ಇಲ್ಲ. |
| | | | 400ಕೆವಿ ಪ್ರಸರಣ ಮಾರ್ಗಗಳು | ಇಲ್ಲ. |
| | | | 220ಕೆವಿ ಪ್ರಸರಣ ಮಾರ್ಗಗಳು | 5.074 ಕಿ.ಮೀಗಳು. |
| | | | 110ಕೆವಿ ಪ್ರಸರಣ ಮಾರ್ಗಗಳು | ಇಲ್ಲ. |
| | | | 66ಕೆವಿ ಪ್ರಸರಣ ಮಾರ್ಗಗಳು | ಇಲ್ಲ. |
| | | | 400ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 220ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 110ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 66ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 220ಕೆವಿ ಯೂ.ಜಿ.ಕೇಬಲ್ | 6.762 ಕಿ.ಮೀಗಳು. |
| | | | 66ಕೆವಿ ಯೂ.ಜಿ.ಕೇಬಲ್ | 5.56 ಕಿ.ಮೀಗಳು. |

| ಕಾರ್ಯಾದೇಶ ನೀಡಿದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 220ಕೆವಿ ಮತ್ತು ಹೆಚ್ಚು ವೋಲ್ಟೇಜ್ ಕಾಮಗಾರಿಗಳು | 05 | 28508.29 | 400ಕೆವಿ ಎಐಎಸ್ | ಇಲ್ಲ. |
| | | | 400ಕೆವಿ ಜಿಐಎಸ್ | ಇಲ್ಲ. |
| | | | 220ಕೆವಿ ಎಐಎಸ್ | 03 ಸಂ. |
| | | | 220ಕೆವಿ ಜಿಐಎಸ್ | ಇಲ್ಲ. |
| | | | 400/220ಕೆವಿ, 500ಎಂವಿಎ, ವಿದ್ಯುತ್ ಪರಿವರ್ತಕಗಳು | ಇಲ್ಲ. |
| | | | 220/66/11ಕೆವಿ, 150ಎಂವಿಎ, ವಿದ್ಯುತ್ ಪರಿವರ್ತಕಗಳು | 02 ಸಂ. |
| | | | 220/110/11ಕೆವಿ, 100ಎಂವಿಎ, ವಿದ್ಯುತ್ ಪರಿವರ್ತಕಗಳು | 04 ಸಂ. |

| | | | | |
|---|---|---|---|---|
| | | | 220/66/11ಕೆವಿ, 100 ಎಂವಿಎ, ವಿದ್ಯುತ್ ಪರಿವರ್ತಕಗಳು | 04 ಸಂ. |
| | | | 110/11ಕೆವಿ, 10 ಎಂವಿಎ, ವಿದ್ಯುತ್ ಪರಿವರ್ತಕಗಳು | 01 ಸಂ. |
| | | | 66/11ಕೆವಿ, 12.5 ಎಂವಿಎ, ವಿದ್ಯುತ್ ಪರಿವರ್ತಕಗಳು | 02 ಸಂ. |
| | | | 220ಕೆವಿ ಆರ್ ಮತ್ತು ಎಂ ಕಾಮಗಾರಿಗಳು | ಇಲ್ಲ. |
| | | | 400ಕೆವಿ ಪ್ರಸರಣ ಮಾರ್ಗಗಳು | ಇಲ್ಲ. |
| | | | 220ಕೆವಿ ಪ್ರಸರಣ ಮಾರ್ಗಗಳು | 36.717 ಕಿ.ಮೀಗಳು. |
| | | | 110ಕೆವಿ ಪ್ರಸರಣ ಮಾರ್ಗಗಳು | 42.5 ಕಿ.ಮೀಗಳು |
| | | | 66ಕೆವಿ ಪ್ರಸರಣ ಮಾರ್ಗಗಳು | 115.993 ಕಿ.ಮೀಗಳು |
| | | | 400ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 220ಕೆವಿ ಟರ್ಮಿನಲ್ ಬೇ ಗಳು | ಇಲ್ಲ. |
| | | | 110ಕೆವಿ ಟರ್ಮಿನಲ್ ಬೇ ಗಳು | 04 ಸಂ. |
| | | | 66ಕೆವಿ ಟರ್ಮಿನಲ್ ಬೇ ಗಳು | 08 ಸಂ. |
| | | | 220ಕೆವಿ ಯೂ.ಜಿ. ಕೇಬಲ್ | ಇಲ್ಲ. |
| | | | 66ಕೆವಿ ಯೂ.ಜಿ. ಕೇಬಲ್ | ಇಲ್ಲ. |

### ii. 110ಕೆವಿ ಮತ್ತು 66ಕೆವಿ ಕಾಮಗಾರಿಗಳು:

| ಆಹ್ವಾನಿಸಿದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66 ಕೆವಿ ಪ್ರಸರಣ ಮಾರ್ಗಗಳು ಹಾಗೂ ಸಂಬಂಧಿತ ಟರ್ಮಿನಲ್ ಬೇಗಳು, 110 ಕೆವಿ ಪ್ರಸರಣ ಮಾರ್ಗ ಹಾಗೂ ಸಂಬಂಧಿತ ಟರ್ಮಿನಲ್ ಬೇಗಳು, 66 ಕೆ.ವಿ ಹೈಬ್ರಿಡ್ ಸ್ವಿಚ್‌ಗೇರ್‌ಗಳು ಹಾಗೂ 66 ಕೆ.ವಿ ಭೂಗತ ಕೇಬಲಿನ ಪ್ರಸರಣ ಮಾರ್ಗಗಳು | 57 | 59812.89 | 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 17 ಸಂ. |
| | | | 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 26 ಸಂ. |
| | | | 110/33ಕೆವಿ, 20ಎಂವಿಎ ವಿದ್ಯುತ್ ಪರಿವರ್ತಕಗಳು | 2 ಸಂ. |
| | | | 110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು | 27 ಸಂ. |
| | | | 66/11ಕೆವಿ, 12.5ಎಂವಿಎ ವಿದ್ಯುತ್ ಪರಿವರ್ತಕಗಳು | 13 ಸಂ. |
| | | | 66/11ಕೆವಿ, 8ಎಂವಿಎ ವಿದ್ಯುತ್ ಪರಿವರ್ತಕಗಳು | 19 ಸಂ. |
| | | | 66 ಕೆವಿ ಪ್ರಸರಣ ಮಾರ್ಗಗಳು | 298.661 ಕಿ.ಮೀಗಳು |
| | | | 110 ಕೆವಿ ಪ್ರಸರಣ ಮಾರ್ಗಗಳು | 290.524 ಕಿ.ಮೀಗಳು |
| | | | 66 ಕೆ.ವಿ ಹೈಬ್ರಿಡ್ ಸ್ವಿಚ್‌ಗೇರ್‌ಗಳು (3 ಸಂಖ್ಯೆಗಳ ಸ್ಥಾಪನೆ) | 01 ಸಂ. |
| | | | 110 ಕೆವಿ ಟರ್ಮಿನಲ್ ಬೇಗಳು | 8 ಸಂ. |
| | | | 66 ಕೆವಿ ಟರ್ಮಿನಲ್ ಬೇಗಳು | 18 ಸಂ. |
| | | | 66 ಕೆವಿ, 1 x 1000 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗ | 11.076 ಕಿ.ಮೀಗಳು |

| ತೆಗೆದು ಹಾಕಿದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66 ಕೆವಿ ಪ್ರಸರಣ ಮಾರ್ಗಗಳು ಹಾಗೂ ಸಂಬಂಧಿತ ಟರ್ಮಿನಲ್ ಬೇಗಳು | 8 | 5537.98 | 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 3 ಸಂ. |
| | | | 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 4 ಸಂ. |
| | | | 110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು | 3 ಸಂ. |
| | | | 66/11ಕೆವಿ, 12.5ಎಂವಿಎ ವಿದ್ಯುತ್ ಪರಿವರ್ತಕಗಳು | 2 ಸಂ. |
| | | | 66/11ಕೆವಿ, 8ಎಂವಿಎ ವಿದ್ಯುತ್ ಪರಿವರ್ತಕಗಳು | 3 ಸಂ. |
| | | | 110 ಕೆವಿ ಪ್ರಸರಣ ಮಾರ್ಗಗಳು | 10.712 ಕಿ.ಮೀಗಳು |
| | | | 66 ಕೆವಿ ಪ್ರಸರಣ ಮಾರ್ಗಗಳು | 15.815 ಕಿ.ಮೀಗಳು |
| | | | 110 ಕೆವಿ ಟರ್ಮಿನಲ್ ಬೇಗಳು | 1 ಸಂ. |
| | | | 66 ಕೆವಿ ಟರ್ಮಿನಲ್ ಬೇಗಳು | 2 ಸಂ. |

| ಕಾರ್ಯಾದೇಶ ನೀಡಿದ ಟೆಂಡರ್‌ಗಳು | ಸಂಖ್ಯೆ | ಒಟ್ಟು ಮೊತ್ತ ರೂ. ಲಕ್ಷಗಳಲ್ಲಿ | ಕಾಮಗಾರಿಗಳ ವಿವರ | ಸಂಖ್ಯೆ/ಕಿ.ಮೀಗಳು |
|---|---|---|---|---|
| 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು ಹಾಗೂ ಸಂಬಂಧಿತ ಪ್ರಸರಣ ಮಾರ್ಗ ಮತ್ತು ಟರ್ಮಿನಲ್ ಬೇಗಳು, 66 ಕೆವಿ ಪ್ರಸರಣ ಮಾರ್ಗಗಳು ಹಾಗೂ ಸಂಬಂಧಿತ ಟರ್ಮಿನಲ್ ಬೇಗಳು, 110 ಕೆವಿ ಪ್ರಸರಣ ಮಾರ್ಗ ಹಾಗೂ ಸಂಬಂಧಿತ ಟರ್ಮಿನಲ್ ಬೇಗಳು, 66 ಕೆವಿ 1 x 1000 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗ ಹಾಗೂ 66 ಕೆವಿ 3 x 300 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗಗಳು | 33 | 32817.89 | 110/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 8 ಸಂ. |
| | | | 66/11 ಕೆವಿ ವಿದ್ಯುತ್ ಉಪ ಕೇಂದ್ರಗಳು | 18 ಸಂ. |
| | | | 110/33ಕೆವಿ, 20ಎಂವಿಎ ವಿದ್ಯುತ್ ಪರಿವರ್ತಕಗಳು | 1 ಸಂ. |
| | | | 110/11ಕೆವಿ, 10ಎಂವಿಎ ವಿದ್ಯುತ್ ಪರಿವರ್ತಕಗಳು | 12 ಸಂ. |
| | | | 66/11ಕೆವಿ, 12.5ಎಂವಿಎ ವಿದ್ಯುತ್ ಪರಿವರ್ತಕಗಳು | 5 ಸಂ. |
| | | | 66/11ಕೆವಿ, 8ಎಂವಿಎ ವಿದ್ಯುತ್ ಪರಿವರ್ತಕಗಳು | 18 ಸಂ. |
| | | | 66 ಕೆವಿ ಪ್ರಸರಣ ಮಾರ್ಗಗಳು | 158.771 ಕಿ.ಮೀಗಳು |
| | | | 110 ಕೆವಿ ಪ್ರಸರಣ ಮಾರ್ಗಗಳು | 160.159 ಕಿ.ಮೀಗಳು |
| | | | 66 ಕೆವಿ, 1 x 1000 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗ | 2.488 ಕಿ.ಮೀಗಳು |
| | | | 66 ಕೆವಿ, 3 x 300 ಚ.ಮಿ.ಮೀ ಭೂಗತ ಕೇಬಲಿನ ಪ್ರಸರಣ ಮಾರ್ಗಗಳು | 17.692 ಕಿ.ಮೀಗಳು |
| | | | 110 ಕೆವಿ ಟರ್ಮಿನಲ್ ಬೇಗಳು | 5 ಸಂ. |
| | | | 66 ಕೆವಿ ಟರ್ಮಿನಲ್ ಬೇಗಳು | 12 ಸಂ. |

2) ಸರಕುಗಳು ಮತ್ತು ಸೇವೆಗಳು:

| 2018–19ನೇ ಸಾಲಿನಲ್ಲಿ ಖರೀದಿಸಿರುವ ಸರಕುಗಳು ಮತ್ತು ಸೇವೆಗಳು | | |
|---|---|---|
| ಸರಕುಗಳು ಮತ್ತು ಸೇವೆಗಳ ಖರೀದಿಯ ವಿವರಗಳು | ಕಾರ್ಯಾದೇಶಗಳ ಮೊತ್ತ. (ರೂ. ಲಕ್ಷಗಳಲ್ಲಿ) | ಕಾಮಗಾರಿಗಳ ವಿವರ |
| ಪರಿವರ್ತಕಗಳು, ಬ್ಯಾಟರಿ ಸೆಟ್, ಇನ್ಸುಲೇಟೆಡ್ ಏರಿಯಲ್ ವರ್ಕ್ ಪ್ಲಾಟ್‌ಫಾರ್ಮ್ ಮತ್ತು ಇನ್ಸುಲೇಟೆಡ್ ಸ್ಕ್ಯಾಫೋಲ್ಡಿಂಗ್ ಸಿಸ್ಟಮ್, ಆರ್. ಟಿ ಮತ್ತು ಆರ್ & ಡಿ ಶಾಖೆಗೆ ಬೇಕಾಗಿರುವ ಉಪಕರಣಗಳು, ಜಿ.ಐ.ಎಸ್ ಸಾಫ್ಟ್‌ವೇರ್ ಅಭಿವೃದ್ಧಿ, ಸಿ.ಐ ಪೈಪ್‌ಗಳು, ವಿದ್ಯುತ್ ಒತ್ತಡ ಪರಿವರ್ತಕಗಳು, ಕೆಪಾಸಿಟರ್ ವೋಲ್ಟೇಜ್ ಪರಿವರ್ತಕಗಳು, ಸಮವಸ್ತ್ರ ಮತ್ತು ಪೀಠೋಪಕರಣ. | 19100 | ಉಪಕೇಂದ್ರಗಳ ಸಾಮರ್ಥ್ಯದ ಉನ್ನತಿಕರಣ, ವಿದ್ಯುತ್ ಉಪಕರಣಗಳ ಬದಲಾವಣೆ ಮತ್ತು ಜಿ.ಐ.ಎಸ್ ಸಾಫ್ಟ್‌ವೇರ್ ಅಭಿವೃದ್ಧಿ ಹಾಗೂ ಇತರೆ. |

## ಯೋಜನೆ ಮತ್ತು ಸಮನ್ವಯತೆ:

**ಧ್ಯೇಯ:–**

ಸಂವಹನ ಜಾಲವನ್ನು ಬಲಪಡಿಸುವುದು ಮತ್ತು ಉತ್ಪಾದಿಸಿದ ವಿದ್ಯುತನ್ನು ಲೋಡ್‌ಕೇಂದ್ರಕ್ಕೆ ರವಾನಿಸುವ ಸಲುವಾಗಿ ಸಂಯೋಜನೆ, ನವೀಕರಣ ಮತ್ತು ಕಾರ್ಯಗತಗೊಳಿಸಲು ಸಮಗ್ರ ಪ್ರಸರಣ ಬೃಹದ್ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು.

**ಉದ್ದೇಶಗಳು:**

1) ವಿದ್ಯುಚ್ಛಕ್ತಿ ಕಾಯ್ದೆ–2003 ರಲ್ಲಿ ರೂಪಿಸಿದಂತೆ ದಕ್ಷ, ಸಮನ್ವಯ ಮತ್ತು ಆರ್ಥಿಕ ರೀತಿಯಲ್ಲಿ ರಾಜ್ಯದಲ್ಲಿ ಪ್ರಸರಣ ಜಾಲವನ್ನು ವಿಸ್ತರಿಸುವುದು.
2) ವಿಶ್ವಾಸಾರ್ಹತೆ, ಭದ್ರತೆ ಮತ್ತು ಆರ್ಥಿಕತೆಯ ತತ್ವಗಳನ್ನು ಖಚಿತಪಡಿಸಿಕೊಳ್ಳಲು ಪ್ರಸರಣ ವ್ಯವಸ್ಥೆ ಯೋಜನೆಯನ್ನು ರೂಪುಗೊಳಿಸುವುದು.

**ಚಟುವಟಿಕೆಗಳು:**

1) ವಿದ್ಯುತ್ ಪ್ರಸರಣ ಸಲಕರಣೆಗಳ ತಾಂತ್ರಿಕ ವಿವರಗಳ ತಯಾರಿಸುವಿಕೆ.
2) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧೀಕಾರ, ಕೇಂದ್ರ ವಿದ್ಯುತ್ ಪ್ರಸರಣ, ವಿ.ಸ.ಕಂ ಗಳು, ಕೇಂದ್ರ ಮತ್ತು ರಾಜ್ಯದ ಸ್ವತಂತ್ರ ವಿದ್ಯುತ್ ಉತ್ಪಾದಕರೊಂದಿಗೆ ರಾಜ್ಯದ ಪ್ರಸರಣ ವ್ಯವಸ್ಥೆಗೆ ಸಂಬಂಧಿಸಿದ ಯೋಜನೆ ಮತ್ತು ಸಮನ್ವಯದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಪೂರೈಸುವುದು.
3) LTOA ಮತ್ತು MTOA ಅಡಿಯಲ್ಲಿ ಅದರ ಪ್ರಸರಣ ವ್ಯವಸ್ಥೆಗೆ ತಾರತಮ್ಯವಿಲ್ಲದೆ ಮುಕ್ತ ಪ್ರವೇಶವನ್ನು ಒದಗಿಸುವುದು.

## 2018–19ನೇ ಸಾಲಿನಲ್ಲಿ ಪ್ರಸರಣ ವ್ಯವಸ್ಥೆ ಯೋಜನೆ ಮತ್ತು ಅನುಮೋದನೆ

ಕವಿಪ್ರನಿನಿಯು ರಾಜ್ಯದ ಪ್ರಸರಣ ಸಂಸ್ಥೆಯಾಗಿದ್ದು, ವಿದ್ಯುಚ್ಛಕ್ತಿಕಾಯ್ದೆ, 2003 ರ ಪ್ರಕರಣ 39(2) ರಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ. ತದನುಸಾರವಾಗಿ, ರಾಜ್ಯದಲ್ಲಿ ಸಾಮರ್ಥ್ಯ ಸೇರ್ಪಡೆ ಹಾಗೂ ವಿದ್ಯುತ್ ಬೇಡಿಕೆಯ ಯೋಜನೆಯನ್ನು ಪರಿಗಣಿಸಿ ಪ್ರಸರಣ ವ್ಯವಸ್ಥೆಯ ಯೋಜನೆಯನ್ನು ಹೊಂದಲಾಗಿದೆ. ಸಂಸ್ಥೆಯೊಳಗೆ ಅಧ್ಯಯನವನ್ನು ನಡೆಸಿ, ತಾಂತ್ರಿಕ ಸಮನ್ವಯ ಸಮಿತಿಯಿಂದ ಅನುಮೋದನೆ ಪಡೆದು ಕೆಳಕಂಡಂತೆ ಪ್ರಸರಣ ವ್ಯವಸ್ಥೆಯ ಯೋಜನೆಯನ್ನು ಗೊತ್ತುಪಡಿಸಲಾಗಿದೆ:

| ವೋಲ್ಟೇಜ್‌ವರ್ಗ (ಕೆ.ವಿ) | ಉಪಕೇಂದ್ರಗಳು (ಸಂಖ್ಯೆಗಳಲ್ಲಿ) | |
|---|---|---|
| | ಯೋಜಿತ | ಅನುಮೋದಿತ |
| 400 | 5 | 5 |
| 220 | 10 | 10 |
| 110 | 51 | 51 |
| 66 | 54 | 52 |
| **ಒಟ್ಟು** | **120** | **118** |

**2018–19ರ ವರ್ಷಕ್ಕೆ ನವೀಕರಿಸಬಹುದಾದ ವಿದ್ಯುತ್ ಸ್ಥಾವರ ಸಾಮರ್ಥ್ಯ ಸೇರ್ಪಡೆ:**

| ಕ್ರಮ ಸಂಖ್ಯೆ | ಪ್ರವರ್ಗ | ಅನುಮತಿಸಿರುವ ವಿದ್ಯುತ್ ಬಳಕೆ ಸಾಮರ್ಥ್ಯ (ಮೆ.ವಾ.ಗಳಲ್ಲಿ) | ಜಾಲದೊಂದಿಗೆ ಪರಸ್ಪರ ಸಂಪರ್ಕಗೊಂಡಿರುವುದು (ಮೆ.ವಾ.ಗಳಲ್ಲಿ) |
|---|---|---|---|
| 1 | ಪವನ ವಿದ್ಯುತ್ | 344.5 | 86.5 |
| 2 | ಸಣ್ಣ ಜಲ ವಿದ್ಯುತ್ | 3 | 3.5 |
| 3 | ಸಹ ಉತ್ಪಾದನೆ | 99.79 | 89.4 |
| 4 | ಜೈವಿಕ+ನಿರ್ಬಂಧಿತ+ ಉಷ್ಣ | 46 | – |
| 5 | ಸೌರ ಶಕ್ತಿ | 615 | 940 |
| | **ಒಟ್ಟು** | **1108.29** | **1119.42** |

**ಉಪಕೇಂದ್ರ ಹಾಗೂ ಪ್ರಸರಣ ಮಾರ್ಗತಾಂತ್ರಿಕತೆಯಲ್ಲಿ ಅಳವಡಿಸಿರುವ ಸುಧಾರಣೆಗಳು:**

1. 2016 ರಿಂದ 2021 ರವರಗೆ ಕರ್ನಾಟಕ ವಿದ್ಯುತ್ ಜಾಲಕ್ಕೆ ನವೀಕರಿಸಬಹುದಾದ ಇಂಧನ ಉತ್ಪಾದಕರಿಂದ ವಿಶೇಷವಾಗಿ ಪವನ ಹಾಗೂ ಸೌರಶಕ್ತಿ ಯೋಜನೆಗಳಿಂದಾಗಬಹುದಾದ ಗರಿಷ್ಠ ವಿದ್ಯುತ್ ಬಿಡುಗಡೆ ಪ್ರಮಾಣವನ್ನು ಗೊತ್ತುಪಡಿಸಿಕೊಳ್ಳುವುದು.
2. ವಿದ್ಯುತ್ ವ್ಯವಸ್ಥೆ ಅಭಿವೃದ್ಧಿ ನಿಧಿ (PSDF) ಹೂಡಿಕೆ ಅಡಿಯಲ್ಲಿ ಅಂದಾಜು ರೂ.74.87 ಕೋಟಿ ವೆಚ್ಚದಲ್ಲಿ, ಎಲ್ಲಾ 220 ಕೆವಿ ಸ್ವೀಕರಣಾ ಕೇಂದ್ರಗಳಿಗೆ ಮೈನ್–2 ರಕ್ಷಣೆಯ ಅಳವಡಿಕೆ.
3. ಅಂದಾಜು ರೂ.74 ಕೋಟಿ ವೆಚ್ಚದಲ್ಲಿ, ರಾಜ್ಯದಾದ್ಯಂತ 1508 ಎಂ.ವಿ.ಎ.ಆರ್. ಹೊಸ ಕೆಪಾಸಿಟರು ಬ್ಯಾಂಕುಗಳ ಅಳವಡಿಕೆ.
4. ಎನ್.ಸಿ.ಇ.ಎಫ್. ಅನುದಾನದೊಂದಿಗೆ, ಹಸಿರು ವಿದ್ಯುತ್ ಕಾರಿಡಾರ್ ಯೋಜನೆಯ ಮೊದಲನೆ ಹಂತದ ಅಡಿಯಲ್ಲಿ ರೂ.906 ಕೋಟಿ ವೆಚ್ಚದಲ್ಲಿ, ನವೀಕರಿಸಬಹುದಾದ ವಿದ್ಯುತ್ತನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು 7 ಹೊಸ ಯೋಜನೆಗಳನ್ನು ಜುಲೈ 2020ರ ಒಳಗೆ ಪೂರ್ಣಗೊಳಿಸಲಾಗುವುದು.
5. ಹಸಿರು ವಿದ್ಯುತ್ ಕಾರಿಡಾರ್ ಯೋಜನೆಯ ಎರಡನೇ ಹಂತದ ಅಡಿಯಲ್ಲಿ ರೂ.1455.2 ಕೋಟಿ ವೆಚ್ಚದಲ್ಲಿ, ನವೀಕರಿಸಬಹುದಾದ ವಿದ್ಯುತ್ತನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು 8 ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

6. ತುಮಕೂರು ಜಿಲ್ಲೆ ಪಾವಗಡದಲ್ಲಿ ಸ್ಥಾಪಿಸಲಾಗುತ್ತಿರುವ 2000 ಮೆ.ವ್ಯಾ. ಅಲ್ಟ್ರಾ ಮೆಗಾ ಸೌರ ವಿದ್ಯುತ್‌ಯೋಜನೆಯಿಂದ ವಿದ್ಯುತ್ ಸಾಗಣೆಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಹಾರ್ಡ್‌ವೇರ್ ಪಾರ್ಕ್‌ನಲ್ಲಿ 400/220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆ.

7. ವಿದ್ಯುತ್ ಸ್ಥಿತಿಯನ್ನು ಸುಧಾರಿಸಲು ಹಾಗೂ ನವೀಕರಿಸಬಹುದಾದ ವಿದ್ಯುತ್ ಮರುಹಂಚಿಕೆ ಗೊಳಿಸಲು ಯಲವಾರ್, ಪೀಣ್ಯ, ಕಲಬುರಗಿ, ಕಡಕೋಳ, ಹುಲಿಯುರೂದುರ್ಗಾ ಹಾಗೂ ದೊಮ್ಮಸಂದ್ರದಲ್ಲಿ 400/220 ಕೆ.ವಿ. ವಿದ್ಯುತ್‌ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ.

8. 2035 ಕ್ಕೆ ಬೆಂಗಳೂರು ಪ್ರಸರಣ ಬಲವರ್ಧನೆಗಾಗಿ ಯೋಜನೆಯ ವರದಿ ತಯಾರಿಕೆ.

9. ಶರಾವತಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ಸ್ಥಾಪಿಸಲಾಗುತ್ತಿರುವ 2000 ಮೆ. ವ್ಯಾ. ಸಾಮರ್ಥ್ಯದ ಪಂಪ್ ಸ್ಟೋರೇಜ್ ವಿದ್ಯುತ್ ಉತ್ಪಾದನಾ ಯೋಜನೆಯಿಂದ ವಿದ್ಯುತ್ ಸಾಗಣೆಯ ವ್ಯವಸ್ಥೆಯನ್ನು ಅಂತಿಮಗೊಳಿಸಲಾಗಿದೆ.

10. 400ಕೆ.ವಿ. ಮಾನವ ರಹಿತ ಹೂಡಿ ವಿದ್ಯುತ್ ಕೇಂದ್ರವನ್ನು ನೇರವಾಗಿ 200ಕೆ.ವಿ. ಹೂಡಿ ಉಪ ಕೇಂದ್ರದಿಂದಲೇ ನಿಯಂತ್ರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು.

## ರಿಲೇ ಪರೀಕ್ಷೆ, ಸಂಶೋಧನೆ ಮತ್ತು ಅಭಿವೃದ್ಧಿ

ಮುಖ್ಯ ಇಂಜಿನಿಯರ್, ಆರ್ ಟಿ ಮತ್ತು ಆರ್ & ಡಿ ಕಛೇರಿಯು ಮೂರು ಪ್ರಮುಖ ಭಾಗಗಳಾದ ರಿಲೆ ಟೆಸ್ಟಿಂಗ್, ಸಂಶೋಧನೆ ಹಾಗು ಅಭಿವೃದ್ದಿ ಮತ್ತು ಹಾಟ್ ಲೇನ್ ನಿರ್ವಹಣಾ ಚಟುವಟಿಕೆಗಳನ್ನು ನಿರ್ವಹಿಸುವ ಒಂದು ತಾಂತ್ರಿಕ ಶಾಖೆಯಾಗಿದ್ದು ರಾಜ್ಯದಾದ್ಯಂತ ವ್ಯಾಪ್ತಿಯನ್ನು ಹೋಂದಿದೆ. ಈ ಕಛೇರಿಯು ರಕ್ಷಣಾ ರಿಲೇಗಳ ಕಾರ್ಯಕ್ಷಮತೆ, ಲೈವ್ ಲೈನ್ ನಿರ್ವಹಣೆ ಹಾಗು ವಿವಿಧ ಪ್ರಸರಣ ಉಪಕರಣಗಳ ಸ್ಥಿತಿ ಅವಲೋಕನೆ ಇತ್ಯಾದಿಗಳನ್ನು ನಿರ್ವಹಿಸುತ್ತದೆ.

**ಎ. ರಿಲೇ ಪರೀಕ್ಷಾ ವಿಭಾಗದ ತಾಂತ್ರಿಕ ಕಾರ್ಯಗಳು:–**

ರಿಲೇ ಪರೀಕ್ಷಾ ವಿಭಾಗವು ವಿದ್ಯುತ್ ಪ್ರಸರಣಾ ಜಾಲದ 66 ಕೆ.ವಿ ನಿಂದ 400 ಕೆ.ವಿ ಹಂತದ ವಿವಿಧ ವಿದ್ಯುತ್ ಉಪಕೇಂದ್ರಗಳಲ್ಲಿ ಸ್ಥಾಪಿಸಲಾದ ಎಲ್ಲಾ ಇ.ಹೆಚ್.ವಿ ಪ್ರಸರಣ ಮಾರ್ಗಗಳ ರಿಲೇಗಳ ಪರೀಕ್ಷೆ ಮತ್ತು ನಿರ್ವಹಣೆಯ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಈ ಪ್ರಕ್ರಿಯೆಯಲ್ಲಿ ರಾಜ್ಯದಾದ್ಯಂತದ ಇರುವ 1190 ವಿವಿಧ ವೋಲ್ಟೋಜ್ ಹಂತದ ವಿದ್ಯುತ್ ಉಪಕೇಂದ್ರಗಳ ಕಾರ್ಯಗಳನ್ನು ನಿರ್ವಹಿಸುತ್ತದೆ. [400 ಕೆ.ವಿ.–05 ಸಂ, 220 ಕೆ.ವಿ.–105 ಸಂ, 110 ಕೆ.ವಿ.–423 ಸಂ ಮತ್ತು 66 ಕೆ.ವಿ.–657 ಸಂ]. ಸರಿಯಾದ ಆಯ್ದ ಟ್ರಿಪ್ಪಿಂಗ್ ವ್ಯವಸ್ಥೆ, ಆರೋಗ್ಯಕರ ಪ್ರಸರಣ ಮಾರ್ಗವನ್ನು ದೋಷಯುಕ್ತ ಮಾರ್ಗದಿಂದ ಪ್ರತ್ಯೆಕಿಸುವಲ್ಲಿ ಸಹಾಯ ಮಾಡುವ ಪ್ರಕ್ರಿಯೆ ಯಾವುದೇ ಪ್ರಸರಣಾ ವ್ಯವಸ್ಥೆಯ ಬೆನ್ನೆಲುಬಾಗಿದೆ. ಈ ಮೂಲಕ ಪ್ರಮುಖ ಮಾರ್ಗಗಳ ಅನವಶ್ಯಕ ಟ್ರಿಪ್ಪಿಂಗ್‌ನ ತಡೆಗಟ್ಟುವಿಕೆಯಿಂದ ಪ್ರಸರಣಾ ಜಾಲದ ಕುಸಿತವನ್ನು ತಡೆಯಲು ಸಹಾಯ ಮಾಡುತ್ತದೆ. ಇದಲ್ಲದೆ, ಯಾವುದೇ ಪ್ರಸರಣ ಮಾರ್ಗಗಳ ಅನವಶ್ಯಕ ಟ್ರಿಪ್ಪಿಂಗ್‌ಗಳನ್ನು ವಿಶ್ಲೇಷಿಸಿ ಅವಶ್ಯವಿದ್ದಲ್ಲಿ ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಮುಖ್ಯ ಚಟುವಟಿಕೆಗಳಲ್ಲದೆ, ಕೆಳಗಿನ ಚಟುವಟಿಕೆಗಳನ್ನೂ ಸಹ ನಡೆಸಲಾಗುತ್ತದೆ;

ಎ) ಪ್ರಸರಣಾ ವ್ಯವಸ್ಥೆಯ ಪರಿಣಾಮಕಾರಿ ರಕ್ಷಣೆಗಾಗಿ CEA, SLDC ಮತ್ತು POSOCO ನಂತಹ ಇತರ ಸಂಸ್ಥೆಗಳೊಂದಿಗೆ ಸಹಕರಿಸುವುದು.

ಬಿ) ರಿಲೇಗಳು ಮತ್ತು ಮೀಟರ್‌ಗಳ ನಿಯತಕಾಲಿಕ ಪರೀಕ್ಷೆ ಮಾಡುವ ಮೂಲಕ ರಕ್ಷಣಾ ವ್ಯವಸ್ಥೆ ಮತ್ತು ಮೀಟರಿಂಗ್ ವ್ಯವಸ್ಥೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆ ನಡೆಸುವುದು.

ಸಿ) ನಿಯತಕಾಲಿಕ ತಪಾಸಣೆ ನಡೆಸುವ ಮೂಲಕ ವಿವಿಧ ವಿದ್ಯುತ್ ಉಪ ಕೇಂದ್ರದ ಉಪಕರಣಗಳ ಸುಸ್ಥಿತಿ ಮೇಲ್ವಿಚಾರಣೆ ಮಾಡುವುದು.

ಡಿ) ಪ್ರಸರಣಾ ವ್ಯವಸ್ಥೆಯ ಕುಸಿತದ ಕಾರಣಗಳನ್ನು ತನಿಖೆ ಮಾಡಿ ಅದನ್ನು ತಗ್ಗಿಸುವ ಹಾಗು ಸರಿಪಡಿಸುವ ಕ್ರಮಗಳನ್ನು ಸೂಚಿಸುವುದು.

ಇ) IPP ಮತ್ತು EHT ಗ್ರಾಹಕರನ್ನು ಒಳಗೊಂಡಂತೆ ಹಲವಾರು ಪ್ರಸರಣಾ ಉಪಕೇಂದ್ರಗಳು ಕಾರ್ಯಾರಂಭಗೊಳ್ಳುವ ಮೊದಲು ಪೂರ್ವ ಭಾವಿ (ಪಿಸಿ) ಪರೀಕ್ಷೆಗಳನ್ನು ನಡೆಸುವುದು.

ಎಫ್) ಪರೀಕ್ಷಾ ಶುಲ್ಕದ ಆಧಾರದ ಮೇಲೆ ಸಂಬಂಧಿಸಿದ ಮೀಟರಿಂಗ್ ಸಲಕರಣೆಗಳೊಂದಿಗೆ ಮೂರನೆ ವ್ಯಕ್ತಿಯ ಮಾಪಕಗಳ ಪರೀಕ್ಷೆಯನ್ನು ಕೈಗೋಳ್ಳುವುದು.

ಜಿ) ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣ ವಿಭಾಗದ ಜೊತೆಗೂಡಿ ಟರ್ನ್‌ಕೀ ಏಜೆನ್ಸಿಗಳ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ನಿಗಮವು ಖರೀದಿಸಿದ ಸಾಮಗ್ರಿಗಳ ಪರಿಶೀಲನೆಯನ್ನು ಕೈಗೋಳ್ಳುವುದು.

**I) 2018–19 ನೇ ಸಾಲಿನ ವಿವಿಧ ಕಾಮಗಾರಿಗಳಲ್ಲಿ ರಿಲೇ ಪರೀಕ್ಷಾ ವಿಭಾಗವು ನಡೆಸಿದ ಚಟುವಟಿಕೆಗಳು ಹಾಗೂ ಪ್ರಗತಿ ಈ ಕೆಳಗೆ ನಮೂದಿಸಲಾಗಿದೆ;**

i) ಹೊಸ ವಿದ್ಯುತ್ ಉಪ ಕೇಂದ್ರಗಳು, ಸಾಮರ್ಥ್ಯ ಹೆಚ್ಚಿಸುವಿಕೆ, ಹೆಚ್ಚುವರಿ ಬೇಗಳು ಮತ್ತು IPP/EHT ಗ್ರಾಹಕ ಕೇಂದ್ರಗಳ ಪೂರ್ವ–ಕಾರ್ಯಾಚರಣೆಯ ಪರೀಕ್ಷೆಗಳು;

| | | |
|---|---|---|
| ಎಲ್ಲಾ ವೋಲ್ಟೇಜ್ ವರ್ಗಗಳಲ್ಲಿ ಹೊಸದಾಗಿ ನಿರ್ಮಿಸಲಾದ ವಿದ್ಯುತ್ ಉಪಕೇಂದ್ರಗಳು | ಸಂಖ್ಯೆ. | 35 |
| ಎಲ್ಲಾ ವೋಲ್ಟೇಜ್ ವರ್ಗಗಳಲ್ಲಿ ವಿದ್ಯುತ್ ಉಪಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಸುವ ಅಡಿಯಲ್ಲಿ ಹೊಸದಾಗಿ ನಿರ್ಮಿಸಲಾದ ಹೆಚ್ಚುವರಿ ಪರಿವರ್ತಕಗಳು | ಸಂಖ್ಯೆ. | 60 |
| ಹೊಸದಾಗಿ ನಿರ್ಮಿಸಲಾದ ಹೆಚ್ಚುವರಿ ಬೇ ಗಳು | ಸಂಖ್ಯೆ. | 247 |
| ಹೊಸದಾಗಿ ಸೇವೆಗೆ ಅಳವಡಿಸಲಾದ IPP ಗಳು | ಸಂಖ್ಯೆ. | 18 |
| ಹೊಸದಾಗಿ ಸೇವೆಗೆ ಅಳವಡಿಸಲಾದ EHT ಗ್ರಾಹಕರ ಕೇಂದ್ರಗಳು | ಸಂಖ್ಯೆ. | 6 |
| ವ್ಯವಸ್ಥೆಯ ವೈಫಲ್ಯಗಳನ್ನು ಗುರುತಿಸುವಿಕೆ (ಬ್ರೇಕ್ ಡೌನ್)ಗಳ ತನಿಖೆ/ ಸರಿಪಡಿಸುವಿಕೆ | ಸಂಖ್ಯೆ. | 2574 |

ii) ರಿಲೇ ಮಾಪಕ ಮತ್ತು ಅನ್ಯ/ಇತರೆ ವ್ಯಕ್ತಿಗೆ ಸಂಬಂಧಿಸಿದ ಮಾಪಕಗಳನ್ನೊಳಗೊಂಡಂತೆ ಉಪಕರಣಗಳ ನಿಯತಕಾಲಿಕ ಮಾಪನಾಂಕ ಮತ್ತು ಅದರಿಂದ ಸಂಗ್ರಹಿಸಿದ ಒಟ್ಟು ಮೊತ್ತ ರೂಗಳಲ್ಲಿ.

| | | |
|---|---|---|
| ರಕ್ಷಣಾತ್ಮಕ ರಿಲೇಗಳ ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್ | ಸಂಖ್ಯೆ. | 82812 |
| KPTCL ಉಪ ಕೇಂದ್ರಗಳಲ್ಲಿ ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳಪಟ್ಟ ಒಟ್ಟು ಮೀಟರ್‌ಗಳು | ಸಂಖ್ಯೆ. | 21024 |
| ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳಪಟ್ಟ ಒಟ್ಟು IPP ಮೀಟರ್‌ಗಳು | ಸಂಖ್ಯೆ. | 186 |
| ಪರೀಕ್ಷೆ ಮತ್ತು ಕ್ಯಾಲಿಬ್ರೇಶನ್‌ಗೆ ಒಳಪಟ್ಟ ಒಟ್ಟು EHT ಮೀಟರ್‌ಗಳು | ಸಂಖ್ಯೆ. | 139 |
| KPTCL ಉಪ ಕೇಂದ್ರಗಳನ್ನು ಹೊರತುಪಡಿಸಿ ಮೂರನೇ ವ್ಯಕ್ತಿಯ ಮೀಟರ್ ಮತ್ತು ಅದರ ಸಂಬಂಧಿತ ಮೀಟರಿಂಗ್ ಸಲಕರಣೆಗಳ ಪರೀಕ್ಷೆಗೆ ಸಂಗ್ರಹಿಸಲಾದ ಮೊತ್ತ. | ರೂ. | 1,62,00,305/– |

iii) ಮುಂದುವರೆದು, ಕೇಂದ್ರ ವಿದ್ಯುತ್ ಪ್ರಾಧಿಕಾರ ಮತ್ತು ಗೌರವಾನ್ವಿತ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನಗಳ ಪ್ರಕಾರ, ಅಸ್ತಿತ್ವದಲ್ಲಿರುವ ರಕ್ಷಣಾ ವ್ಯವಸ್ಥೆಯ ಮೂಲಸೌಕರ್ಯದ ನವೀಕರಣ ಮತ್ತು ಅಭಿವೃದ್ಧಿಯ ಅನುಷ್ಠಾನಕ್ಕೆ ಕವಿಪ್ರನಿನಿಯ 220 ಕೆ.ವಿ. ಮತ್ತು ಹೆಚ್ಚಿನ ವೋಲ್ಟೇಜ್ ವರ್ಗದ ವಿದ್ಯುತ್ ಉಪಕೇಂದ್ರಗಳಿಗೆ ಅಂದಾಜು ವೆಚ್ಚ ರೂ. 10111 ಲಕ್ಷ ಗಳಲ್ಲಿ ಪವರ್ ಸಿಸ್ಟಮ್ ಡೆವೆಲಪ್ಮೆಂಟ್ ಫಂಡ್ (PSDF) ನಿಂದ ರೂ. 6042 ಲಕ್ಷ ಗಳ ಅನುದಾನವನ್ನು ವಿದ್ಯುತ್ ಮಂತ್ರಾಲಯ, ಭಾರತ ಸರ್ಕಾರ ಮಂಜೂರು ಮಾಡಿದೆ. ಮತ್ತು ಆರ್ಥಿಕ ವರ್ಷ 2016 17 ರ ಅವಧಿಯಲ್ಲಿ ರೂ. 604 ಲಕ್ಷ ಗಳನ್ನು, 2017–18 ರ ಅವಧಿಯಲ್ಲಿ ರೂ. 1208.4ಲಕ್ಷ ಗಳನ್ನು ಹಾಗೂ 2018–19 ರ ಅವಧಿಯಲ್ಲಿ ರೂ. 3624 ಲಕ್ಷ ಮೊತ್ತವನ್ನು ಬಿಡುಗಡೆ ಸಹ ಮಾಡಲಾಗಿದೆ. ಈ ಕಾರ್ಯವು ಪ್ರಗತಿಯಲ್ಲಿದೆ ಮತ್ತು ಅದರ ಶೀಘ್ರ ಪೂರ್ಣಗೋಳಿಸುವಿಕೆಗೆ ನಿರಂತರವಾಗಿ ರಿಲೇ ಪರೀಕ್ಷಾ ವಿಭಾಗದಿಂದ ಮೇಲ್ವಿಚಾರಣೆ ನಡೆಸುತ್ತಿದೆ.

**ಬಿ. ಸಂಶೋಧನಾ ಮತ್ತು ಅಭಿವೃದ್ಧಿ ಶಾಖೆಯ ತಾಂತ್ರಿಕ ಕಾರ್ಯಗಳು;**

ನಿಗಮವು ಬೆಂಗಳೂರಿನಲ್ಲಿ ತನ್ನದೇ ಆದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಹೊಂದಿದ್ದು ಈ ವಿಭಾಗವು ಅಧೀಕ್ಷಕ ಇಂಜಿನಿಯರ್ (ವಿ), ರವರು ಮುಖ್ಯಸ್ಥರಾಗಿರುತ್ತಾರೆ. ಆರ್ & ಡಿ ಶಾಖೆಯು ವಿದ್ಯುತ್ ಸರಬರಾಜು ಕಂಪನಿ, ಇತರೆ ಖಾಸಗಿ ಸಂಸ್ಥೆ / IPP ಗಳಿಂದ ಪ್ರಸ್ಥಾಪಿತ ಉಪಕೇಂದ್ರಗಳಿಗೆ ಅರ್ಥ್ ಮ್ಯಾಟ್ ವಿನ್ಯಾಸಗಳನ್ನು ತಯಾರಿಸುವುದು ಹಾಗೂ ಮಣ್ಣಿನ ನಿರೋಧಕ ಮಾಪನಗಳನ್ನು ನಡೆಸುತ್ತದೆ, ಹಾಗೂ ಹಾಲಿ ಇರುವ ಉಪಕೇಂದ್ರಗಳಲ್ಲಿ ಅರ್ಥಿಂಗ್ ತನಿಖೆಗಳನ್ನು ನಡೆಸುತ್ತವೆ. ಈ ಕೇಂದ್ರವು ಹಾಲಿ ಉಪಕೇಂದ್ರಗಳ ಉನ್ನತೀಕರಣ ಹಾಗೂ ಇತರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅರ್ಥ್ ಮ್ಯಾಟ್‌ಗಳ ಮರು ವಿನ್ಯಾಸ / ಬದಲಾವಣೆಗಳನ್ನು ಅನುಮೋದಿಸುತ್ತದೆ. ಬೆಂಗಳೂರಿನಲ್ಲಿರುವ ಪ್ರಯೋಗಾಲಯದಲ್ಲಿ ಭೂ ಸಂಪರ್ಕ ಪರಿಣಾಮಕಾರಿ ಪರೀಕ್ಷೆ, ವಿದ್ಯುತ್ ಪರಿವರ್ತಕಗಳ (ವೈಂಡಿಂಗ್‌ಗಳು ಅದರ ಬುಷಿಂಗ್) ಗಳು ಟ್ಯಾನ್ ಡೆಲ್ಟಾ & ಕೆಪಾಸಿಟೆನ್ಸ್ ಪರೀಕ್ಷೆ, 220 ಕೆವಿ ಹಾಗೂ ಜಿ.ಐ.ಎಸ್ ಉಪಕೇಂದ್ರಗಳ ಕಾರ್ಯನಕ್ಷೆಗಳ ಅನುಮೋದನೆ, IS 335, IS 1866 ಮತ್ತು IEC 60296–2012 ಪ್ರಕಾರವಾಗಿ ಕವಿಪ್ರನಿನಿಯ ಪರಿವರ್ತಕಗಳ ತೈಲದ ತುಣುಕುಗಳ ನಿಯತಕಾಲಿಕ ಪರೀಕ್ಷೆ, ವಿದ್ಯುತ್ ಪರಿವರ್ತಕಗಳಲ್ಲಿರುವ ವೈಫಲ್ಯಗಳನ್ನು ಕಂಡುಹಿಡಿಯಲು ಡಿಸಾಲ್ವೆಡ್ ಗ್ಯಾಸ್ ಅನಾಲಿಸಿಸ್ ನಡೆಸುವುದು, ಫ್ಯೂರಾನ್ ಅನಾಲಿಸಿಸ್ ಹಾಗೂ ಹಲವು ಇತರೆ ಪರೀಕ್ಷೆಗಳನ್ನು ನಡೆಸುತ್ತದೆ. ಮುಂದುವರೆದು, ಆಧುನೀಕರಣ ಹಾಗೂ ಹೆಚ್ಚುತ್ತಿರುವ ಕಾರ್ಯಭಾರವನ್ನು ನಿರ್ವಹಿಸಲು ಈ ಕೇಂದ್ರದಲ್ಲಿ ನೂತನ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಖರೀದಿಸಿ ಸ್ಥಾಪಿಸಲಾಗಿದೆ.

**ಸಿ. ಆರ್ & ಡಿ ಶಾಖೆಯ ವಿಶೇಷ ಅಧ್ಯಯನಗಳು ಹಾಗೂ ಚಟುವಟಿಕೆಗಳು**

i. **ಪರಿವರ್ತಕಗಳ ತೈಲ ಪರೀಕ್ಷೆ:** ಹೊಸ ವಿದ್ಯುತ್ ಪರಿವರ್ತಕಗಳನ್ನು ಕಾರ್ಯಗತಗೊಳಿಸುವ ಮುನ್ನ ಅದರಲ್ಲಿರುವ ತೈಲದ ಗುಣಮಟ್ಟವನ್ನು IS 335, IS 1866 ಮತ್ತು IEC 60296–2012 ಪ್ರಕಾರವಾಗಿ ಪರೀಕ್ಷಿಸಲಾಗುತ್ತದೆ.

ii. **ಜಿ.ಐ.ಎಸ್. ನಕ್ಷೆಯ ಅನುಮೋದನೆ:** ಆರ್ & ಡಿ ಶಾಖೆಯಿಂದ ಸಾಂಪ್ರದಾಯಿಕ ಅರ್ಥ್ ಮ್ಯಾಟ್ ವಿನ್ಯಾಸಗಳ ಜೊತೆ ಜಿ.ಐ.ಎಸ್ ಉಪಕೇಂದ್ರಗಳ ಅರ್ಥ್ ಮ್ಯಾಟ್ ವಿನ್ಯಾಸವನ್ನು ಕೂಡ ಅನುಮೋದಿಸಲಾಗುತ್ತದೆ. ಜಿ.ಐ.ಎಸ್ ಉಪಕೇಂದ್ರಗಳ ಕಟ್ಟಡಗಳ ಜೊತೆಗೆ ಸಮಗ್ರ ಭೂ ಸಂಪರ್ಕದ ವ್ಯವಸ್ಥೆ ಪರೀಕ್ಷೆಯ ವಿವರವಾದ ಅಧ್ಯಯನವನ್ನು ನಡೆಸಲಾಗುವುದು. ಅರ್ಥಿಂಗ್, ಜಿ.ಎ.ಎಸ್ ಕಟ್ಟಡ/ ಮಾದರಿ ಅರ್ಥಿಂಗ್ ವ್ಯವಸ್ಥೆಗಳು ಮತ್ತು ಮಿಂಚಿನ ರಕ್ಷಣೆ ಸೇರಿದಂತೆ ಸಮಗ್ರ ಅರ್ಥಿಂಗ್ ಯೋಜನೆಗೆ ಸಂಬಂಧಿಸಿದಂತೆ, ಟರ್ನ್‌ಕೀ ಏಜೆನ್ಸಿಗಳು ಸಲ್ಲಿಸಿದ ಜಿ.ಐ.ಎಸ್ ಉಪ ಕೇಂದ್ರಗಳ ಕಾಮಗಾರಿಯ ಕಾರ್ಯ ನಕ್ಷೆಗಳನ್ನು ಸಂಬಂಧಪಟ್ಟ ಏಜೆನ್ಸಿಗಳೊಂದಿಗೆ ಚರ್ಚಿಸಲಾಗುವುದು. ಕವಿಪ್ರನಿನಿಯ ವಾಡಿಕೆಯ ಪ್ರಕಾರ ಮತ್ತು CBIP 309 IEEE 80: 2000 ರ ಮಾರ್ಗಸೂಚಿಗಳ ಪ್ರಕಾರ ಅಗತ್ಯ ಮಾರ್ಪಾಡುಗಳನ್ನು ರೇಖಾಚಿತ್ರಗಳ ಅನುಮೋದನೆಗೆ ಮುಂಚಿತವಾಗಿಯೇ ಸೇರಿಸಲಾಗುವುದು.

iii. **ಕಂದಾಯ ವಸೂಲಾತಿ:** ಈ ಕೇಂದ್ರವು ಕವಿಪ್ರನಿನಿಯ ಅರ್ಥ್‌ಮ್ಯಾಟ್ ವಿನ್ಯಾಸಗಳನ್ನು ಕೈಗೊಳ್ಳುವುದರ ಹೊರತಾಗಿ, ವಿ.ಸ.ಕಂಗಳ ಮತ್ತು ಇತರ ಖಾಸಗಿ ಏಜೆನ್ಸಿಗಳ ವಿನಂತಿಯ ಮತ್ತು ಶುಲ್ಕ ವಿಧಿಸುವ ಆಧಾರದ ಮೇಲೆ ಉಪ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ, ಅರ್ಥ್‌ಮ್ಯಾಟ್‌ಗಳ ವಿನ್ಯಾಸವನ್ನು ಸಹ ಮಾಡುತ್ತದೆ. ಈ ಚಟುವಟಿಕೆಯ ಪರಿಣಾಮವಾಗಿ, ಕೇಂದ್ರವು ಕ.ವಿ.ಪ್ರ.ನಿ.ನಿ., ಹೊರತುಪಡಿಸಿ ವಿವಿಧ ಉಪ ಕೇಂದ್ರಗಳನ್ನು ಸ್ಥಾಪಿಸುವ ಸ್ಥಳಗಳಲ್ಲಿ ಮಣ್ಣಿನ ನಿರೋಧಕ ಪರೀಕ್ಷೆ, ಅರ್ಥ್‌ಮ್ಯಾಟ್ ವಿನ್ಯಾಸ ಹಾಗೂ ವಿದ್ಯುತ್ ಪರಿವರ್ತಕಗಳ ಟ್ರಾನ್ಸಿಲ್ ತೈಲ ಪರೀಕ್ಷೆಗಳನ್ನು ನಡೆಸಿದ್ದು, 2018–19 ರ ಅವಧಿಯಲ್ಲಿ ರೂ.1,09,70,414/–ಗಳನ್ನು ಸಲಹಾ/ ಪರೀಕ್ಷಾ ಶುಲ್ಕವಾಗಿ ವಸೂಲಿ ಮಾಡಿದೆ.

iv. **ಸೋಡಿಯಂ ಬೆಂಟೋನೈಟ್ ಕ್ಲೇ ಪರೀಕ್ಷೆ:** ಸೋಡಿಯಂ ಬೆಂಟೋನೈಟ್ ಜೇಡಿಮಣ್ಣು ತೇವಾಂಶವನ್ನು ಉಳಿಸಿಕೊಳ್ಳುವ ರಾಸಾಯನಿಕ ಉತ್ಪನ್ನವಾಗಿದ್ದು, ಅರ್ಥ್ ಎಲೆಕ್ಟ್ರೋಡ್/ ಮಣ್ಣಿನ ಪ್ರತಿರೋಧವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪ್ರತಿರೋಧಕತೆಯು 10 ಓಮ್ ಮೀಟರ್‌ಗಿಂತ ಕಡಿಮೆ ಮತ್ತು ಪಿ.ಎಚ್ ಮೌಲ್ಯವು 8 ರಿಂದ 10 ರ ನಡುವೆ ಇರುವುದನ್ನು ಖಚಿತಪಡಿಸಿಕೊಳ್ಳಲು ಕೇಂದ್ರವು ಸೋಡಿಯಂ ಬೆಂಟೋನೈಟ್ ಜೇಡಿಮಣ್ಣಿನ ಮಾದರಿಗಳ ಮೇಲೆ ಪರೀಕ್ಷೆಗಳನ್ನು ನಡೆಸುತ್ತದೆ ಮತ್ತು ಪರಿಮಾಣದ ಪ್ರಕಾರ ಸೂಚ್ಯಾಂಕವು 8 ಕ್ಕಿಂತ ಹೆಚ್ಚಾಗಿದೆ.

v. **ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಪರಿವರ್ತಕಗಳ ಸ್ಥಿತಿಯ ಮೇಲ್ವಿಚಾರಣೆ:** ಆರ್ ಅಂಡ್ ಡಿ ಕೇಂದ್ರವು ಕವಿಪ್ರನಿನಿಯ ಉಪಕೇಂದ್ರಗಳಲ್ಲಿ ಅಸ್ಥಿತ್ವದಲ್ಲಿರುವ ಎಲ್ಲಾ ವಿದ್ಯುತ್ ಪರಿವರ್ತಕಗಳ ತೈಲ ಮಾದರಿಗಳನ್ನು ನಿಯತಕಾಲಿಕವಾಗಿ ಪರೀಕ್ಷೆ ಮಾಡಿ, ಸದರಿ ಪರಿವರ್ತಕಗಳ ಸುಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತದೆ.

ಈ ಕೇಂದ್ರದಲ್ಲಿ ಕವಿಪ್ರನಿನಿಯ ಜಾಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿದ್ಯುತ್ ಪರಿವರ್ತಕಗಳ ತೈಲ ಪರೀಕ್ಷಾ ಫಲಿತಾಂಶಗಳ ಗಣಕೀಕೃತ ಐತಿಹಾಸಿಕ ದತ್ತಾಂಶವನ್ನು ನಿರ್ವಹಿಸಲಾಗುತ್ತಿದೆ. ಈ ದತ್ತಾಂಶವು ಇತ್ತೀಚಿನ ಪರೀಕ್ಷಾ ಫಲಿತಾಂಶಗಳನ್ನು ಹಿಂದಿನ ಫಲಿತಾಂಶಗಳ ಪ್ರವೃತ್ತಿಗಳೊಂದಿಗೆ ಹೋಲಿಸಲು ಮತ್ತು ವಿಶ್ಲೇಷಿಸಲು ಸಹಾಯ ಮಾಡುತ್ತದೆ.

ಈ ಕೇಂದ್ರವು 2018–19 ರ ಅವಧಿಯಲ್ಲಿ 3065 ಸಂಖ್ಯೆಗಳ (ಹೊಸ ಮತ್ತು ಪುನರಾವರ್ತಿತ ಪರೀಕ್ಷಾ ಮಾದರಿಗಳನ್ನು ಒಳಗೊಂಡಿದೆ) ವಿದ್ಯುತ್ ಪರಿವರ್ತಕಗಳ ತೈಲ ಮಾದರಿಗಳನ್ನು ವಿಶ್ಲೇಷಿಸಿದೆ ಮತ್ತು ವಿದ್ಯುತ್ ಪರಿವರ್ತಕಗಳ ಸುಸ್ಥಿತಿಯನ್ನು ಸುಧಾರಿಸಲು ಮತ್ತು ನಿಗಮಕ್ಕೆ ಆದಾಯ ನಷ್ಟವನ್ನು ತಡೆಯಲು ಉಪ ಕೇಂದ್ರಗಳ ಸಿಬ್ಬಂದಿಗೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಶಿಫಾರಸ್ಸು ಮಾಡಿದೆ.

2018–19 ರಲ್ಲಿ 949 ಸಂಖ್ಯೆಯ ತೈಲ ಮಾದರಿಗಳ ಮೇಲೆ ಡಿಸಾಲ್ವೆಡ್ ಗ್ಯಾಸ್ ಅನಾಲಿಸಿಸ್‌ನ್ನು ನಡೆಸಲಾಗಿದೆ.

- 2018–19 ರಲ್ಲಿ 981 ಸಂಖ್ಯೆಯ ತೈಲ ಮಾದರಿಗಳ ಮೇಲೆ ಫ್ಯೂರನ್ ವಿಶ್ಲೇಷಣೆಗಳನ್ನು ನಡೆಸಲಾಗಿದೆ.
- ಈ ಚಟುವಟಿಕೆಗಳು ಆರ್ & ಡಿ ಕೇಂದ್ರದಲ್ಲಿ ಕೈಗೊಳ್ಳುವ ಕಾರ್ಯಗಳ ಪ್ರಮುಖ ಅಂಶವಾಗಿರುತ್ತದೆ.

ಕೆಲವು ಕ್ಲಿಷ್ಟಕರವಾದ ತಾಂತ್ರಿಕ ಸಮಸ್ಯಗಳ ಸಂದರ್ಭದಲ್ಲಿ, ಆರ್ & ಡಿ ಕೇಂದ್ರವು ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಬೆಂಗಳೂರಿನಲ್ಲಿ ನೆಲೆಗೊಂಡಿರುವ ಆರ್ & ಡಿ ವಿಭಾಗವಾದ ಮೆ॥ ಸಿ.ಪಿ.ಆರ್.ಐ ಸಂಸ್ಥೆಯೊಂದಿಗೆ, ಈ ಕೇಂದ್ರವು ಸಮಸ್ಯೆಗಳ ಬಗ್ಗೆ ಸಂವಾದಗಳನ್ನು ನಡೆಸಿ ನಿವಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತದೆ.

ಡಿ. **2018–19ನೇ ಸಾಲಿನ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಪ್ರಗತಿ ಈ ಕೆಳಗಿನಂತೆ ಇದೆ:**

i. 2018–19 ರ ಅವಧಿಗೆ ಮಣ್ಣಿನ ಪ್ರತಿರೋಧಕ ಪರೀಕ್ಷೆ ನಡೆಸುವುದು, ಅರ್ಥ್ ಮ್ಯಾಟ್ ವಿನ್ಯಾಸ (ಇ.ಎಂ.ಡಿ) ಒದಗಿಸುವ (ಪ್ರಸ್ಥಾಪಿತ/ಪರಿಷ್ಕೃತ/ಹೆಚ್ಚುವರಿ ಅರ್ಥ್ ಮ್ಯಾಟ್) ಮತ್ತು ಅರ್ಥಿಂಗ್ ಪರೀಕ್ಷೆ ನಡೆಸುವ ಮತ್ತು ಪರಿಕ್ಷಾರ ಮಾಪನಗಳು.

| ಕ್ರ. ಸಂ | ಉಪಕೇಂದ್ರಗಳ ವೋಲ್ಟೇಜ್ ವರ್ಗ | ಮಣ್ಣಿನ ಪ್ರತಿರೋಧಕ ಪರೀಕ್ಷೆ ನಡೆಸಿದ ಕೇಂದ್ರಗಳು | ಅರ್ಥ್ ಮ್ಯಾಟ್ ವಿನ್ಯಾಸ ಒದಗಿಸಿರುವುದು | ಅರ್ಥಿಂಗ್ ಪರೀಕ್ಷೆ ನಡೆಸಿರುವುದು |
|---|---|---|---|---|
| 1 | 400 ಕೆವಿ | 3 | 01 | 02 |
| 2 | 220 ಕೆವಿ | 17 | 19 | 15 |
| 3 | 110 ಕೆವಿ | 70 | 41 | 3 |
| 4 | 66 ಕೆವಿ | 39 | 50 | 84 |
| 5 | 33 ಕೆವಿ | 16 | 19 | – |
| | **ಒಟ್ಟು** | **145** | **130** | **104** |

ii. 2018 – 19 ರ ಅವಧಿಗೆ ವಿದ್ಯುತ್ ಪರಿವರ್ತಕಗಳ ವೈಡಿಂಗ್ ಮತ್ತು ಬುಷಿಂಗ್ಸ್‌ಗಳ ಮೇಲೆ ಟ್ಯಾನ್–ಡೆಲ್ಟಾ ಮತ್ತು ಕೆಪಸಿಟೆನ್ಸ್ ಪರೀಕ್ಷಿಸಿರುವುದು.

| ಕ್ರ. ಸಂ | ವಿವರಗಳು | 2018–19ರಲ್ಲಿ ಟ್ಯಾನ್–ಡೆಲ್ಟಾ ಮತ್ತು ಕೆಪಸಿಟೆನ್ಸ್ ಪರೀಕ್ಷೆ ನಡೆಸಿರುವುದು |
|---|---|---|
| 1 | 315 ಎಂ.ವಿ.ಎ | 4 |
| 2 | 167 ಎಂ.ವಿ.ಎ/ಐ.ಸಿ.ಟಿ | 10 |
| 3 | 150 ಎಂ.ವಿ.ಎ | 11 |
| 4 | 100 ಎಂ.ವಿ.ಎ | 71 |
| 5 | 67.5 ಎಂ.ವಿ.ಎ | 01 |
| 6 | 31.5 ಎಂ.ವಿ.ಎ | 35 |
| 7 | ರಿಯಾಕ್ಟರ್ | 9 |
| 8 | ಪರಿವರ್ತಕಗಳ ಬುಷಿಂಗ್ಸ್ | 5 |
| 9 | ಸಿಟಿ/ಸಿವಿಟಿಗಳು | 121 |
| | **ಒಟ್ಟು** | **267** |

iii. 2018 – 19 ರ ಅವಧಿಗೆ ಪರಿಸ್ಥಿತಿಯ ಮೇಲ್ವಿಚಾರಣಾ ಪರೀಕ್ಷೆಗಳನ್ನು ನಡೆಸಲಾಗಿದೆ

| **ಪರಿವರ್ತಕಗಳು** | | | |
|---|---|---|---|
| 1 | ತೈಲ ಮಾದರಿಗಳನ್ನು ವಿಶ್ಲೇಶಿಸಲಾಗಿದೆ | ಮಾದರಿಗಳ ಸಂಖ್ಯೆ | 3065 |
| 2 | ವಿದ್ಯುತ್ ಪರಿವರ್ತಕಗಳಲ್ಲಿ ನಿರೋಧನ ನಿರ್ಣಯ ವಿಶ್ಲೇಷಣೆ (ಐಡಾಕ್ಸ್) ಪರೀಕ್ಷೆ | ಪರಿವರ್ತಕಗಳ ಸಂಖ್ಯೆ | 115 |
| 3 | ವಿದ್ಯುತ್ ಪರಿವರ್ತಕಗಳಿಗೆ ಎಸ್ ಎಫ್ ಆರ್ ಎ ಪರೀಕ್ಷೆ | ಪರಿವರ್ತಕಗಳ ಸಂಖ್ಯೆ | 57 |
| 4 | ಕರಗಿದ ಅನಿಲ ವಿಶ್ಲೇಷಣೆ | ಮಾದರಿಗಳ ಸಂಖ್ಯೆ | 949 |
| 5 | ಫ್ಯೂರನ್ ವಿಶ್ಲೇಷಣೆ | ಮಾದರಿಗಳ ಸಂಖ್ಯೆ | 981 |

| **ಅರ್ಥಿಂಗ್ ವ್ಯವಸ್ಥೆ** | | | |
|---|---|---|---|
| 1 | ಸೋಡೊಯಂ ಬೆಂಟೋನೈಟ್ ಮಣ್ಣಿನ ಪರೀಕ್ಷೆ | ಮಾದರಿಗಳ ಸಂಖ್ಯೆ | – |
| 2 | ವಿದ್ಯುತ್ ಕೇಂದ್ರದ ಅರ್ಥ್ ಮ್ಯಾಟ್ ವಿನ್ಯಾಸದ ಅನುಮೋದನೆ | 400/220ಕೆವಿ | 17 |
| 3 | ವಿದ್ಯುತ್ ಕೇಂದ್ರಗಳ ಉನ್ನತೀಕರಣಕ್ಕಾಗಿ ಅರ್ಥ್ ಮ್ಯಾಟ್ ವಿನ್ಯಾಸ ಪರಿಶೀಲನೆ | ವಿದ್ಯುತ್ ಕೇಂದ್ರಗಳ ಸಂಖ್ಯೆ | 166 |
| 4 | ಹೆಚ್ಚುವರಿ ಅರ್ಥ್ ಮ್ಯಾಟ್ | ವಿದ್ಯುತ್ ಕೇಂದ್ರಗಳ ಸಂಖ್ಯೆ | 46 |

| **ಮಿಂಚು ಬಂಧಕಗಳು** | | | |
|---|---|---|---|
| 1 | ಮಿಂಚು ಬಂಧಕಗಳ ಪರಿಸ್ಥಿತಿಯ ಮೇಲ್ವಿಚಾರಣಾ ಪರೀಕ್ಷೆಗಳು | ಮಿಂಚು ಬಂಧಕಗಳ ಸಂಖ್ಯೆ | – |

## ಹಾಟ್ ಲೈನ್ ಶಾಖೆಯ ತಾಂತ್ರಿಕ ಕಾರ್ಯಗಳು:

ಹಾಟ್ ಲೈನ್ ವಿಭಾಗವು, 220 ಕೆ.ವಿ ಯ ವರೆಗಿನ ಪ್ರಸರಣ ಮಾರ್ಗ ಮತ್ತು ಸ್ಟೇಷನ್‌ಗಳ ತುರ್ತುಸ್ಥಿತಿ ನಿರ್ವಹಣೆ ಮತ್ತು ಮುನ್ಸೂಚನೆಯ/ ತಡೆಗಟ್ಟುವ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದು, ಲೈವ್ ಲೈನ್ ನಿರ್ವಹಣೆ ತಂತ್ರವನ್ನು ಹಾಟ್ ಸ್ಟಿಕ್ ವಿಧಾನ ಅಳವಡಿಸಿಕೊಳ್ಳುವ ಮೂಲಕ ನಿರ್ವಹಿಸಲಾಗುತ್ತಿದೆ. ಈ ತಂತ್ರ ಜ್ಞಾನವನ್ನು ಬಳಸಿ ಯಾವುದೇ ವಿದ್ಯುತ್ ಮಾರ್ಗ ಮುಕ್ತತೆಯನ್ನು ತೆಗೆದುಕೊಳ್ಳದೆಯೇ, ಪ್ರಸರಣಾ ಮಾರ್ಗಗಳ ಮತ್ತು ವಿದ್ಯುತ್ ಉಪಕೇಂದ್ರಗಳ ನಿರ್ವಹಣೆಯನ್ನು ಮಾಡಲಾಗುತ್ತದೆ. ಹೀಗಾಗಿ ಅಂತಿಮ ಬಳಕೆದಾರರಿಗೆ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಅಡೆತಡೆಯಾಗದಂತೆ ನಿರಂತರತೆಯನ್ನು ಒದಗಿಸುತ್ತದೆ. ಹಾಟ್ ಲೈನ್ ವಿಭಾಗದ ಸಿಬ್ಬಂಧಿಗಳು ಹಾಟ್ ಲೈನ್ ತರಬೇತಿ ಕೇಂದ್ರ, ರಾಷ್ಟ್ರೀಯ ತರಬೇತಿ ಕೆಂದ್ರ, ಭಾರತ ಸರ್ಕಾರ, ಸೋಮನಹಳ್ಳಿಯಲ್ಲಿ ಹಾಟ್ ಲೈನ್ ತಂತ್ರಗಳಲ್ಲಿ ಪರಿಣಿತಿ ಪಡೆದು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಹಾಟ್ ಲೈನ್ ಶಾಖೆಯ ಚಟುವಟಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

- ಪ್ರಸರಣ ಮಾರ್ಗಗಳಲ್ಲಿ ದೋಷಯುಕ್ತ ಇನ್ಸುಲೇಟರುಗಳನ್ನು ಪರೀಕ್ಷಿಸುವುದು ಮತ್ತು ಪತ್ತೆ ಹಚ್ಚುವಿಕೆ.
- ದೋಷಯುಕ್ತ ಇನ್ಸುಲೇಟರುಗಳನ್ನು ಬದಲಿಸುವುದು.
- ಬೈ–ಪಾಸ್ ಜಂಪುಗಳನ್ನು ಒದಗಿಸುವ ಮೂಲಕ ಪ್ರಸರಣ ಮಾರ್ಗಗಳನ್ನು ಬಲಪಡಿಸುವುದು.
- ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ಉಷ್ಣಾಂಶವನ್ನು(ಹಾಟ್ ಸ್ಪಾಟ್) ಗುರುತಿಸಲು ಥರ್ಮೋವಿಶನ್ ಸ್ಕ್ಯಾನಿಂಗ್ ಬಳಸುವುದು.
- ಇ.ಹೆಚ್.ವಿ.ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಗಳ ಹಾನಿ ತಡುಗಟ್ಟುವ ನಿರ್ವಹಣೆ.
- ತುರ್ತು ಹಾಟ್ ಲೈನ್ ಕೆಲಸಗಳ ನಿರ್ವಹಣೆ.

**2018–19 ರ ಅವಧಿಯಲ್ಲಿ ಹಾಟ್ ಲೈನ್ ವಿಂಗ್ ನಡೆಸಿದ ಚಟುವಟಿಕೆಗಳನ್ನು ಕೆಳಗೆ ನಮೂದಿಸಲಾಗಿದೆ.**

| ಕ್ರ. ಸಂ | ವಿವರಗಳು | ವೋಲ್ಟೇಜ್ ವರ್ಗ ಕೆವಿ.ಯಲ್ಲಿ | | | | ಒಟ್ಟು |
|---|---|---|---|---|---|---|
| | | 400 | 220 | 110 | 66 | |
| 1 | ಪರೀಕ್ಷೆ ನಡೆಸಿದ ನಿರೋಧಕಗಳ ತಂತಿಗಳ(ಇನ್ಸುಲೇಟರ್ ಸ್ಟ್ರಿಂಗ್‌ಗಳ) ಸಂಖ್ಯೆ. | – | 3735 | 1499 | 2870 | 8104 |
| 2 | ದೋಷಯುಕ್ತ ಇನ್ಸುಲೇಟರ್ ಸ್ಟ್ರಿಂಗಗಳನ್ನು ಬದಲಿಸಿದ ಸಂಖ್ಯೆ | – | 35 | 25 | – | 60 |
| 3 | ಹಾಟ್ ಸ್ಪಾಟ್ ಗಳನ್ನು ಗುರುತಿಸುವುದಕ್ಕಾಗಿ ಥರ್ಮೋವಿಶನ್ ಸ್ಕ್ಯಾನಿಂಗ್ ಮೂಲಕ ಪರೀಕ್ಷಿಸಲ್ಪಟ್ಟ ಉಪಕೇಂದ್ರಗಳು/ಇನ್ಸುಲೇಟರ್ ಸ್ಟ್ರಿಂಗ್‌ಗಳ ಸಂಖ್ಯೆ. | 11 | 262 | 317 | 861 | 1451 |
| 4 | ಪರೀಕ್ಷೆ ನಡೆಸಿದ ಜಂಪರುಗಳ ಸಂಖ್ಯೆ | 17 | | | | 17 |
| 5 | ಸಬ್ ಸ್ಟೇಶನ್ ಸ್ವಿಚ್ ಯಾರ್ಡ್‌ಗಳಲ್ಲಿ ತಡೆಗಟ್ಟುವ ನಿರ್ವಹಣೆ – (ಪ್ರಿವೆಂಟೀವ್ ಮೆಂಟೆನೆನ್ಸ್) ಸಂಖ್ಯೆ. | 02 | 264 | 317 | 796 | 1379 |
| 6 | ತಡೆಗಟ್ಟುವ ನಿರ್ವಹಣೆ(ಪ್ರಿವೆಂಟೀವ್ ಮೆಂಟೆನೆನ್ಸ್) ನಡೆಸಿದ ಪ್ರಸರಣ ಮಾರ್ಗಗಳ ಸಂಖ್ಯೆ. | – | 18 | | | 18 |
| 7 | ಇ.ಹೆಚ್.ವಿ ಉಪ ಕೇಂದ್ರಗಳಲ್ಲಿ ಒದಗಿಸಿರುವ ಬೈ ಪಾಸ್ ಜಂಪರುಗಳ ಸಂಖ್ಯೆ. | | 16 | | | 16 |
| 8 | ತುರ್ತು ಸ್ಥಿತಿಗಳ ಸಮಯದಲ್ಲಿ ತುರ್ತು ಸ್ಥಿತಿಗಳನ್ನು ನಿರ್ವಹಿಸಿದ ಮಾರ್ಗಗಳು ಮತ್ತು ಉಪಕೇಂದ್ರಗಳ ಸಂಖ್ಯೆ. | | 65 | | | 65 |
| 9 | ಪ್ರಸರಣಾ ಮಾರ್ಗಗಳಿಂದ ಕಟ್ಟಡಗಳಿಗೆ ಇರುವ ಲಂಬ (ವರ್ಟಿಕಲ್) ಮತ್ತು ಅಡ್ಡ (ಹಾರಿಜಂಟಲ್) ಕ್ಲಿಯರೆನ್ಸ್‌ಗಳ ಮಾಪನ. | | 510 | | | 510 |
| 10 | ವಿವಿಧ ಪ್ರಸರಣ ಮಾರ್ಗಗಳಲ್ಲಿ ಅಳವಡಿಸಿದ ವೈಬ್ರೇಶನ್ ಡ್ಯಾಂಪರುಗಳ ಸಂಖ್ಯೆ. | – | 138 | 186 | 162 | 486 |

**ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣಾ ಶಾಖೆ**

ಮುಖ್ಯ ಇಂಜಿಯರ್(ವಿದ್ಯುತ್) ರವರು ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣಾ ಶಾಖೆಯ ಮುಖ್ಯಸ್ಥರಾಗಿರುತ್ತಾರೆ.

**ತಾ.ಪ.ಗು.ನಿ, ಶಾಖೆಯ ಆದ್ಯ ಕರ್ತವ್ಯ ಮತ್ತು ಜವಬ್ದಾರಿಗಳು:–**

1. ಕಾರ್ಖಾನೆ/ಉಗ್ರಾಣಗಳಲ್ಲಿ ಸಾಮಗ್ರಿ ಮತ್ತು ಉಪಕರಣಗಳ ಪರಿವೀಕ್ಷಣೆ.
2. ವಿದ್ಯುತ್ ಕೇಂದ್ರಗಳ ಕ್ಷೇತ್ರದಲ್ಲಿನ ಸಾಮಗ್ರಿಗಳ ಪರಿವೀಕ್ಷಣೆ.
3. ನಿಯತಕಾಲಿಕವಾಗಿ ಉಗ್ರಾಣಗಳ ಪರಿವೀಕ್ಷಣೆ.
4. ನಿಯತಕಾಲಿಕವಾಗಿ ಪ್ರಗತಿಯಲ್ಲಿರುವ ವಿದ್ಯುತ್ ಉಪಕೇಂದ್ರ/ ಮಾರ್ಗಗಳ ಮತ್ತು ಉನ್ನತೀಕರಿಸಲಾದ ಕಾಮಗಾರಿಗಳ ಪರಿವೀಕ್ಷಣೆ.
5. ನಿಯತಕಾಲಿಕವಾಗಿ ಚಾಲ್ತಿಯಲ್ಲಿರುವ ವಿದ್ಯುತ್ ಉಪಕೇಂದ್ರ/ಮಾರ್ಗಗಳ ಪರಿವೀಕ್ಷಣೆ. ಪ್ರತ್ಯೇಕ ಮಾರ್ಗಗಳು ಮತ್ತು ಹೆಚ್ಚಿನ ಸಾಮರ್ಥ್ಯಕ್ಕೆ ಬಲವರ್ಧನೆಗೊಳಿಸುವ ಕಾಮಗಾರಿಗಳ ಕೆಲಸ.
6. ಪೂರ್ಣಗೊಂಡ ವಿದ್ಯುತ್ ಉಪಕೇಂದ್ರಗಳ/ಮಾರ್ಗ ಕಾಮಗಾರಿಗಳ ತಾಂತ್ರಿಕ ಪರಿಶೋಧನೆ.
7. ದೂರುಗಳು ಬಂದಿರುವ ಕಾರ್ಯಗಳ ಬಗ್ಗೆ ತನಿಖೆ ಮಾಡುವುದು.
8. ಪ್ರಗತಿಯ ಹಂತದಲ್ಲಿರುವ ಸ್ವತಂತ್ರ ವಿದ್ಯುತ್ ಉತ್ಪಾದಕರ, ಸ್ವಯಂ ಕಾರ್ಯನಿರ್ವಹಣೆ, ಬದಲಾವಣೆ, ಕಾಮಗಾರಿಗಳ ಸಾಮಗ್ರಿಗಳ ಪರೀವೀಕ್ಷಣೆ.
9. ಸಾಮಗ್ರಿಗಳ ಉತ್ಪಾದಕರ ಕಾರ್ಖಾನೆಗಳ ಮೂಲ ಸೌಕರ್ಯಗಳ ಬಗ್ಗೆ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಪರಿವೀಕ್ಷಣೆ ಕೈಗೊಳ್ಳುವುದು.
10. ವಿದ್ಯುತ್ ಉಪಕೇಂದ್ರ/ಮಾರ್ಗಗಳಿಗೆ ಸಂಬಂಧಿಸಿದಂತೆ ಸಿವಿಲ್ ಕಾಮಗಾರಿಗಳ ಪರಿವೀಕ್ಷಣೆ.
11. ನಿಗಮದಿಂದ ನಿರ್ದೇಶಿಸಿರುವ ಇತರೆ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದು.

ಮೇಲೆ ತಿಳಿಸಿರುವ ಕರ್ತವ್ಯಗಳೊಂದಿಗೆ ನಿಗಮದಿಂದ ಉಲ್ಲೇಖಿಸಲಾದ ನಿರ್ದೇಶಿಸಲಾದ ಯಾವುದೇ ನಿಖರವಾದ ಪರಿವೀಕ್ಷಣೆಗಳು ಪುನರಾವಲೋಕನ/ ತಪಾಸಣೆಗಳನ್ನೂ ಸಹ ಕಾರ್ಯನಿರ್ವಹಿಸುವುದು ಹಾಗೂ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

ಈ ಶಾಖೆಯು ಕರ್ನಾಟಕ ರಾಜ್ಯಾದ್ಯಂತ ವ್ಯಾಪ್ತಿಯನ್ನು ಹೊಂದಿದೆ. ಈ ಶಾಖೆಯಲ್ಲಿ ನಿಯತ ಕಾಲದಲ್ಲಿ 995 ಸಂಖ್ಯೆಗಳ ಉಪ ಕೇಂದ್ರಗಳನ್ನು (66 ಕೆ.ವಿ ವರ್ಗ ಮತ್ತು ಮೇಲ್ಪಟ್ಟದ್ದು) ಮತ್ತು 931 ಸಂಖ್ಯೆಗಳ ಇ.ಹೆಚ್.ಟಿ ಮಾರ್ಗಗಳನ್ನು (66 ಕೆ.ವಿ ವರ್ಗ ಮತ್ತು ಮೇಲ್ಪಟ್ಟದ್ದು) ಆರ್ಥಿಕ ವರ್ಷದಲ್ಲಿ ತಪಾಸಣೆ ಮಾಡಿ ವರದಿ ಸಲ್ಲಿಸಲಾಯಿತು.

## ಆ. ವ ಏಪ್ರಿಲ್–2018 ರಿಂದ ಮಾರ್ಚ್–2019 ರವರೆಗಿನ ಪ್ರಗತಿಯ ವರದಿ ಈ ಕೆಳಕಂಡಂತಿದೆ:–

| ಕ್ರ ಸಂ | ವಿವರಗಳು | ವಾರ್ಷಿಕ ಗುರಿ | ಸಾಧನೆ | ಷರಾ |
|---|---|---|---|---|
| **1** | **ಉಗ್ರಾಣ ತಪಾಸಣೆ** | 29 | 25 | |
| **2** | **ಪ್ರಗತಿಯಲ್ಲಿರುವ ಕಾಮಗಾರಿಗಳ ತಪಾಸಣೆ** | | | |
| | (ಎ) ಉಪ ಕೇಂದ್ರಗಳು | 96 | 96 | |
| | (ಬಿ) ಪ್ರಸರಣ ಮಾರ್ಗಗಳು | 97 | 97 | |
| | (ಸಿ) ಉನ್ನತಿಕರಣ/ಹೆಚ್ಚುವರಿ | 92 | 92 | |
| | (ಡಿ) ಪ್ರತ್ಯೇಕ ಮಾರ್ಗಗಳು | 50 | 50 | |
| | (ಇ) ಟರ್ಮಿನಲ್ ಬೇಗಳು | 5 | 5 | |
| **3** | **ಹಾಲಿ ಉಪ ಕೇಂದ್ರಗಳ & ಮಾರ್ಗಗಳ ತಪಾಸಣೆ** | | | |
| | (ಎ) ಉಪ ಕೇಂದ್ರಗಳು | 1135 | 995 | |
| | (ಬಿ) ಪ್ರಸರಣ ಮಾರ್ಗಗಳು | 1586 | 931 | |
| **4** | **ಸಾಮಾಗ್ರಿಗಳ ತಪಾಸಣೆ** | | | |
| | **(ಎ) ಕಾರ್ಖಾನೆಗಳಲ್ಲಿ** | | | |
| | (1) ಕ.ವಿ.ಪ್ರ.ನಿ.ನಿ ಯ ಕಾಮಗಾರಿ | 0 | 1902 | |
| | (2) ಐ.ಪಿ.ಪಿ ಯ ಕಾಮಗಾರಿ | 0 | 0 | |
| | (3) ಸ್ವಯಂ ನಿರ್ವಹಣಾ ಕಾಮಗಾರಿ | 0 | 131 | |
| | **(ಬಿ) ಕ.ವಿ.ಪ್ರ.ನಿ.ನಿ ಯ ಕಾಮಗಾರಿಯ ಸ್ಥಳದಲ್ಲಿ** | | | |
| | (1) ಕ.ವಿ.ಪ್ರ.ನಿ.ನಿ ಯ ಕಾಮಗಾರಿಗಳು | 0 | 320 | |
| | (2) ಐ.ಪಿ.ಪಿ ಯ ಕಾಮಗಾರಿ | 0 | 0 | |
| | (3) ಸ್ವಯಂ ನಿರ್ವಹಣಾ ಕಾಮಗಾರಿ | 0 | 27 | |
| | **(ಸಿ) ಉಗ್ರಾಣದಲ್ಲಿ** | 0 | 1561 | |
| **5** | **ಪೂರ್ಣಗೊಂಡ ಕಾಮಗಾರಿಗಳ ಪರಿಶೀಲನೆ (17–18)** | | | |
| | (ಎ) ಉಪ ಕೇಂದ್ರಗಳು | 21 | 17 | |
| | (ಬಿ) ಪ್ರಸರಣ ಮಾರ್ಗಗಳು | 30 | 21 | |
| | (ಸಿ) ಉನ್ನತಿಕರಣ/ಹೆಚ್ಚುವರಿ | 37 | 8 | |
| **6** | **ಮಾರಾಟಗಾರರ ವಿಶ್ಲೇಷಣೆಯ ತನಿಖೆ** | **0** | **13** | |
| **7** | **ಇತರೆ** | **0** | **1** | |

**ಸಿವಿಲ್ ಕಾಮಗಾರಿಗಳು:**

| ಕ್ರ. ಸಂ | ವಿವರಗಳು | ವಾರ್ಷಿಕ ಗುರಿ | ಸಾಧನೆ | ಷರಾ |
|---|---|---|---|---|
| 1 | **ಪ್ರಗತಿಯಲ್ಲಿರುವ ಕಾಮಗಾರಿಗಳ ಪರಿಶೀಲನೆ** | | | |
| | (ಎ) ಉಪ ಕೇಂದ್ರಗಳು | 96 | 96 | |
| 2 | **ಹಾಲಿ ಉಪ–ಕೇಂದ್ರಗಳ & ಮಾರ್ಗಗಳ ತಪಾಸಣೆ** | | | |
| | (ಎ) ಉಪ–ಕೇಂದ್ರಗಳು | | 29 | |
| | (ಬಿ) ಮಾರ್ಗಗಳು | | | |
| 3 | **ಪೂರ್ಣಗೊಂಡ ಕಾಮಗಾರಿಗಳ ಪರಿಶೀಲನೆ** | | | |
| | (ಎ) ಉಪ–ಕೇಂದ್ರಗಳು/ಇತರೆ | 24 | 24 | |
| | (ಬಿ) ಮಾರ್ಗಗಳು | | | |
| | (ಸಿ) ಉನ್ನತಿಕರಣ/ಹೆಚ್ಚುವರಿ | 9 | 9 | |
| | (ಡಿ) ಇತರೆ | | 1 | |
| | **ಒಟ್ಟು** | | **159** | |

**ಟಿಪ್ಪಣಿ:**

ಕಾರ್ಯಾರಂಭಗೊಳ್ಳುವ ಉಪ–ಕೇಂದ್ರಗಳ/ಮಾರ್ಗಗಳ ವಾರ್ಷಿಕ ಗುರಿಯು ಬದಲಾಗಬಹುದು

ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪ್ರತಿ ತಿಂಗಳು ಪರಿಶೀಲಿಸಲಾಗುವುದು.

ಅಸ್ತಿತ್ವದಲ್ಲಿರುವ ಎಲ್ಲಾ ಉಪ–ಕೇಂದ್ರಗಳನ್ನು ವಾರ್ಷಿಕವಾಗಿ ಪರಿಶೀಲಿಸುವುದು.

ಅಸ್ತಿತ್ವದಲ್ಲಿರುವ ಎಲ್ಲಾ ಪ್ರಸರಣ ಮಾರ್ಗಗಳನ್ನು ಎರಡು ವರ್ಷಕ್ಕೊಮ್ಮೆ ಪರಿಶೀಲಿಸುವುದು.

**2018–19 ನೇ ಸಾಲಿನ ಮಾಹಿತಿ ತಂತ್ರಜ್ಞಾನ ಶಾಖೆಯ ಚಟುವಟಿಕೆಗಳು ಮತ್ತು ಸಾಧನೆಗಳ ವಿವರಗಳು:**

ಮಾಹಿತಿ ತಂತ್ರಜ್ಞಾನ ಶಾಖೆಯು ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಕ.ವಿ.ಪ್ರ.ನಿ.ನಿ.ಯ ಅಧಿಕೃತ ವೆಬ್‌ಸೈಟ್, ಅಂತರ್‌ಜಾಲ (ಇಂಟರ್‌ನೆಟ್) ಇಂಟ್ರಾನೆಟ್ ಪೋರ್ಟಲ್, ಇ–ಪ್ರಸರಣ, ಡಾಟಾ ಸೆಂಟರ್, ಕಾವೇರಿ ಭವನದಲ್ಲಿರುವ ಕಛೇರಿಗಳ ನೆಟ್‌ವರ್ಕ್, ಯಂತ್ರಾಂಶ (ಹಾರ್ಡ್‌ವೇರ್) ಹಾಗೂ ಸಿಸ್ಟಮ್ ಅಡ್ಮಿನಿಸ್ಟ್ರೇಶನ್, ದತ್ತಾಂಶ ನಿರ್ವಹಣೆ, ತಂತ್ರಾಂಶ ಅಭಿವೃದ್ಧಿಪಡಿಸುವುದು, ಯಂತ್ರಾಂಶ ಮತ್ತು ತಂತ್ರಾಂಶ ಖರೀದಿ ಮೊದಲಾದ ಕೆಲಸಗಳನ್ನು ನಿರ್ವಹಿಸುತ್ತದೆ.

2018–19 ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗಿದೆ:

1. ತಂತ್ರಾಂಶ ಅಭಿವೃದ್ಧಿಪಡಿಸಿರುವುದು ಮತ್ತು ನಿರ್ವಹಣೆ.
   - ಪೇರೋಲ್
   - ಪಿಂಚಣಿ, ಗ್ರಾಚ್ಯುಟಿ ಕೊಡುಗೆ
   - ಇಲಾಖಾ ಪರೀಕ್ಷೆ
   - ಎ ಮತ್ತು ಬಿ ಶ್ರೇಣಿ ಅಧಿಕಾರಿಗಳ ವಿವರ
   - ಕವಿಪ್ರನಿನಿ ಯೋಜನೆಗಳ ಭಾವಚಿತ್ರಗಳ ಅಪ್ಲೋಡ್ ಮಾಡುವುದು.

- ಲೋಡ್ ಕರ್ವ್ ವಿವರಗಳನ್ನು ಅಪ್ಲೋಡ್ ಮಾಡುವುದು.
- ಹುಂಡಿಗಳ ನಿರೂಪಣಾ ವ್ಯವಸ್ಥೆ.
- ಕಡತ ನಿರೂಪಣಾ ವ್ಯವಸ್ಥೆ
- ಅಂತರ ಘಟಕ ಲೆಕ್ಕಗಳ–ವಹಿವಾಟು
- ಸಿಬ್ಬಂದಿಯ ತಿಂಗಳವಾರು ವಂತಿಗೆ – ಎನ್.ಡಿ.ಸಿ.ಪಿ.ಎಸ್
- 31.03.2019 ರಂತೆ ಕವಿಪ್ರನಿನಿ ಮತ್ತು ವಿ.ಸ.ಕಂ ಗಳ ಹುದ್ದೆಗಳ ಮತ್ತು ಸಿಬ್ಬಂದಿಯ ವಿವರಗಳು
- ಸ್ಟೇಷನ್ ಈ ಲಾಗ್
- ಉಪಕೇಂದ್ರ ಮತ್ತು ವಿದ್ಯುತ್ ಪರಿವರ್ತಕಗಳ ವಿವರಗಳನ್ನು ಅಪ್ಲೋಡ್ ಮಾಡುವುದು
- ಜಿ.ಎಸ್.ಟಿ. ತಂತ್ರಾಂಶ
- ಅಂತರ್ಜಾಲದಲ್ಲಿ ವರ್ಗಾವಣೆ ಕೋರುವ ಅರ್ಜಿಗಳಿಗೆ ಸಂಬಂಧಿಸಿದ ತಂತ್ರಾಂಶ
- ದಾಸ್ತಾನು ನಿರ್ವಾಹಣಾ ವ್ಯವಸ್ಥೆ.
- ಬ್ಯಾಂಕ್ ಸಮನ್ವಯ ವ್ಯವಸ್ಥೆ.
- ಎಸ್ಕಾಂಗಳ ಕಾರ್ಯಕ್ಷಮತೆ ಮೇಲ್ವಿಚಾರಣಾ ವ್ಯವಸ್ಥೆ.

2 ಕ.ವಿ.ಪ್ರ.ನಿ.ನಿ ಗೆ ಸಂಬಂಧಿಸಿದ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಬಳಸುವ ಅಧಿಕಾರಿಗಳಿಗೆ ಯೂಸರ್ ಐಡಿ ರಚನೆ, ನವೀಕರಣ, ಮ್ಯಾಪಿಂಗ್ ಮತ್ತು ಅಧಿಕಾರಿಗಳಿಗೆ ಹೊಣೆಗಾರಿಕೆ ನೀಡುವುದು.

3 ಬಯೋಮೆಟ್ರಿಕ್ ಹಾಜರಾತಿ ಉಸ್ತುವಾರಿ ವ್ಯವಸ್ಥೆ.

4 ಮಾರಾಟಗಾರರಿಗೆ ಅನುಮೋದನೆ, ಓಪನ್ ಅಕ್ಸೆಸ್‌ನಲ್ಲಿ ಕ.ವಿ.ಪ್ರ.ನಿ.ನಿ. ಗೆ ಅನ್ವಯವಾಗುವ ಹೆಚ್.ಟಿ. ಗ್ರಾಹಕರು ವಿದ್ಯುತ್ ಸಂಪರ್ಕ ಪಡೆಯಲು ಅನುವುಮಾಡಲು, ಆನ್ ಲೈನ್ ಸರ್ವಿಸ್‌ನ ತಂತ್ರಾಂಶದ ಅಭಿವೃದ್ಧಿಪಡಿಸುವ ಏಜೆನ್ಸಿಯೊಂದಿಗೆ ಸಮನ್ವಯತೆ, ಹೆಚ್.ಟಿ. ಗ್ರಾಹಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಅಭಿವೃದ್ಧಿಪಡಿಸಿದ ಅಪ್ಲಿಕೇಷನ್ ಸಾಫ್ಟ್‌ವೇರ್‌ನೊಂದಿಗೆ ಇಂಟಗ್ರೇಷನ್ ಮಾಡುವುದು.

5. ಬೆಂಗಳೂರು ಪ್ರಸರಣಾ ವಲಯದಲ್ಲಿ ಜಿಐಎಸ್ ಸಮೀಕ್ಷೆಯ ಮಾಹಿತಿಯನ್ನು ಸಂಯೋಜಿಸುವ ಮೂಲಕ ಪ್ರಸರಣಾ ಮಾರ್ಗಗಳು, ಇ.ಹೆಚ್.ವಿ ಕೇಬಲ್‌ಗಳು, ವಿದ್ಯುತ್ ಗೋಪುರಗಳು ಮತ್ತು ಕವಿಪ್ರನಿನಿ ನಿಗಮಕ್ಕೆ ಸಂಬಂಧಿತ ವಿದ್ಯುತ್ ಉಪಕೇಂದ್ರಗಳಿಗಾಗಿ ಜಿಐಎಸ್ ತಂತ್ರಾಂಶ ವಿನ್ಯಾಸ, ಅಭಿವೃದ್ಧಿ ಮತ್ತು customization ಗಾಗಿ ಏಜೆನ್ಸಿಯೊಂದಿಗೆ ಸಮನ್ವಯತೆ ಹೊಂದುವುದು.

6. ಕಾವೇರಿ ಭವನ ಹಾಗೂ ರಾಜ್ಯದ ಕ.ವಿ.ಪ್ರ.ನಿ.ನಿ ಕಛೇರಿಗಳ ಉಪಯೋಗಕ್ಕಾಗಿ ಈ ಕೆಳಕಂಡ ಖರೀದಿಗಳನ್ನು ಮಾಹಿತಿ ತಂತ್ರಜ್ಞಾನ ಶಾಖೆಯಿಂದ ನಿರ್ವಹಿಸಲಾಗುತ್ತಿದೆ.

| ಕ್ರ.ಸಂ | ವಿವರ | ಸಂಖ್ಯೆ |
|---|---|---|
| 1 | ಡೆಸ್ಕ್ ಟಾಪ್ ಕಂಪ್ಯೂಟರ್‌ಗಳು | 102 |
| 2 | ಲ್ಯಾಪ್ ಟಾಪ್‌ಗಳು | 04 |
| 3 | ಪ್ರಿಂಟರ್ ಮತ್ತು ಸ್ಕ್ಯಾನರ್‌ಗಳು | 08 |
| 4 | ಪ್ರಿಂಟರ್‌ಗಳು | 06 |
| 5 | ಯು.ಪಿ.ಎಸ್.ಗಳು | 07 |

7. ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಕ.ವಿ.ಪ್ರ.ನಿ.ನಿ ಆಡಳಿತ ಕಛೇರಿ ಮತ್ತು ಇತರೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಒದಗಿಸಿರುವ ಮಾಹಿತಿ ದತ್ತಾಂಶವನ್ನು ನಿರ್ವಹಿಸಲಾಗುತ್ತಿದೆ. 2018-19 ನೇ ಸಾಲಿನಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಮತ್ತು ವಿಲೇವಾರಿಯಾಗಿರುವ ಅರ್ಜಿಗಳ ಸಂಖ್ಯೆಯ ವಿವರಗಳು ಈ ಕೆಳಗೆ ನಮೂದಿಸಲಾಗಿದೆ.

| **ಒಟ್ಟು ಸಾರ್ವಜನಿಕ ಅಧಿಕಾರಿಗಳ ಸಂಖ್ಯೆ** | **ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ** | **2018-19 ನೇ ಸಾಲಿನಲ್ಲಿ ವಿಲೇವಾರಿ ಮಾಡಿರುವ ಅರ್ಜಿಗಳ ಸಂಖ್ಯೆ** |
|---|---|---|
| 111 | 1853 | 1847 |

**2018-19 ನೇ ಸಾಲಿನ ಎಂ.ಐ.ಎಸ್. ಶಾಖೆಯ ಚಟುವಟಿಕೆಗಳು ಮತ್ತು ಸಾಧನೆಗಳ ವಿವರಗಳು**

ಎಂ.ಐ.ಎಸ್. ಶಾಖೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳು/ಅಂಕಿ-ಅಂಶಗಳನ್ನು ಕಲೆ ಹಾಕುವ ಮತ್ತು ಕ್ರೋಢೀಕರಿಸುವ ಜವಾಬ್ದಾರಿಯನ್ನು ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರ, ಕೇಂದ್ರ ಸರ್ಕಾರದ - ವಿದ್ಯುತ್ ಸಚಿವಾಲಯ, ರಾಜ್ಯ ಸರ್ಕಾರ, ಯೋಜನಾ ಇಲಾಖೆ, ಶಾಸನಬದ್ಧ ಸಂಸ್ಥೆಗಳು ಕೋರುವ ಮಾಹಿತಿಗಳನ್ನು ನಿಯಮಿತವಾಗಿ ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ

ಎಂ.ಐ.ಎಸ್. ಶಾಖೆಯು ಪ್ರತಿ ತಿಂಗಳು ಗ್ರಾಮೀಣ ವಿದ್ಯುದೀಕರಣ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಪ್ರಗತಿಯ ವರದಿಗಳನ್ನು ಗ್ರಾಮೀಣ ವಿದ್ಯುದೀಕರಣ ನಿಗಮ, ನವದೆಹಲಿ ರವರಿಗೆ ಸಲ್ಲಿಸುವುದಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು, ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆ/ ಕೆ.ಡಿ.ಪಿ. ಸಭೆಗಳಿಗೆ ಒದಗಿಸುತ್ತಿದೆ.

ಎಂ.ಐ.ಎಸ್. ಶಾಖೆಯು ಮುಖ್ಯವಾಗಿ ವಿಧಾನ ಮಂಡಲದ ಮಾನ್ಯ ಸದಸ್ಯರುಗಳು ಕೋರುವ ಮಾಹಿತಿಗಳಿಗೆ ಮತ್ತು ಅಧಿವೇಶನದ ಸಮಯದಲ್ಲಿ ಕೋರಲಾಗುವ ಪ್ರಶ್ನೆಗಳಿಗೆ ಹಾಗೂ ವಿವಿಧ ನಿಯಮಗಳಡಿ ಕೋರಲಾದ ಸೂಚನೆಗಳಿಗೆ ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳಿಂದ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಕ್ರೋಢೀಕರಿಸಿ, ಕರಡು ಉತ್ತರಗಳನ್ನು ತಯಾರಿಸಿ, ಇಂಧನ ಇಲಾಖೆಗೆ ಸಲ್ಲಿಸಲಾಗುತ್ತದೆ. 2018-19ನೇ ಸಾಲಿನಲ್ಲಿ 3 ಸಂಖ್ಯೆಯ ವಿಧಾನ ಮಂಡಲದ ಅಧಿವೇಶನಗಳು ಜರುಗಿದ್ದು, ವಿವರಗಳು ಈ ಕೆಳಕಂಡಂತಿವೆ:-

| **ಕ್ರ.ಸಂ** | **ಅವಧಿ** | **ದಿನಗಳು** | **ಅಧಿವೇಶನ** |
|---|---|---|---|
| 1. | 02-07-2018 ರಿಂದ 13-07-2018 | 11 ದಿನಗಳು | ಮುಂಗಾರು ಅಧಿವೇಶನ |
| 2. | 10-12-2018 ರಿಂದ 21-12-2018 | 10 ದಿನಗಳು | ಚಳಿಗಾಲದ ಅಧಿವೇಶನ (ಬೆಳಗಾವಿ) |
| 3. | 06-02-2019 ರಿಂದ 14-02-2019 | 07 ದಿನಗಳು | ಬಜೆಟ್ ಅಧಿವೇಶನ |

ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ, ವಿಧಾನ ಸಭೆಯ 148 ಪ್ರಶ್ನೆಗಳು, ವಿಧಾನ ಪರಿಷತ್ತಿನ 50 ಪ್ರಶ್ನೆಗಳೂ ಸೇರಿದಂತೆ ಒಟ್ಟಾರೆ 198 ಸಂಖ್ಯೆಯ ಪ್ರಶ್ನೆಗಳಿಗೆ ಮತ್ತು ವಿವಿಧ ನಿಯಮಗಳಡಿಯಲ್ಲಿ/ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ 7 ಸಂಖ್ಯೆಯ ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಿಸಲಾಗಿದೆ.

ಎಂ.ಐ.ಎಸ್. ಶಾಖೆಯಿಂದ ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಲೋಕಸಭೆ/ರಾಜ್ಯಸಭೆಯ ಪ್ರಶ್ನೆಗಳಿಗೂ ಸಹ ಉತ್ತರಿಸಲಾಗುತ್ತಿದೆ. 2018-19ನೇ ಸಾಲಿನಲ್ಲಿ ಒಂದು ಸಂಖ್ಯೆಯ ರಾಜ್ಯಸಭೆ ಪ್ರಶ್ನೆಗೆ ಉತ್ತರಿಸಲಾಗಿದೆ.

ಮುಂದುವರೆದು, ವಿಧಾನ ಮಂಡಲದ ಅರ್ಜಿ ಸಮಿತಿಗಳು, ಭರವಸೆ ಸಮಿತಿಗಳು ಹಾಗೂ ಇತರೆ ಸಮಿತಿಗಳು ಕೋರುವ ಮಾಹಿತಿಗಳನ್ನು ಸಹ ಒದಗಿಸಲಾಗುತ್ತಿದೆ.

**ಎ.ಪಿ.ಆರ್. ಮತ್ತು ಪ್ರಸರಣ ಜಕಾತಿ:**

1. **ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಮತ್ತು ಬಹು ವಾರ್ಷಿಕ ಜಕಾತಿಯ ಅರ್ಜಿ:** ವಾರ್ಷಿಕ ಆದಾಯದ ಅವಶ್ಯಕತೆ ಮತ್ತು ಮುಂದಿನ ನಿಯಂತ್ರಣ ಅವಧಿಗೆ ಪ್ರಸರಣ ಜಕಾತಿ ದರದ ಪರಿಷ್ಕರಣೆಯ ಅನುಮೋದನೆಗಾಗಿ ಕವಿಪ್ರನಿನಿಯು

ಲೆಕ್ಕ ಪರಿಶೋಧಿತ ವಾರ್ಷಿಕ ಲೆಕ್ಕಗಳ ಆಧಾರದ ಮೇರೆಗೆ ದಿ:30.11.2018 ರಂದು ಕೆ.ಇ.ಆರ್.ಸಿ ಮುಂದೆ ಹಣಕಾಸು ವರ್ಷ–2018 ರ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಮತ್ತು ಹಣಕಾಸು ವರ್ಷ 2020–2022 ರ ಬಹು ವಾರ್ಷಿಕ ಜಕಾತಿ ದರದ ಅರ್ಜಿಯನ್ನು ಸಲ್ಲಿಸಿತು.

2. ಕೆ.ಇ.ಆರ್.ಸಿ ಯು ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆಯಲ್ಲಿ ರೂ.2,972 ಕೋಟಿಗಳಷ್ಟು ಮೊತ್ತದ ವಾರ್ಷಿಕ ಆದಾಯದ ಅಗತ್ಯವನ್ನು ಹಣಕಾಸು ವರ್ಷ 2018 ಕ್ಕೆ ಅನುಮತಿಸಿದೆ.
3. ಹಣಕಾಸು ವರ್ಷ 2020–2022 ರ ವಾರ್ಷಿಕ ಆದಾಯ ಅವಶ್ಯಕತೆಯಲ್ಲಿ ಕೆ.ಇ.ಆರ್.ಸಿ ಯು ಹಣಕಾಸು ವರ್ಷ–2020 ಕ್ಕೆ ರೂ.3,506.24 ಕೋಟಿ, ಹಣಕಾಸು ವರ್ಷ–2021 ಕ್ಕೆ ರೂ.3,645.17 ಕೋಟಿ ಹಾಗೂ ಹಣಕಾಸು ವರ್ಷ–2022 ಕ್ಕೆ ರೂ.3,910.48 ಕೋಟಿಗಳಿಗೆ ಅನುಮೋದನೆಯನ್ನು ನೀಡಿದೆ.
4. ಕೆ.ಇ.ಆರ್.ಸಿ ಯ ತನ್ನ ದಿನಾಂಕ 30 ಮೇ 2019 ರ ಆದೇಶದಲ್ಲಿ ಹಣಕಾಸು ವರ್ಷ–2018ಕ್ಕೆ ಶೇಕಡಾ 99.43 ನಷ್ಟು ಉತ್ತಮ ಪ್ರಸರಣ ಜಾಲದ ಲಭ್ಯತೆಯ ಸಾಧನೆಗೆ ಕೆಪಿಟಿಸಿಎಲ್ ಗೆ ರೂ.21.68 ಕೋಟಿ ಪ್ರೋತ್ಸಾಹಕ ಧನವನ್ನು ನೀಡಿದೆ.

**ಮಾನವ ಸಂಪನ್ಮೂಲ ಅಭಿವೃದ್ಧಿ:**

ಕವಿಪ್ರನಿನಿ ಅಗತ್ಯ ಸೇವೆಗಳ ಸಂಸ್ಥೆಯಾಗಿರುವುದರಿಂದ ವಿದ್ಯುತ್ ಕ್ಷೇತ್ರದ ತಾಂತ್ರಿಕ ಮತ್ತು ಆರ್ಥಿಕ ಅಂಶಗಳಲ್ಲಿ ವೃತ್ತಿಪರ ಕೆಲಸವನ್ನು ನಿರಂತರವಾಗಿ ತಿಳಿದುಕೊಳ್ಳುವುದು ಮತ್ತು ನವೀಕರಿಸುವುದು ಹೆಚ್ಚು ಕಡ್ಡಾಯವಾಗಿರುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿ ಕವಿಪ್ರನಿನಿಯಲ್ಲಿ ಅಧಿಕಾರಿ/ ನೌಕರರುಗಳಿಗೆ ವಿದ್ಯುತ್ ಪ್ರಸರಣಾ ಮತ್ತು ವಿತರಣಾ ತರಬೇತಿಯ ಜೊತೆಗೆ ಪ್ರತಿಯೊಬ್ಬರ ಸರ್ವಾಂಗೀಣ ಬೆಳವಣಿಗೆಗೂ ಅನುಕೂಲವಾಗುವಂತೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ತರಬೇತಿಗಳು ಅಧಿಕಾರಿ/ ನೌಕರ ವರ್ಗಗಳ ಕಾರ್ಯ ಕ್ಷಮತೆ ಮತ್ತು ಕೌಶಲ್ಯವನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿರುತ್ತದೆ. ಇದರಿಂದ ಸಂಸ್ಥೆಗೂ ಲಾಭದಾಯಕವಾಗುತ್ತದೆ. ಪ್ರತಿಯೊಬ್ಬ ಅಧಿಕಾರಿ / ನೌಕರರ ಸಾಮರ್ಥ್ಯಕ್ಕನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿ, 12 ಎಕರೆ ಪ್ರದೇಶದಲ್ಲಿ ವಿಸ್ತಾರಗೊಂಡಿದ್ದು, ಈ ಕೆಳಗಿನ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

- 9 ತರಬೇತಿ ಕೊಠಡಿಗಳಿದ್ದು, ಪ್ರತಿ ಕೊಠಡಿಯಲ್ಲಿ 50 ಶಿಕ್ಷಣಾರ್ಥಿಗಳಿಗೆ ಸ್ಥಳಾವಕಾಶವಿರುತ್ತದೆ.
- 2 ವಸತಿ ಸಂಕೀರ್ಣಗಳಿದ್ದು, ಪ್ರತಿ ಸಂಕೀರ್ಣದಲ್ಲಿ 50 ಜನರಿಗೆ ಸ್ಥಳಾವಕಾಶವಿರುತ್ತದೆ.
- ಒಳಾಂಗಣ ಉಪಹಾರ ಗೃಹದ ಸೌಕರ್ಯ
- ಯೋಗ ಮಂದಿರ
- ಒಳಾಂಗಣ ಕ್ರೀಡಾ ಕೊಠಡಿಗಳು
- ಒಳಾಂಗಣ ಷಟಲ್ ಬ್ಯಾಡ್ಮಿಂಟನ್ ಆವರಣ
- ದೊಡ್ಡ ಹೊರಾಂಗಣ ಕ್ರೀಡಾ ಪ್ರದೇಶ
- ಗ್ರಂಥಾಲಯ

ಇವುಗಳೊಂದಿಗೆ ಹೊಸದಾಗಿ 400 ರಿಂದ 500 ಜನ ಕುಳಿತುಕೊಳ್ಳಲು ಸ್ಥಳಾವಕಾಶವಿರುವ ವಿವಿದೊದ್ದೇಶ ಸಭಾಂಗಣ, ಆಂಫಿ ಥಿಯೇಟರ್, 200 ಶಿಕ್ಷಣಾರ್ಥಿಗಳು ಇರಲು ಅಧಿಕ ವಸತಿ ಗೃಹ, ಸಮ್ಮೇಳನ ಕೊಠಡಿ, ಡಿಜಿಟಲ್ ಗ್ರಂಥಾಲಯ, ಕಾರ್ಯೋನ್ಮುಖ ಮಾದರಿ ಉಪಕರಣಗಳ ಪ್ರದರ್ಶನಾಲಯ ಹಾಗೂ ಇತರೆ ಉನ್ನತ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದುವುದರೊಂದಿಗೆ, ಕವಿಪ್ರನಿನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವನ್ನು **"ಶ್ರೇಷ್ಠತೆಯ ಕೇಂದ್ರ"** ವನ್ನಾಗಿ ಮಾಡುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

## 2018–19ನೇ ಹಣಕಾಸು ವರ್ಷದಲ್ಲಿ ನಡೆಸಿದ ತರಬೇತಿ ಕಾರ್ಯಕ್ರಮಗಳು

ಕವಿಪ್ರನಿನಿಯ ಮತ್ತು ಎಸ್ಕಾಂನ ಸುಮಾರು 1827 ಅಧಿಕಾರಿ/ ನೌಕರರಿಗೆ ವಿವಿಧ ವಿಷಯಗಳ ಕುರಿತು ತರಬೇತಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿಯಲ್ಲಿ ನೀಡಲಾಗಿದ್ದು, ಸರಾಸರಿ 137 ಜನರು ಪ್ರತಿ ದಿನ ತರಬೇತಿ ಹೊಂದಿರುತ್ತಾರೆ.

ಕವಿಪ್ರನಿನಿಯ/ವಿಸಕಂ ಅಧಿಕಾರಿ/ ನೌಕರರಿಗೆ ನೀಡುವ ತರಬೇತಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದಾಗಿದೆ.

1. ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ.
2. ಸೇವೆಯಲ್ಲಿರುವವರಿಗೆ ನೀಡುವ ತರಬೇತಿ ಕಾರ್ಯಕ್ರಮ.
3. ಬಾಹ್ಯ ತರಬೇತಿ ಕಾರ್ಯಕ್ರಮಕ್ಕೆ ನಿಯೋಜನೆ

**1. ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮ:**

ಕವಿಪ್ರನಿನಿಯಲ್ಲಿ ಹೊಸದಾಗಿ ನೇಮಕಗೊಂಡ ನೌಕರರಿಗೆ ಈ ತರಬೇತಿಯನ್ನು ನೀಡಲಾಗುತ್ತಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ಕೆಳಕಂಡ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಡಲಾಗಿದೆ.

- ಹೊಸದಾಗಿ ನೇಮಕಗೊಂಡ 55 ಸಹಾಯಕ ಇಂಜಿನಿಯರ್(ವಿ)ರವರಿಗೆ 30 ಕೆಲಸದ ದಿನಗಳ ಪಠ್ಯ ತರಬೇತಿ ಮತ್ತು 30 ಕೆಲಸದ ದಿನಗಳ ಕ್ಷೇತ್ರ ತರಬೇತಿ ಮತ್ತು ಅಂತಿಮ ಪರೀಕ್ಷೆ.
- ಹೊಸದಾಗಿ ನೇಮಕಗೊಂಡ 259 ಸಂಖ್ಯೆಯ ಸಹಾಯಕ ಲೆಕ್ಕಾಧಿಕಾರಿಗಳಿಗೆ 60 ಕೆಲಸದ ದಿನಗಳ ಪಠ್ಯ ತರಬೇತಿ ಮತ್ತು 30 ಕೆಲಸದ ದಿನಗಳ ಕ್ಷೇತ್ರ ತರಬೇತಿ ಮತ್ತು ಅಂತಿಮ ಪರೀಕ್ಷೆ.
- ಹೊಸದಾಗಿ ನೇಮಕಗೊಂಡ 266 ಸಂಖ್ಯೆಯ ಕಿರಿಯ ಇಂಜಿನಿಯರ್ (ವಿದ್ಯುತ್) ರವರಿಗೆ 30 ಕೆಲಸದ ದಿನಗಳ ಪಠ್ಯ ತರಬೇತಿ ಮತ್ತು 30 ಕೆಲಸದ ದಿನಗಳ ಕ್ಷೇತ್ರ ತರಬೇತಿ ಮತ್ತು ಅಂತಿಮ ಪರೀಕ್ಷೆ.
- ಹೊಸದಾಗಿ ನೇಮಕಗೊಂಡ 39 ಸಂಖ್ಯೆಯ ಸಹಾಯಕರವರಿಗೆ 42 ಕೆಲಸದ ದಿನಗಳ ಪಠ್ಯ ತರಬೇತಿ ಮತ್ತು ಅಂತಿಮ ಪರೀಕ್ಷೆ.
- ಚಾ.ವಿ.ಸ. ನಿಗಮದ 19 ಸಂಖ್ಯೆಯ ಮಾಪಕ ಓದುಗರಿಗೆ 30 ಕೆಲಸದ ದಿನಗಳ ಪಠ್ಯ ತರಬೇತಿ ಮತ್ತು ಅಂತಿಮ ಪರೀಕ್ಷೆ.

**2. ನಿಗಮದ ಸೇವೆಯಲ್ಲಿರುವವರಿಗೆ ನೀಡುವ ತರಬೇತಿ ಕಾರ್ಯಕ್ರಮ:**

2018–19 ನೇ ಹಣಕಾಸು ವರ್ಷದಲ್ಲಿ ಕವಿಪ್ರನಿನಿಯ ಅಧಿಕಾರಿ/ ನೌಕರರಿಗೆ ಈ ಕೆಳಕಂಡ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಯಿತು.

- ಕವಿಪ್ರನಿನಿ ಮತ್ತು ಎಸ್ಕಾಂಗಳ ಅಧಿಕಾರಿ/ ನೌಕರರಿಗೆ ನಿವೃತ್ತಿ ಯೋಜನೆ ಮತ್ತು ಒತ್ತಡ ನಿರ್ವಹಣೆಯ ತರಬೇತಿ– 587 ಸಂಖ್ಯೆ
- ಪದೋನ್ನತಿ ಹೊಂದುವ ಸೆಸ್ಕ್‌ನ ಮಾರ್ಗದಾಳುಗಳಿಗೆ ಪದೋನ್ನತಿ ಪೂರ್ವ ತರಬೇತಿ– 80 ಸಂಖ್ಯೆ
- ಕವಿಪ್ರನಿನಿ ಮತ್ತು ಎಸ್ಕಾಂಗಳ ಸಹಾಯಕರುಗಳಿಗೆ ಎಸ್. ಎ. ಎಸ್. ತರಬೇತಿ– 58 ಸಂಖ್ಯೆ
- ಕವಿಪ್ರನಿನಿಯ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ರವರಿಗೆ ಪ್ರಥಮ ಚಿಕಿತ್ಸಾ ಮತ್ತು ಅಗ್ನಿಶಮನ ತರಬೇತಿ– 330 ಸಂಖ್ಯೆ

**3. ಬಾಹ್ಯ ತರಬೇತಿಗಳಿಗೆ ನಿಯೋಜನೆ:**

ಪ್ರಸಕ್ತ ವರ್ಷದಲ್ಲಿ ಕವಿಪ್ರನಿನಿಯ 134 ಅಧಿಕಾರಿ/ ನೌಕರರನ್ನು ಬಾಹ್ಯ ತರಬೇತಿಗಳಿಗೆ ನಿಯೋಜಿಸಲಾಗಿದೆ.

## ಆಂತರಿಕ ಪರಿಶೋಧನಾ ವಿಭಾಗ :

**I.** ನಿಗಮದಿಂದ ಕಾಲಕಾಲಕ್ಕೆ ಆದೇಶಿಸಲ್ಪಡುವ ಸುತ್ತೋಲೆಗಳು, ಜಾರಿಯಲ್ಲಿರುವ ನಿಬಂಧನೆಗಳು, ಲೆಕ್ಕ ಸಂಪುಟ ಹಾಗೂ ಆಂತರಿಕ ಪರಿಶೋಧನಾ ಕೈಪಿಡಿ ಪ್ರಕಾರ ಆಂತರಿಕ ಪರಿಶೋಧನೆ ಕಾರ್ಯ ಆರ್ಥಿಕ ಸಲಹೆಗಾರರ (ಆಂ.ಪ) ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ನೀಡಲ್ಪಟ್ಟ ಪರಿಶೋಧನಾ ವಿಚಾರಣೆ/ಟಿಪ್ಪಣಿ, ಹೆಚ್ಚುವರಿ

ಪಾವತಿ/ನಿಯಮ ಬಾಹಿರ ವೆಚ್ಚ ಇವುಗಳನ್ನು ಸಂಬಂಧಿತ ನಿಗಮದ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚಿಸಿದ ನಂತರ ಇತ್ಯರ್ಥಗೊಳಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ವಿಭಾಗವಾರು ಕಾರ್ಯ ಚಟುವಟಿಕೆಯ ವಿವರಗಳನ್ನು ಕಾಲಕಾಲಕ್ಕೆ ಕ್ರೋಢಿಕರಿಸಿ ಕಾರ್ಯಾಧಾರಿತ ಪ್ರಗತಿಯ ವರದಿಯನ್ನು ಸಲ್ಲಿಸಲಾಗುತ್ತಿದೆ.

**II.** 2018–19 ರ ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋಧನಾ ವಿಭಾಗದ ಸಾಧನೆಗಳು ಹಾಗೂ ಮುಖ್ಯವಾಗಿ ಅವಲೋಕಿಸಿದ ವಿಷಯಗಳ ಸಂಕ್ಷಿಪ್ತ ವಿವರಗಳು :

1) ಕೇಂದ್ರ ಖರೀದಿ ಸಭೆಯ ಮುಂದೆ ಮಂಡಿಸಲಾದ ಖರೀದಿ ಹಾಗೂ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗಮ ಕಾರ್ಯಾಲಯದ ಆಂತರಿಕ ಪರಿಶೋಧನೆಯಿಂದ **140** ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿರುತ್ತದೆ. ವಲಯ ಮಟ್ಟದಲ್ಲಿನ ಸದರಿ ವಿಷಯದ ಪ್ರಸ್ತಾವನೆಗಳನ್ನು ಪ್ರಸರಣ ವಲಯದ ಉಪ ಲೆಕ್ಕನಿಯಂತ್ರಣಾಧಿಕಾರಿ (ಆಂ.ಪ) ರವರು ಪರಿಶೀಲಿಸಿ ಆಂತರಿಕ ಪರಿಶೋಧನೆ ಅಭಿಪ್ರಾಯ ನೀಡಿರುತ್ತಾರೆ.

2) ಆರ್ಥಿಕ ವರ್ಷ 2018–19 ರಲ್ಲಿ ದರ ವ್ಯತ್ಯಾಸದ ಬಿಲ್ಲುಗಳಲ್ಲಿ (Price Variation bill) ಒಟ್ಟು **ರೂ. 1.96** ಕೋಟಿಯಷ್ಟು ಹೆಚ್ಚುವರಿ ಕ್ಲೇಮ್ ಮಾಡಿರುವ ಮೊತ್ತವನ್ನು ಆಂತರಿಕ ಪರಿಶೋಧನೆಯ ಪೂರ್ವ ತನಿಖೆಯ ಸಮಯದಲ್ಲಿ ಕಂಡುಹಿಡಿಯಲಾಗಿದೆ.

3) ಉಗ್ರಾಣದ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ ಅಂತರಿಕ ಪರಿಶೋಧನಾ ವಿಭಾಗದಿಂದ ನಿರಂತರ ವರದಿ ಮಾಡಿದ ಪರಿಣಾಮ, ಆರ್ಥಿಕ ವರ್ಷ 2018–19ರಲ್ಲಿ ಒಟ್ಟು **ರೂ. 9.35** ಕೋಟಿಯಷ್ಟು ಮೊತ್ತದ ರದ್ದಿ ಸಾಮಗ್ರಿಗಳನ್ನು ಮಾರಾಟ ಮಾಡಲಾಗಿರುತ್ತದೆ.

4) ಆಂತರಿಕ ಪರಿಶೋಧನೆಯ ಮೇಲ್ವಿಚಾರಣೆಯಿಂದ ಆರ್ಥಿಕ ವರ್ಷ 2018–19 ರಲ್ಲಿ **ರೂ. 6.55** ಕೋಟಿಯಷ್ಟು ವಸತಿ ಸಮುಚ್ಛಯಗಳ ಬಾಡಿಗೆ ಹಾಗೂ **ರೂ. 7.49** ಕೋಟಿಯಷ್ಟು ಕಛೇರಿ ಕಟ್ಟಡಗಳ ಬಾಡಿಗೆಯನ್ನು ಟಿ.ಎಲ್ & ಎಸ್.ಎಸ್ ವಿಭಾಗಗಳಲ್ಲಿ ಬೇಡಿಕೆ ಮಾಡಲಾಗಿದೆ..

5) ಆರ್ಥಿಕ ವರ್ಷ 2018–19ರ ಅವಧಿಯಲ್ಲಿ ಸರಬರಾಜು ಮತ್ತು ಕಾಮಗಾರಿ ಬಿಲ್ಲುಗಳಲ್ಲಿ ಒಟ್ಟು **ರೂ. 4.00** ಕೋಟಿಯಷ್ಟು ದಂಡ (Penalty) ವನ್ನು ಕಡಿಮೆ ಲೆಕ್ಕಾಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

6) ಆರ್ಥಿಕ ವರ್ಷ 2018–19ರಲ್ಲಿ ಒಟ್ಟು **ರೂ. 2.61 ಲಕ್ಷದಷ್ಟು** ಮೊತ್ತವನ್ನು ಅಂತಿಮ ಪರಿಮಾಣ ವ್ಯತ್ಯಾಸದ ಏರಿಳಿತ ಪಟ್ಟಿಯಲ್ಲಿ (Final Quantity Variation Bill) ಹೆಚ್ಚುವರಿಯಾಗಿ ಕ್ಲೇಮ್ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

7) 2018–19ನೇ ಸಾಲಿನ ಅಂತ್ಯಕ್ಕೆ ವಲಯವಾರು ಭೂ ದಾಖಲೆಗಳ ವಿವರ ಈ ಕೆಳಕಂಡಂತಿರುತ್ತದೆ :

| ಕ್ರಮ ಸಂಖ್ಯೆ | ವಲಯದ ಹೆಸರು | ಒಟ್ಟು ಆಸ್ತಿಗಳ ಸಂಖ್ಯೆ | ಪರಿಪೂರ್ಣ ದಾಖಲೆಗಳು ಲಭ್ಯವಿರುವುದು | ಭಾಗಶಃ ದಾಖಲೆಗಳು ಲಭ್ಯವಿರುವುದು | ಸಂಪೂರ್ಣ ದಾಖಲೆಗಳು ಇಲ್ಲದಿರುವ ಆಸ್ತಿಗಳು |
|---|---|---|---|---|---|
| 1 | ಬೆಂಗಳೂರು | 358 | 194 | 164 | 0 |
| 2 | ತುಮಕೂರು | 207 | 142 | 65 | 0 |
| 3 | ಕಲಬುರುಗಿ | 186 | 76 | 94 | 16 |
| 4 | ಮೈಸೂರು | 182 | 135 | 44 | 3 |
| 5 | ಹಾಸನ | 196 | 127 | 41 | 28 |
| 6 | ಬಾಗಲಕೋಟೆ | 236 | 152 | 69 | 15 |
| | **ಒಟ್ಟು** | **1365** | **826** | **477** | **62** |

ಆಂತರಿಕ ಪರಿಶೋಧನಾ ವಿಭಾಗದಿಂದ ನಿರಂತರ ಬೆಂಬೆತ್ತುವಿಕೆಯ ಕಾರಣದಿಂದ ಒಟ್ಟು 826 ಸಂಖ್ಯೆಯ ಆಸ್ತಿಗಳಿಗೆ ಸಂಪೂರ್ಣ ದಾಖಲೆಗಳನ್ನು ಸಿದ್ಧಪಡಿಸಲಾಗಿದೆ. ಉಳಿದಂತೆ (477+62) = 539 ಸಂಖ್ಯೆಯ ಆಸ್ತಿಗಳಿಗೆ ಕಾಮಗಾರಿ (ಸಿವಿಲ್) ವಿಭಾಗದವರು ದಾಖಲೆಗಳನ್ನು ಸಿದ್ಧಪಡಿಸುವ ಬಗ್ಗೆ ಕ್ರಮಕೈಗೊಳ್ಳಬೇಕಾಗಿರುತ್ತದೆ.

8) ನಿಗಮದಲ್ಲಿ ಸಿಬ್ಬಂದಿಗೆ ಸಂಬಂಧಪಟ್ಟ ಸೇವಾ ನಿಯಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಭಿಪ್ರಾಯಗಳನ್ನು ನಿಗಮ ಮಟ್ಟದಲ್ಲಿ ಹಾಗೂ ಇತರೆ ಕಛೇರಿಗಳಲ್ಲಿ ಕೋರುತ್ತಿದ್ದು, ಕಾಲಕಾಲಕ್ಕೆ ನಿಯಮಗಳನ್ವಯ ಸೂಕ್ತ ಅಭಿಪ್ರಾಯವನ್ನು ನೀಡಲಾಗುತ್ತಿದೆ. ಅಧಿಕಾರಿಗಳ/ಸಿಬ್ಬಂದಿ ವೇತನ ನಿಗದೀಕರಣ, ಅಂತಿಮ ಗಳಿಕೆ ರಜಾ ಲೆಕ್ಕಾಚಾರ, ವೈದ್ಯಕೀಯ ವೆಚ್ಚಗಳ ಪಾವತಿ ಹಾಗೂ ಇತರೆ ಸಿಬ್ಬಂದಿ ವೆಚ್ಚ ಪಾವತಿಗಳಲ್ಲಿ ಆರ್ಥಿಕ ವರ್ಷ 2018–19ರಲ್ಲಿ ಆಂತರಿಕ ಪರಿಶೋಧನಾ ವಿಭಾಗವು ಪರಿಶೀಲಿಸಿ **ರೂ. 52.21** ಲಕ್ಷದಷ್ಟು ಹೆಚ್ಚುವರಿ ಪಾವತಿಯನ್ನು ಕಂಡುಹಿಡಿಯಲಾಗಿದೆ.

9) ಕವಿಪ್ರನಿನಿ ವತಿಯಿಂದ ಉಪ ಕೇಂದ್ರಗಳನ್ನು ಹಾಗೂ ಪ್ರಸರಣ ಮಾರ್ಗಗಳನ್ನು ನಿರ್ಮಾಣ ಮಾಡುವಾಗ ಭೂ ಪರಿಹಾರ, ಬೆಳೆ ಪರಿಹಾರವನ್ನು ನಷ್ಟಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋಧನೆಯಿಂದ ಒಟ್ಟಾರೆ **ರೂ. 161.74** ಲಕ್ಷದಷ್ಟು ತಪ್ಪಾಗಿ ಲೆಕ್ಕಾಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ಹೆಚ್ಚುವರಿ ಪಾವತಿಯನ್ನು ತಡೆಗಟ್ಟಲಾಗಿದೆ.

III. 2018–19ನೇ ಸಾಲಿನ ಆಂತರಿಕ ಪರಿಶೋಧನೆಯ ಪ್ರಗತಿಯ ಹೆಚ್ಚುವರಿ ಪಾವತಿ/ ನಿಯಮಬಾಹಿರ ವೆಚ್ಚದ ಮತ್ತು ಆಡಿಟ್ ವರದಿಗಳ ಸಾರಾಂಶದ ವಿವರಗಳನ್ನು ಕೆಳಗಿನ ವಿವರಣಾ ಪಟ್ಟಿಯಲ್ಲಿ ಗಮನಿಸಬಹುದಾಗಿದೆ.

| **ಹೆಚ್ಚುವರಿ ಪಾವತಿಯ ವಿವರಗಳು** | | | | **ರೂ. ಲಕ್ಷಗಳಲ್ಲಿ** |
|---|---|---|---|---|
| **ಪ್ರಾರಂಭದ ಬಾಕಿ** | **ಕಂಡು ಹಿಡಿದ ಮೊತ್ತ** | **ಒಟ್ಟು** | **ವಸೂಲಾದ ಮೊತ್ತ** | **ಅಂತಿಮ ಬಾಕಿ** |
| 66.47 | 965.80 | 1032.27 | 790.89 | 241.38 |

| **ನಿಯಮಬಾಹಿರ ವೆಚ್ಚದ ವಿವರಗಳು** | | | | **ರೂ. ಲಕ್ಷಗಳಲ್ಲಿ** |
|---|---|---|---|---|
| **ಪ್ರಾರಂಭದ ಬಾಕಿ** | **ಕಂಡು ಹಿಡಿದ ಮೊತ್ತ** | **ಒಟ್ಟು** | **ಸಕ್ರಮಗೊಳಿಸಿದ ಮೊತ್ತ** | **ಅಂತಿಮ ಬಾಕಿ** |
| 39.02 | 393.18 | 432.20 | 405.92 | 26.28 |

| **ಆಡಿಟ್ ಪ್ಯಾರಗಳ ವಿವರಗಳು** | | | | **ಸಂಖ್ಯೆಗಳಲ್ಲಿ** |
|---|---|---|---|---|
| **ಪ್ರಾರಂಭದ ಆಡಿಟ್ ಪ್ಯಾರಗಳ ವಿವರ** | **ಆಡಿಟ್ ಪ್ಯಾರಗಳಿಗೆ ನೀಡಿದ ವಿವರ** | **ಒಟ್ಟು** | **ಆಡಿಟ್ ಪ್ಯಾರಗಳಿಗೆ ಉತ್ತರ ಪಡೆದ ವಿವರ** | **ಬಾಕಿ ಉಳಿದ ಆಡಿಟ್ ಪ್ಯಾರಗಳು** |
| 310 | 1720 | 2030 | 1670 | 360 |

ವಲಯವಾರು ವಿವರಗಳು ಈ ಕೆಳಕಂಡಂತಿರುತ್ತದೆ :

**ಅರ್ಥಿಕ ವರ್ಷ 2018–19 ರಲ್ಲಿ ಆಡಿಟ್ ಪ್ಯಾರಗಳ ವಿವರಗಳು**

| ಕ್ರ. ಸಂ | ವಲಯದ ಹೆಸರು | ಪ್ರಾರಂಭದ ಆಡಿಟ್ ಪ್ಯಾರಗಳ ಬಾಕಿ | ಆರ್ಥಿಕ ವರ್ಷದಲ್ಲಿ ನೀಡಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಒಟ್ಟು | ಆರ್ಥಿಕ ವರ್ಷದಲ್ಲಿ ಉತ್ತರ ಪಡೆಯಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಬಾಕಿ ಉಳಿದ ಆಡಿಟ್ ಪ್ಯಾರಗಳು |
|---|---|---|---|---|---|---|
| 1 | ಬೆಂಗಳೂರು | 43 | 424 | 467 | 412 | 55 |
| 2 | ತುಮಕೂರು | 1 | 300 | 301 | 279 | 22 |
| 3 | ಕಲಬುರಗಿ | 107 | 120 | 227 | 147 | 80 |
| 4 | ಮೈಸೂರು | 45 | 262 | 307 | 217 | 90 |
| 5 | ಹಾಸನ | 32 | 196 | 228 | 176 | 52 |
| 6 | ಬಾಗಲಕೋಟೆ | 71 | 307 | 378 | 336 | 42 |
| 7 | ಕೇಂದ್ರ ಕಛೇರಿ | 6 | 96 | 102 | 87 | 15 |
| 8 | ಎಸ್.ಎಲ್.ಡಿ.ಸಿ | 5 | 15 | 20 | 16 | 4 |
| | **ಒಟ್ಟು** | **310** | **1720** | **2030** | **1670** | **360** |

**ಆರ್ಥಿಕ ವರ್ಷ 2018–19 ರಲ್ಲಿ ಹೆಚ್ಚುವರಿ ಪಾವತಿಯ ವಿವರಗಳು :**

ರೂ. ಲಕ್ಷಗಳಲ್ಲಿ

| ಕ್ರ. ಸಂ | ವಲಯದ ಹೆಸರು | 2018–19ರಲ್ಲಿ ಹೆಚ್ಚುವರಿ ಪಾವತಿ | | | | |
|---|---|---|---|---|---|---|
| | | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ವಸೂಲಾದ ಮೊತ್ತ | ಅಂತಿಮ ಬಾಕಿ |
| 1 | ಬೆಂಗಳೂರು | 2.84 | 436.34 | 439.18 | 241.76 | 197.42 |
| 2 | ತುಮಕೂರು | 0.29 | 204.21 | 204.50 | 203.45 | 1.05 |
| 3 | ಕಲಬುರಗಿ | 7.30 | 137.02 | 144.32 | 135.88 | 8.44 |
| 4 | ಮೈಸೂರು | 40.12 | 28.30 | 68.42 | 62.31 | 6.11 |
| 5 | ಹಾಸನ | 5.33 | 71.14 | 76.47 | 61.34 | 15.13 |
| 6 | ಬಾಗಲಕೋಟೆ | 1.09 | 54.77 | 55.86 | 54.93 | 0.93 |
| 7 | ಕೇಂದ್ರ ಕಛೇರಿ | 8.61 | 28.30 | 36.91 | 26.64 | 10.27 |
| 8 | ಎಸ್.ಎಲ್.ಡಿ.ಸಿ | 0.88 | 5.72 | 6.60 | 4.58 | 2.02 |
| | **ಒಟ್ಟು** | **66.46** | **965.80** | **1032.26** | **790.89** | **241.37** |

**ಆರ್ಥಿಕ ವರ್ಷ 2018–19ರಲ್ಲಿ ನಿಯಮಬಾಹಿರ ವೆಚ್ಚದ ವಿವರಗಳು :**

**ರೂ. ಲಕ್ಷಗಳಲ್ಲಿ**

| ಕ್ರ ಸಂ | ವಲಯದ ಹೆಸರು | 2018–19ರ ನಿಯಮಬಾಹಿರ ವೆಚ್ಚ | | | | |
|---|---|---|---|---|---|---|
| | | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ಸಕ್ರಮಗೊಳಿಸಿದ ಮೊತ್ತ | ಅಂತಿಮ ಬಾಕಿ |
| 1 | ಬೆಂಗಳೂರು | 3.58 | 39.95 | 43.53 | 28.29 | 15.24 |
| 2 | ತುಮಕೂರು | 0.00 | 112.87 | 112.87 | 112.87 | 0.00 |
| 3 | ಕಲಬುರಗಿ | 6.07 | 21.98 | 28.05 | 28.05 | 0.00 |
| 4 | ಮೈಸೂರು | 6.76 | 67.58 | 74.34 | 69.23 | 5.11 |
| 5 | ಹಾಸನ | 0.29 | 27.33 | 27.62 | 25.54 | 2.08 |
| 6 | ಬಾಗಲಕೋಟೆ | 22.11 | 91.25 | 113.36 | 109.84 | 3.52 |
| 7 | ಕೇಂದ್ರ ಕಛೇರಿ | 0.00 | 27.86 | 27.86 | 27.86 | 0.00 |
| 7 | ಎಸ್.ಎಲ್.ಡಿ.ಸಿ | 0.21 | 4.37 | 4.58 | 4.24 | 0.34 |
| | ಒಟ್ಟು | **39.02** | **393.19** | **432.21** | **405.92** | **26.29** |

**ಸಿಬ್ಬಂದಿ ಶಾಖೆಯಿಂದ ಹೊರಡಿಸಲಾದ ಪ್ರಮುಖ ಆದೇಶಗಳು :**

1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/1996–97 ದಿನಾಂಕ: 10.04.2018 ರಲ್ಲಿ ಬುದ್ಧಿಮಾಂಧ್ಯ/ ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ 'ಶಿಶುಪಾಲನಾ ರಜೆ' ಮಂಜೂರು ಮಾಡಲಾಗಿರುತ್ತದೆ.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69517/2017–18 ದಿನಾಂಕ: 13.04.2018 ರಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು, ಕವಿಮಂ ನೌಕರರ ಸೇವಾ ನಿಯಮಗಳು ಮತ್ತು ಕವಿಮಂ ಅಕೌಂಟ್ಸ್ ಮ್ಯಾನುಯಲ್ ಸಂಪುಟ–2 ರನ್ವಯ ನೌಕರರ ವರ್ಗೀಕರಣ, ನೇಮಕಾತಿ, ಪ್ರಯಾಣ ಭತ್ಯೆ ಮತ್ತು ವಿವಿಧ ಮುಂಗಡಗಳನ್ನು ಪಾವತಿಸುವ ಬಗ್ಗೆ ಆದೇಶವನ್ನು ಹೊರಡಿಸಲಾಗಿದೆ.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/40342(iii)/2016–17, ದಿನಾಂಕ: 05.05.2018 ರಲ್ಲಿ 2015 ಮತ್ತು 2017 ರ ಅವಧಿಯಲ್ಲಿ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ನೇಮಕಾತಿ ಹೊಂದಿರುವ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು) ಗಳಿಗೆ ಮಾಸಿಕ ಕ್ರೋಢೀಕೃತ ಸಂಭಾವನೆಯನ್ನು ಪಾವತಿಸುವ ಬಗ್ಗೆ ಸ್ಪಷ್ಟೀಕರಣ ನೀಡಲಾಗಿರುತ್ತದೆ.
4. ಪಿಂಚಣಿದಾರರ ಗುರುತಿಸುವಿಕೆಯ ವಿಷಯದಲ್ಲಿ ಕವಿಮಂ ಅಕೌಂಟ್ಸ್ ಮ್ಯಾನುಯಲ್ ಸಂಪುಟ–2 ಭಾಗ–'ಬಿ' ಗೆ ತಿದ್ದುಪಡಿಯನ್ನು ಮಾಡಿ ದಿನಾಂಕ: 11.05.2018 ರ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/ಪಿ19/ಕೆಸಿಇ123/2017–18 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.
5. ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ಪರಿಷ್ಕರಿಸಿರುವ ವೇತನ ವ್ಯತ್ಯಾಸದ ಬಾಕಿ ಮೊತ್ತವನ್ನು ಅಧಿಕಾರಿ/ ನೌಕರರಿಗೆ ಪಾವತಿ ಮಾಡುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/69516/2017–18, ದಿನಾಂಕ: 04.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.
6. ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ಪರಿಷ್ಕರಿಸಿರುವ ಪಿಂಚಣಿ/ ಕುಟುಂಬ ಪಿಂಚಣಿಯ ಬಾಕಿ ಮೊತ್ತವನ್ನು ನಿವೃತ್ತ ಪಿಂಚಣಿದಾರರು/ಕುಟುಂಬ ಪಿಂಚಣಿದಾರರಿಗೆ ಪಾವತಿ ಮಾಡುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/69518/2017–18, ದಿನಾಂಕ: 05.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

7. ಕಂಪನಿ ಕಾರ್ಯದರ್ಶಿ ಹುದ್ದೆಗೆ ನೇರ ನೇಮಕಾತಿಗಾಗಿ ಅರ್ಜಿಯನ್ನು ಅಹ್ವಾನಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/69480/2017–18, ದಿನಾಂಕ: 05.06.2018 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

8. ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಪಾವತಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3442/2008–09, ದಿನಾಂಕ: 21.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

9. ದಿನಾಂಕ: 01.07.2017 ರಂದು ಮಂಜೂರಾದ 45.25% ತುಟ್ಟಿ ಭತ್ಯೆಯನ್ನು ಡಿಯರ್‌ನೆಸ್ ಪೇ ಎಂದು ಪರಿಗಣಿಸುವ ಬಗ್ಗೆ ಸಂಖ್ಯೆ: ಕವಿಪ್ರನಿನಿ/ಬಿ16/3610/2003–04, ದಿನಾಂಕ: 21.06.2018 ರಂದು ಆದೇಶಿಸಲಾಗಿರುತ್ತದೆ.

10. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3442/2008–09, ದಿನಾಂಕ: 22.06.2018 ರಂದು ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಪಾವತಿಸುವ ಬಗ್ಗೆ ತಿದ್ದುಪಡಿಯನ್ನು ಮಾಡಲಾಗಿರುತ್ತದೆ.

11. ಸರ್ಕಾರದ ಆದೇಶ ದಿನಾಂಕ: 24.04.2018ರ ಅನುಸಾರವಾಗಿ 'ಡಿಯರ್‌ನೆಸ್ ಪೇ' ಅನ್ನು ಪಿಂಚಣಿ ಸೌಲಭ್ಯಕ್ಕೆ ವಿಲೀನಗೊಳಿಸುವ ಬಗ್ಗೆ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69518/2017–18, ದಿನಾಂಕ: 29.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

12. ದಿನಾಂಕ: 01.01.2018 ರಿಂದ ಅನ್ವಯವಾಗುವಂತೆ ಅಧಿಕಾರಿ/ನೌಕರರಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸಿ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3610(iii)/2003–04, ದಿನಾಂಕ: 29.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿದೆ.

13. ದಿನಾಂಕ: 01.01.2018 ರಿಂದ ಅನ್ವಯವಾಗುವಂತೆ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3611/2003–04, ದಿನಾಂಕ: 29.06.2018 ರಲ್ಲಿ ಆದೇಶವನ್ನು ಹೊರಡಿಸಲಾಗಿದೆ.

14. ನಿವೃತ್ತಿ/ ಮರಣ ಉಪದಾನದ ಗರಿಷ್ಠ ಮಿತಿಯನ್ನು ರೂ.10.00 ಲಕ್ಷದಿಂದ ರೂ.20.00 ಲಕ್ಷಕ್ಕೆ ಹೆಚ್ಚಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3593/1998–99, ದಿನಾಂಕ: 06.08.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

15. ದಿನಾಂಕ: 01.04.2018 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರನ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.47,845/– ಕ್ಕೆ ನಿಗದಿಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ5ಸಿ/721(ii)/80–81, ದಿನಾಂಕ: 13.08.2018 ರಂದು ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

16. ಬಾಡಿಗೆ ರಹಿತ ವಸತಿಗೃಹಗಳಲ್ಲಿ ವಾಸಿಸುತ್ತಿರುವ ನಿಗಮದ ನೌಕರರಿಗೆ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3442/2008–09, ದಿನಾಂಕ: 23.08.2018 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

17. ನಿಗಮದ/ ಎಸ್ಕಾಂಗಳ ನೌಕರರಿಗೆ 2017–18ನೇ ಹಣಕಾಸು ವರ್ಷಕ್ಕೆ ಬೋನಸ್/ ಅನುಗ್ರಹ ಪೂರ್ವಕವನ್ನು ಮಂಜೂರು ಮಾಡುವಂತೆ ಸಂಖ್ಯೆ: ಕವಿಪ್ರನಿನಿ/ಬಿ16/5608/2000–01, ದಿನಾಂಕ: 03.09.2018 ರಲ್ಲಿ ಆದೇಶಿಸಲಾಗಿರುತ್ತದೆ.

18. ದಿನಾಂಕ: 01.01.2018 ರಿಂದ 31.03.2018 ರವರೆಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3610/2003–04, ದಿನಾಂಕ: 06.10.2018 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

19. ದಿನಾಂಕ: 01.07.2018 ರಿಂದ ಅನ್ವಯಿಸುವಂತೆ ನಿಗಮದ ಅಧಿಕಾರಿ/ನೌಕರರಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸುವ ಬಗ್ಗೆ ಸಂಖ್ಯೆ: ಕವಿಪ್ರನಿನಿ/ಬಿ16/3610(iii)/2003–04, ದಿನಾಂಕ: 22.10.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

20. ದಿನಾಂಕ: 01.07.2018 ರಿಂದ ಅನ್ವಯಿಸುವಂತೆ ನಿವೃತ್ತಿ ವೇತನದಾರರಿಗೆ/ ಕುಟುಂಬ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸುವ ಬಗ್ಗೆ ಸಂಖ್ಯೆ: ಕವಿಪ್ರನಿನಿ/ಬಿ16/3611/2003–04, ದಿನಾಂಕ: 22.10.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

21. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/ಇತರೆ–2/2014–15, ದಿನಾಂಕ: 14.11.2018 ರಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಬಡ್ತಿ ನೀಡುವಾಗ ಮೀಟರ್ ರೀಡರ್/ ಆಪರೇಟರ್/ ಓವರ್‌ಸೀರ್/ ಸಹಾಯಕ ಉಗ್ರಾಣ ಪಾಲಕ ರವರುಗಳನ್ನು ತಾಂತ್ರಿಕ ಕೋಟಾದಡಿಯಲ್ಲಿ ಪರಿಗಣಿಸುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

22. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5/721(ii)/80–81, ದಿನಾಂಕ: 30.11.2018 ರಲ್ಲಿ ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 01.04.2018 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರರ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.48,598/– ಕ್ಕೆ ನಿಗದಿಪಡಿಸಲಾಗಿರುತ್ತದೆ.

23. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/2835/99–2000, ದಿನಾಂಕ: 03.12.2018 ರಲ್ಲಿ 2019ನೇ ವರ್ಷಕ್ಕೆ ಮಂಜೂರು ಮಾಡಿರುವ ಸಾರ್ವತ್ರಿಕ ರಜಾ ದಿನಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

24. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು ಅಧ್ಯಾಯ–8 ರ ಕ್ರಮ ಸಂಖ್ಯೆ: 6 ಕ್ಕೆ ತಿದ್ದುಪಡಿ ಮಾಡಿ 'ಕಂಪನಿ ಕಾರ್ಯದರ್ಶಿ' ಹುದ್ದೆಯನ್ನು ಸೇರ್ಪಡಿಸಿ ಸಂಖ್ಯೆ: ಕವಿಪ್ರನಿನಿ/ಬಿ16/5607/2000–01, ದಿನಾಂಕ: 03.12.2018 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

25. ಕಂಪನಿ ಕಾರ್ಯದರ್ಶಿ ಹುದ್ದೆಗೆ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ನಿಯಂತ್ರಣಾಧಿಕಾರಿ ಪದವೃಂದದ ವೇತನ ಶ್ರೇಣಿಯನ್ನು ನಿಗದಿಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/5607/2000–01, ದಿನಾಂಕ: 03.12.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

26. ಬೆಂಗಳೂರು ಉತ್ತರ ತಾಲ್ಲೂಕಿನ ವ್ಯಾಪ್ತಿಗೆ ಬರುವ ದಾಸನಪುರ ಹೋಬಳಿಯ ಮಾದನಾಯಕನಹಳ್ಳಿ ತಿರುಮಲಪುರ, ಮಾದಾವರ, ಶ್ರೀಕಂಠಪುರ(ಅಂಚೆಪಾಳ್ಯ), ಚಿಕ್ಕಬಿದರಕಲ್ಲು ಈ 5 ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ನೌಕರರಿಗೆ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಪಾವತಿ ಬಗ್ಗೆ ಸಂಖ್ಯೆ: ಕವಿಪ್ರನಿನಿ/ಬಿ16/3442/2008–09, ದಿನಾಂಕ: 31.12.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

27. ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/4682/2006–07 ದಿನಾಂಕ: 17.05.2007ರ ಅನ್ವಯ ಗುತ್ತಿಗೆ ಆಧಾರದ ಮೇಲೆ ನಿರಂತರವಾಗಿ ಸದರಿ ದಿನಾಂಕದಿಂದ ಕಾರ್ಯನಿರ್ವಹಿಸುತಿದ್ದ 248ಸಂಖ್ಯೆಯ ವಿಕಲಚೇತನ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎಂ ಪದವಿಯನ್ನು ಹೊಂದಿರುವಂತಹ ಕಂದಾಯ ಸಹಾಯಕರುಗಳ ಸೇವೆಯನ್ನು ಸಹಾಯಕ ಹುದ್ದೆಗೆ ಮತ್ತು 244ಸಂಖ್ಯೆಯ ವಿಕಲಚೇತನ ಎಸ್.ಎಸ್.ಎಲ್.ಸಿ ವಿಧ್ಯಾರ್ಹತೆ ಹೊಂದಿರುವಂತಹ ಕಂದಾಯ ಸಹಾಯಕರುಗಳನ್ನು ಕಿರಿಯ ಸಹಾಯಕ ದರ್ಜೆ–2 ಹುದ್ದೆಗೆ ಖಾಯಂಗೊಳಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/4682(iii)/2006–07, ದಿನಾಂಕ: 14.01.2019 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

28. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಅಧ್ಯಾಯ–7 ರ ಕ್ರಮ ಸಂಖ್ಯೆ: (5) ಸಹಾಯಕ ಲೆಕ್ಕಾಧಿಕಾರಿ ಮತ್ತು ಕ್ರಮ ಸಂಖ್ಯೆ: (7) ರ ಮತ್ತು ಸಹಾಯಕ ಹುದ್ದೆಗಳ ನೇರ ನೇಮಕಾತಿಯ ಕೋಟಾಗೆ ಮಾರ್ಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/5607(5)/2000–01, ದಿನಾಂಕ: 16.01.2019 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

29. ನಿಗಮದ ಅಧಿಕಾರಿ/ ನೌಕರರಿಗೆ ಹಬ್ಬದ ಮುಂಗಡದ ಮೊತ್ತವನ್ನು ಪರಿಷ್ಕರಿಸಿ ಸಂಖ್ಯೆ: ಕವಿಪ್ರನಿನಿ/ಬಿ16/3594/1998–99, ದಿನಾಂಕ: 25.01.2019 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

30. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳಲ್ಲಿ ತಿಳಿಸಲಾಗಿರುವ ಸಹಾಯಕ ಇಂಜಿನಿಯರ್(ವಿದ್ಯುತ್/ ಸಿವಿಲ್), ಕಿರಿಯ ಆಪ್ತ ಸಹಾಯಕ ಮತ್ತು ಚಾಲಕ ದರ್ಜೆ–2 ಹುದ್ದೆಗಳ ನೇರ ನೇಮಕಾತಿಗೆ ಮತ್ತು ಕನಿಷ್ಟ ವಿದ್ಯಾರ್ಹತೆಗೆ ತಿದ್ದುಪಡಿಯನ್ನು ಮಾಡಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86393/2018–19, ದಿನಾಂಕ: 28.01.2019 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

31. ನಿಗಮದ ನೌಕರನು ನಿಧನಹೊಂದಿದ್ದಲ್ಲಿ ಅವರ ಅವಲಂಬಿತರಲ್ಲಿ ಒಬ್ಬರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ ನಂತರ ಅವರೂ ಸಹ ಸೇವೆಯಲ್ಲಿರುವಾಗಲೇ ಮೃತರಾಗಿದ್ದರಿಂದ ಅವರ ಅವಲಂಬಿತರಲ್ಲಿ ಅರ್ಹರಾದ ಮತ್ತೊಬ್ಬರು ಎರಡನೇ ಬಾರಿಗೆ ಅನುಕಂಪದ ಆಧಾರದ ನೇಮಕಾತಿಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿಸಿದ್ದು, ಸದರಿ ಅರ್ಜಿಗಳನ್ನು ಪರಿಗಣಿಸಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಅನುಮೋದಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ5(ಸಿ)/721/2012–13, ದಿನಾಂಕ: 28.01.2019 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

32. ಪ್ರಯಾಣ ಭತ್ಯೆಯ ದರಗಳ ಪರಿಷ್ಕರಣೆ ಮತ್ತು ಅರ್ಹತೆಗಳ ಮಾರ್ಪಾಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/69516/2017–18, ದಿನಾಂಕ: 02.02.2019 ರಲ್ಲಿ ಆದೇಶಿಸಲಾಗಿದೆ.

33. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17, ದಿನಾಂಕ: 08.09.2016 ಅನುಸಾರ ಆಯ್ಕೆಯಾಗಿರುವ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಕಾಯ್ದಿರಿಸಿದ ಪಟ್ಟಿಯನ್ನು ಪ್ರಕಟಿಸಿ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17, ದಿನಾಂಕ: 13.02.2019 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

34. ಸೇವೆಯಲ್ಲಿರುವ ನೌಕರರಿಗೆ ಮೀಸಲಿರಿಸಿದ ಶೇಕಡ 10ರ ಕೋಟಾದಡಿಯಲ್ಲಿ ನೇರ ನೇಮಕಾತಿಗಾಗಿ ನಿಗಧಿಪಡಿಸಿದ ಕನಿಷ್ಟ ಸೇವೆಯನ್ನು ಪರಿಗಣಿಸುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86469/2018–19, ದಿನಾಂಕ: 18.02.2019 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

35. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86393/2018–19, ದಿನಾಂಕ: 20.02.2019 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಆಪ್ತ ಸಹಾಯಕ, ಕಿರಿಯ ಸಹಾಯಕ, ಚಾಲಕ ದರ್ಜೆ–2, ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್(ಕಿರಿಯ ಮಾರ್ಗದಾಳು) ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಅರ್ಜಿಯನ್ನು ಅಹ್ವಾನಿಸಿ ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

36. ವಿವರವಾದ ಉದ್ಯೋಗ ಪ್ರಕಟಣೆಯನ್ನು ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86393/2018–19, ದಿನಾಂಕ: 25.02.2019 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

37. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳಲ್ಲಿ ತಿಳಿಸಲಾಗಿರುವ ಚಾಲಕ ದರ್ಜೆ–2 ಹುದ್ದೆಗೆ ತಿದ್ದುಪಡಿಯನ್ನು ಮಾಡಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/5607(5)/2000–01, ದಿನಾಂಕ: 25.02.2019 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

38. ಕವಿಪ್ರನಿನಿಯಲ್ಲಿ 24 ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು) ಮತ್ತು 3 ಕಿರಿಯ ಸ್ಟೇಷನ್ ಪರಿಚಾರಕ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3590(2)/89–90, ದಿನಾಂಕ: 08.03.2019 ರಲ್ಲಿ ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

39. ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಆಪ್ತ ಸಹಾಯಕ, ಕಿರಿಯ ಸಹಾಯಕ, ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್(ಕಿರಿಯ ಮಾರ್ಗದಾಳು) ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಿ ಹೊರಡಿಸಿದ್ದ ಉದ್ಯೋಗ ಪ್ರಕಟಣೆಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86393/2018–19, ದಿನಾಂಕ: 11.03.2019 ರಲ್ಲಿ ತಿದ್ದುಪಡಿಯನ್ನು ಮಾಡಲಾಗಿರುತ್ತದೆ.

40. ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಚಾಲಕ ದರ್ಜೆ–2 ಹುದ್ದೆಗೆ ನೇರ ನೇಮಕಾತಿಗಾಗಿ ಹೊರಡಿಸಲಾಗಿರುವ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/86398/2018–19, ದಿನಾಂಕ: 25.02.2019 ನ್ನು ಆಡಳಿತಾತ್ಮಕ ಕಾರಣಗಳಿಂದ ನೇಮಕಾತಿಯನ್ನು ಹಿಂಪಡೆದಿರುವ ಬಗ್ಗೆ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/86398/2018–19, ದಿನಾಂಕ: 11.03.2019 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

41. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3590/89–90(2), ದಿನಾಂಕ: 28.03.2019 ರಲ್ಲಿ ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು) ಹಾಗೂ ಕಿರಿಯ ಸ್ಟೇಷನ್ ಪರಿಚಾರಕ ಬ್ಯಾಕ್‌ಲಾಗ್ ಹುದ್ದೆಗಳ ನೇರ ನೇಮಕಾತಿಗೆ ವಿವರವಾದ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

42. 2018–19 ರ ಅವಧಿಯಲ್ಲಿ ಮೂರು ವರ್ಷಗಳ ತೃಪ್ತಿಕರ ಸೇವೆಯನ್ನು ಪೂರೈಸಿರುವ ಕವಿಪ್ರನಿನಿ/ಎಸ್ಕಾಂಗಳ ಆರು ಪ್ರೊಬೇಷನರಿ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳು ಹುದ್ದೆಗೆ ವಿಲೀನಗೊಳಿಸಲಾಗಿರುತ್ತದೆ.

**ಔದ್ಯಮಿಕ ಬಾಂಧವ್ಯ :**

ನಿಗಮದ ಗುರಿಸಾಧನೆಯಲ್ಲಿ ಮಾನವಶಕ್ತಿಯೂ ಅಪೂರ್ವವಾದ ಆಸ್ತಿಯೆಂದು ಪರಿಗಣಿಸಿರುವ ನಿಗಮವು ನೌಕರರ ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಕಾರ್ಯಕ್ರಮಗಳ ಬಗ್ಗೆಯೂ ಮುತುವರ್ಜಿವಹಿಸಿರುತ್ತದೆ. ನೌಕರರ ಕುಂದು–ಕೊರತೆಗಳನ್ನು ಸಕಾಲದಲ್ಲಿ ಗುರುತಿಸಿ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಪರಸ್ಪರ ಸಮಾಲೋಚಿಸಿ ಪರಿಹರಿಸಲಾಗುತ್ತಿದೆ.

ನೌಕರರ ಸಂಘದೊಂದಿಗೆ ದಿನಾಂಕ:03.06.2004 ರಂದು ಮಾಡಿಕೊಂಡ ಒಪ್ಪಂದನ್ವಯ 2018–19ನೇ ಸಾಲಿನಲ್ಲಿ 6ಜನ ಪ್ರೊಬೇಷನರಿ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳುಗಳಾಗಿ ನಿಗಮದಲ್ಲಿ ವಿಲೀನಗೊಳಿಸಲಾಗಿರುತ್ತದೆ.

ನಿಗಮವು ಸುಧಾರಣೆ ಹಾಗೂ ಪುನಃರಚನೆಯ ಮುಂಚೂಣಿಯಲ್ಲಿರುವುದರಿಂದ, ಈ ನಿಟ್ಟಿನಲ್ಲಿ ನೌಕರವರ್ಗ ಹಾಗೂ ಆಡಳಿತ ವರ್ಗ ಪರಸ್ಪರ ಸಮಾಲೋಚಿಸಿ, ಪಾರದರ್ಶಕವಾದ ಸಲಹೆಯೊಂದಿಗೆ ಮುಂದುವರಿಯುತ್ತಿರುವುದು ಆಶಾದಾಯಕ ವಿಷಯ. "ಆಡಳಿತದಲ್ಲಿ ಕಾರ್ಮಿಕರ ಪಾತ್ರ" ವನ್ನು ಗುರುತಿಸಿ ಮಹತ್ವ ನೀಡಿರುವ ನಿಗಮದಲ್ಲಿ ನೌಕರರ ಸಂಘವು ಗುರಿ ಸಾಧನೆಗೆ ಸಹಕರಿಸುತ್ತಿರುವುದು ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಸ್ಫೂರ್ತಿಯಾಗಿರುತ್ತದೆ.

ಕಾರ್ಮಿಕ ಸಂಬಂಧ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದ್ದು, ದಿನಾಂಕ: 31.03.2019ರ ಅಂತ್ಯಕ್ಕೆ 26 ಕಾರ್ಮಿಕರ ಪ್ರಕರಣಗಳು, ವಿವಿಧ ಕಾರ್ಮಿಕ ನ್ಯಾಯಾಲಯಗಳಲ್ಲಿ 51 ಪ್ರಕರಣಗಳು ಮತ್ತು 83 ರಿಟ್ ಅರ್ಜಿಗಳು/ ರಿಟ್ ಅಪೀಲ್‌ಗಳು ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿನ ರಾಜ್ಯ ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ.

**I. ಮಹಿಳಾ ದೂರು ನಿವಾರಣ ಸಮಿತಿ :–**

ನಿಗಮದಲ್ಲಿ ಮಹಿಳಾ ನೌಕರುಗಳಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಕಾರ್ಯ ಕ್ಷೇತ್ರಗಳಲ್ಲಿ ತೊಂದರೆ ಮತ್ತು ಅನುಚಿತ ವರ್ತನೆಗಳ ಬಗ್ಗೆ ದೂರು ನೀಡಲು ನಿಗಮದ ಆದೇಶ ದಿನಾಂಕ: 03.07.1998ರ ಅನುಸಾರ ಮಹಿಳಾ ದೂರು ನಿವಾರಣ ಸಮಿತಿಯನ್ನು ನಿಗಮದಲ್ಲಿ ರಚಿಸುತ್ತಾ ಬಂದಿದ್ದು, ಸದರಿ ಸಮಿತಿಯಲ್ಲಿ ಒಬ್ಬ ಛೇರ್‌ಮನ್ ಹಾಗೂ 7ಜನ ಸದಸ್ಯರುಗಳೊಳಗೊಂಡು ಒಬ್ಬರು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯಾಗಿರುತ್ತಾರೆ.

**ಕಾಯಿದೆಯಡಿ ರಚಿಸಲಾದ ಸಮಿತಿ ಹೀಗಿದೆ:**

| ಕ್ರಮ ಸಂಖ್ಯೆ | ಹೆಸರು | ಸಮಿತಿಯಲ್ಲಿನ ಹುದ್ದೆ |
|---|---|---|
| 1. | ಶ್ರೀಮತಿ. ರೂತ್ ಜಾರ್ಜ್ ಮೀರಜ್‌ಕರ್, ಆರ್ಥಿಕ ಸಲಹೆಗಾರರು (ಲೆ&ಸಂ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಅಧ್ಯಕ್ಷರು |
| 2. | ಶ್ರೀಮತಿ.ಸಿ.ಸುಜಾತ, ಕಾರ್ಯನಿರ್ವಾಹಕ ಅಭಿಯಂತರರು(ವಿ)(ಯೋ& ಸ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 3. | ಶ್ರೀಮತಿ ಶಾಂತ, ಸ.ಪ್ರ.ವ್ಯವಸ್ಥಾಪಕರು (ಸೇವೆಗಳು), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 4. | ಶ್ರೀಮತಿ ಅನುರಾಧ ಎಸ್.ವಿ, (ವಿಚಾರಣೆ–2), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು/ಸಂಚಾಲಕರು |
| 5. | ಶ್ರೀಮತಿ ರೂಪ, ಸಹಾಯಕ ವ್ಯವಸ್ಥಾಪಕರು(ಸ್ಥಿರಾಸ್ಥಿ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 6. | ಶ್ರೀಮತಿ ಸ್ವಾತಿ ಎಸ್, ಸಹಾಯಕ ಅಭಿಯಂತರರು(ವಿ)(ಯೋ & ಸ), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 7. | ಶ್ರೀಮತಿ.ಭಾರತಿ, ಹಿರಿಯ ಸಹಾಯಕಿ (ಸಿಬ್ಬಂದಿ–2), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 8. | ಶ್ರೀಮತಿ.ರೆಹಮತ್ ಉನಿಸಾ, ಸಹಾಯಕಿ, ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು | ಸದಸ್ಯರು |
| 9. | ಶ್ರೀಮತಿ.ರಾಧ ಕಿರಿಯ ಸಹಾಯಕಿ, ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ, ಕಾವೇರಿಭವನ, ಬೆಂಗಳೂರು. | ಸದಸ್ಯರು |
| 10. | ಸ್ವಯಂ ಸೇವಾ ಸಂಸ್ಥೆಯ ಒಂದು ಪ್ರತಿನಿಧಿ | ಸದಸ್ಯರು |

ಸಮಿತಿಯು ದೂರುಗಳನ್ನು ಪರಿಹರಿಸಲು ನಿಯಮಿತವಾಗಿ ಸಭೆಗಳಲ್ಲಿ ಚರ್ಚಿಸುತ್ತಿದ್ದು, 2018–19ನೇ ಸಾಲಿನಲ್ಲಿ ಒಂದು ದೂರು ದಾಖಲಾಗಿದ್ದು ಸದರಿ ದೂರಿನ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವಿಲೇವಾರಿಗೊಳಿಸಿದೆ.

ನಿಗಮವು ಕ.ವಿ.ಪ್ರ.ನಿ.ನಿ ನೌಕರರ ಸಂಘದೊಂದಿಗೆ ಉತ್ತಮ ಹಾಗು ಸೌಹಾರ್ದಯುತವಾದ ಬಾಂಧವ್ಯವನ್ನು ಹೊಂದಿರುವ ಕಾರಣದಿಂದ ಮಹಿಳಾ ನೌಕರರಿಗೆ ಉತ್ತಮ ಸೇವೆಯನ್ನು ಸಲ್ಲಿಸಲು ಅನುಕೂಲವಾಗಿರುತ್ತದೆ.

**ಕ್ರೀಡೆಗಳು :**

**2018–19 ನೇ ಸಾಲಿನ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಕ್ರೀಡಾಪಟುಗಳ ಸಾಧನೆ :**

ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಕ್ರೀಡಾಕೂಟಗಳಲ್ಲಿ ಕವಿಪ್ರನಿನಿಯ ಈ ಕೆಳಕಂಡ ತಂಡಗಳು ಭಾಗವಹಿಸಿದ್ದವು.

**ಮಹಿಳಾ ಕ್ರೀಡೆಗಳು, ವಾಲಿಬಾಲ್, ಟೇಬಲ್ ಟೆನ್ನಿಸ್ ಮತ್ತು ಫುಟ್‌ಬಾಲ್**

ಕವಿಪ್ರನಿನಿ ಕ್ರೀಡಾಪಟುಗಳು ಅಂತರ್ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಅಂತರ್ ರಾಷ್ಟ್ರೀಯ ಪದಕಗಳನ್ನು, ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ರ‍್ಯಾಂಕ್‌ಗಳನ್ನು ಪಡೆದು ನಿಗಮಕ್ಕೆ ಕೀರ್ತಿ ತಂದಿರುತ್ತಾರೆ.

| | |
|---|---|
| **ಬಾಡಿಬಿಲ್ಡಿಂಗ್:**<br><br><br><br>**ಬಿಲಿಯರ್ಡ್ಸ್ ಮತ್ತು ಸ್ನೂಕರ್:** | **ಅಂತರರಾಷ್ಟ್ರೀಯ ಮಟ್ಟದ ಸಾಧನೆ :**<br>ಶ್ರೀ ರೋಷನ್ ಫೆರವೋ, ಕಿರಿಯ ಸಹಾಯಕ, ಉಳ್ಳಾಲ ಉಪವಿಭಾಗ, ಇವರು **ನವೆಂಬರ್–2018**ರಲ್ಲಿ ಯು.ಎಸ್.ಎ ನಲ್ಲಿ ನಡೆದ **ಐಎನ್‌ಬಿಎ–ನ್ಯಾಚುರಲ್ ವರ್ಲ್ಡ್‌ಕಪ್ ಮತ್ತು ನ್ಯಾಚುರಲ್ ಒಲಂಪಿಯ** ಪಂದ್ಯಾವಳಿಯಲ್ಲಿ ಭಾಗವಹಿಸಿ **2 ಚಿನ್ನದ ಪದಕವನ್ನು** ಪಡೆದಿರುತ್ತಾರೆ.<br>ಶ್ರೀ ಡಿ.ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು ರಾಷ್ಟ್ರವನ್ನು ಪ್ರತಿನಿಧಿಸಿ **ಡಿಸೆಂಬರ್–2018**ರಲ್ಲಿ ಈಜಿಪ್ಟ್‌ನ ಮರ್ಸಾ ಆಲಮ್‌ನಲ್ಲಿ ನಡೆದ **ವರ್ಲ್ಡ್ 6 ರೆಡ್ ಸ್ನೂಕರ್ ಚಾಂಪಿಯನ್‌ಶಿಪ್ ಮತ್ತು ವರ್ಲ್ಡ್ ಮಾಸ್ಟಾರ್ಟ್ಸ್ ಸ್ನೂಕರ್ ಚಾಂಪಿಯನ್‌ಶಿಪ್**‌ನಲ್ಲಿ ಭಾಗವಹಿಸಿ **ಕ್ವಾಟರ್ ಫೈನಲ್** ಹಂತಕ್ಕೆ ತಲುಪಿರುತ್ತಾರೆ. |
| **ಬಿಲಿಯರ್ಡ್ಸ್ ಮತ್ತು ಸ್ನೂಕರ್:** | **ರಾಷ್ಟ್ರೀಯ ಮಟ್ಟದ ಸಾಧನೆ :**<br>ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ನವೆಂಬರ್–2018 ರಂದು ದೆಹಲಿಯಲ್ಲಿ ನಡೆದ **ನ್ಯಾಷನಲ್ ಮಾಸ್ಟರ್ಟ್ಸ್ ಸ್ನೂಕರ್ ಚಾಂಪಿಯನ್‌ಶಿಪ್**‌ನಲ್ಲಿ ಭಾಗವಹಿಸಿ **6ನೇ ರ‍್ಯಾಂಕ್** ಪಡೆದಿರುತ್ತಾರೆ.<br>ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ **ಫೆಬ್ರವರಿ–2019** ರಂದು **ಇಂದೋರ್**‌ನಲ್ಲಿ ನಡೆದ **ನ್ಯಾಷನಲ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಷಿಪ್**‌ನಲ್ಲಿ ಭಾಗವಹಿಸಿರುತ್ತಾರೆ. |
| **ಬಿಲಿಯರ್ಡ್ಸ್, ಸ್ನೂಕರ್ ಮತ್ತು ಫುಲ್:**<br><br><br><br><br><br><br><br>**ಕ್ರಿಕೆಟ್** | **ರಾಜ್ಯ ಮಟ್ಟದ ಸಾಧನೆ :**<br>ಶ್ರೀ ಡಿ. ರಾಜ್‌ಕುಮಾರ್, ಕ್ರೀಡಾ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಇವರು 2018–19ನೇ ಸಾಲಿನ ರಾಜ್ಯ ರ‍್ಯಾಂಕಿಂಗ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಈ ಕೆಳಕಂಡ ರ‍್ಯಾಂಕ್‌ಗಳನ್ನು ಪಡೆದಿರುತ್ತಾರೆ.<br>• ಬಿಲಿಯರ್ಡ್ಸ್ – 2ನೇ ರ‍್ಯಾಂಕ್<br>• 9 ಬಾಲ್ ಫುಲ್ – 5ನೇ ರ‍್ಯಾಂಕ್<br>• ಸ್ನೂಕರ್ – 5ನೇ ರ‍್ಯಾಂಕ್<br>• 6 ರೆಡ್ ಸ್ನೂಕರ್ – 5ನೇ ರ‍್ಯಾಂಕ್<br>• ಕವಿಪ್ರನಿನಿ ಕ್ರಿಕೆಟ್ ತಂಡವು ಫೆಬ್ರವರಿ–2019 ರಲ್ಲಿ ಬೆಂಗಳೂರಿನಲ್ಲಿ ನಡೆದ ಕೆಎಸ್‌ಸಿಎ ಗ್ರೂಪ್– 2, 2ನೇ ಡಿವಿಷನ್ ಲೀಗ್‌ನಲ್ಲಿ ಭಾಗವಹಿಸಿರುತ್ತಾರೆ.<br>• ಶ್ರೀ ಪ್ರಕಾಶ್ ಹೊನ್ನಾವಡ್ (ಅಂಗವಿಕಲರು) ಕಂದಾಯ ಸಹಾಯಕ, ಹುಬ್ಬಳ್ಳಿ ರವರು ಫೆಬ್ರವರಿ–2019ರಲ್ಲಿ ಮುಂಬೈನಲ್ಲಿ ನಡೆದ ಸೌತ್ ಝೋನ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ತಂಡದ ನಾಯಕರಾಗಿ ಭಾಗವಹಿಸಿರುತ್ತಾರೆ. |

| ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಪಂದ್ಯಾವಳಿಗಳಲ್ಲಿ ಮತ್ತು ಇತರೆ ಪಂದ್ಯಾವಳಿಗಳಲ್ಲಿ ಭಾಗವಹಿಸಿರುವ ವಿವರ | |
|---|---|
| **ಮಹಿಳಾ ಕ್ರೀಡೆಗಳು** | ಕವಿಪ್ರನಿನಿ ಮಹಿಳಾ ತಂಡವು **ಜೂನ್–2018**ರಲ್ಲಿ **ತಿರುಪತಿ**ಯಲ್ಲಿ ನಡೆದ 42ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಮಹಿಳಾ ಕ್ರೀಡಾಕೂಟದಲ್ಲಿ ಭಾಗವಹಿಸಿ ಈ ಕೆಳಕಂಡ ಸಾಧನೆ ಮಾಡಿರುತ್ತಾರೆ.<br>• ಬ್ಯಾಡ್ಮಿಂಟನ್(ತಂಡ ಪ್ರಶಸ್ತಿ) – 3ನೇ ಸ್ಥಾನ<br>• ಟೆನ್ನಿಕಾಯಿಟ್(ತಂಡ ಪ್ರಶಸ್ತಿ) – 2ನೇ ಸ್ಥಾನ<br>• ಟೆನ್ನಿಕಾಯಿಟ್(ಓಪನ್ ಡಬಲ್ಸ್) – 1ನೇ ಸ್ಥಾನ<br>• ಟೆನ್ನಿಕಾಯಿಟ್(ಓಪನ್ ಸಿಂಗಲ್ಸ್) – 2ನೇ ಸ್ಥಾನ<br>• ಚೆಸ್(3ನೇ ಬೋರ್ಡ್ ಪ್ರಶಸ್ತಿ) – 1ನೇ ಸ್ಥಾನ<br>• ಚೆಸ್(ತಂಡ ಪ್ರಶಸ್ತಿ) – 2ನೇ ಸ್ಥಾನ |
| **ವಾಲಿಬಾಲ್ ಮಹಿಳಾ ಕ್ರೀಡೆಗಳು** | ಕವಿಪ್ರನಿನಿ ವಾಲಿಬಾಲ್ ತಂಡವು **ಸೆಪ್ಟಂಬರ್–2018** ರಲ್ಲಿ **ಕೊಲ್ಕತ್ತಾ**ದಲ್ಲಿ ನಡೆದ 42ನೇ ಅಖಿಲ ಭಾರತ ಕ್ರೀಡಾ ನಿಯಂತ್ರಣ ಮಂಡಳಿಯ ವಾಲಿಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಿರುತ್ತಾರೆ.<br>ಕವಿಪ್ರನಿನಿ ಮಹಿಳಾ ತಂಡವು **ಫೆಬ್ರವರಿ – 2019** ರಲ್ಲಿ **ತಮಿಳುನಾಡಿನ ಈರೋಡ್**ನಲ್ಲಿ ನಡೆದ 43ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಮಹಿಳಾ ಕ್ರೀಡಾಕೂಟದಲ್ಲಿ ಭಾಗವಹಿಸಿ ಈ ಕೆಳಕಂಡ ಸಾಧನೆಗಳನ್ನು ಮಾಡಿರುತ್ತಾರೆ.<br>• ಟೇಬಲ್ ಟೆನ್ನಿಸ್(ತಂಡ ಪ್ರಶಸ್ತಿ) – 2ನೇ ಸ್ಥಾನ<br>• ಟೇಬಲ್ ಟೆನ್ನಿಸ್(ಡಬಲ್ಸ್) – 2ನೇ ಸ್ಥಾನ<br>• ಟೆನ್ನಿಕಾಯಿಟ್(ತಂಡ ಪ್ರಶಸ್ತಿ) – 2ನೇ ಸ್ಥಾನ<br>• ಟೆನ್ನಿಕಾಯಿಟ್(ಡಬಲ್ಸ್) – 1ನೇ ಸ್ಥಾನ<br>• ಟೆನ್ನಿಕಾಯಿಟ್(ಸಿಂಗಲ್ಸ್) – 1ನೇ ಸ್ಥಾನ |
| **ವಾಲಿಬಾಲ್** | ಕವಿಪ್ರನಿನಿ ವಾಲಿಬಾಲ್ ತಂಡವು **ಫೆಬ್ರವರಿ –2019**ರಲ್ಲಿ **ನಾಸಿಕ್**ನಲ್ಲಿ ನಡೆದ 43ನೇ ಅಖಿಲ ಭಾರತ ಕ್ರೀಡಾ ನಿಯಂತ್ರಣ ಮಂಡಳಿಯ ವಾಲಿಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಿರುತ್ತಾರೆ. |
| **ಟೇಬಲ್ ಟೆನ್ನಿಸ್** | ಕವಿಪ್ರನಿನಿ ಟೇಬಲ್ ಟೆನ್ನಿಸ್ ತಂಡವು **ಮಾರ್ಚ್–2019**ರಲ್ಲಿ **ಛತ್ತೀಸ್‌ಗಡ್**ನ ರಾಯಪುರದಲ್ಲಿ ನಡೆದ 43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಟೇಬಲ್ ಟೆನ್ನಿಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರುತ್ತಾರೆ. |
| **ಫುಟ್‌ಬಾಲ್** | ಕವಿಪ್ರನಿನಿ ಫುಟ್‌ಬಾಲ್ ತಂಡವು **ಮಾರ್ಚ್–2019**ರಲ್ಲಿ **ಕೊಲ್ಕತ್ತಾ**ದಲ್ಲಿ ನಡೆದ 43ನೇ ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯ ಫುಟ್‌ಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಿರುತ್ತಾರೆ. |

| ಕವಿಪ್ರನಿನಿ ಕ್ರೀಡಾಪಟುಗಳು ತರಬೇತುದಾರರಾಗಿ ಭಾಗವಹಿಸಿರುವ ವಿವರ | |
|---|---|
| **ಕಬಡ್ಡಿ:** | ಶ್ರೀ ಮುತ್ತುರಾಜ್, ಕಿರಿಯ ಮಾರ್ಗದಾಳು, ಪಶ್ಚಿಮ ವಿಭಾಗ, ಬೆಸ್ಕಾಂ ರವರು **ಫೆಬ್ರವರಿ –2019**ರಲ್ಲಿ **ಕೊಲ್ಕತ್ತಾ**ದಲ್ಲಿ ನಡೆದ 45ನೇ ಅತಿಕಿರಿಯ ಬಾಲಕರು ಮತ್ತು ಬಾಲಿಕಿಯರ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯ ಅತಿಕಿರಿಯರ ತಂಡದ ತರಬೇತುದಾರರಾಗಿ ಭಾಗವಹಿಸಿರುತ್ತಾರೆ. |

**ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ಕಾವೇರಿ ಭವನದಲ್ಲಿ ಏರ್ಪಡಿಸಿದ ಪಂದ್ಯಾವಳಿಗಳ ಬಗ್ಗೆ.**

ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ಕಾವೇರಿ ಭವನದಲ್ಲಿ ಪುರುಷರ ಮತ್ತು ಮಹಿಳೆಯ ಅಧಿಕಾರಿ/ನೌಕರರುಗಳಿಗೆ ಕೇರಂ ಮತ್ತು ಚೆಸ್ ಸ್ಪರ್ಧೆಗಳನ್ನು ಕವಿಪ್ರನಿನಿ ಕ್ರೀಡಾ ಸಂಸ್ಥೆಯಿಂದ ಏರ್ಪಡಿಸಲಾಗಿತ್ತು. ಸದರಿ ಪಂದ್ಯಾವಳಿಗಳಲ್ಲಿ ವಿಜೇತರಾದವರಿಗೆ ಸ್ವಾತಂತ್ರ್ಯೋತ್ಸವ ದಿನದಂದು ಪದಕಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ನಿಗಮ/ಎಸ್ಕಾಂಗಳಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಅಧಿಕಾರಿ/ನೌಕರರಲ್ಲಿ ಇರುವ ಯುವ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂಬ ಉದ್ದೇಶದ ಹಿನ್ನೆಲೆಯಲ್ಲಿ ಕವಿಪ್ರನಿನಿ ಕ್ರೀಡಾ ಶಾಖೆಯು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತರಬೇತಿಗೆ ಆಗುಮಿಸುವ ಅಧಿಕಾರಿ/ನೌಕರರಿಗೆ ಕವಿಪ್ರನಿನಿ ಕ್ರೀಡಾ ಸಂಸ್ಥೆಯ ಬಗ್ಗೆ, ಕ್ರೀಡಾಪಟುಗಳ ಬಗ್ಗೆ, ಕ್ರೀಡಾ ಚಟುವಟಿಕೆಗಳ ಬಗ್ಗೆ, ರಾಷ್ಟ್ರೀಯ, ಅಂತರರಾಷ್ಟ್ರೀಯ, ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳ ಬಗ್ಗೆ **'ಪವರ್‌ಪಾಯಿಂಟ್ ಪ್ರೆಸೆಂಟೇಷನ್'** ಮೂಲಕ ಪರಿಚಯಿಸಲಾಗುತ್ತಿದೆ. ಮುಖ್ಯವಾಗಿ ಕವಿಪ್ರನಿನಿ ತಂಡಗಳು ಅಖಿಲ ಭಾರತ ವಿದ್ಯುತ್ ಕ್ರೀಡಾ ನಿಯಂತ್ರಣ ಮಂಡಳಿಯು ನಡೆಸುವ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕುರಿತು ನಡೆಸಲಾಗುವ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ, ಕಂಪನಿ ಮಟ್ಟದ ಆಯ್ಕೆ ಪ್ರಕ್ರಿಯೆ, ಅಂತರ ಕಂಪನಿ ಪಂದ್ಯಾವಳಿಗಳ ಕುರಿತು ತಿಳಿಸಲಾಗುತ್ತಿದೆ. ಕವಿಪ್ರನಿನಿ ಕ್ರೀಡಾ ಶಾಖೆಯು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತರಬೇತಿಗೆ ಆಗುಮಿಸುವ ಹೊಸದಾಗಿ ನೇಮಕಾತಿ ಹೊಂದಿರುವ ಅಧಿಕಾರಿ/ನೌಕರರಿಗೆ ಕ್ರೀಡಾ ಚಟುವಟಿಕೆಗಳು ಹಾಗೂ ಸ್ಪರ್ಧೆಗಳನ್ನು ಏರ್ಪಡಿಸುತ್ತದೆ.

ಮುಂದುವರಿದಂತೆ ಕವಿಪ್ರನಿನಿ ಕ್ರೀಡಾ ಸಂಸ್ಥೆಯು ಅಂತರರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ಹಾಗೂ ವಿವಿಧ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಅಂತರರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಮತ್ತು ರಾಜ್ಯ ಮಟ್ಟದ ಸಾಧನೆ ಮಾಡುತ್ತಿರುವ ಕ್ರೀಡಾಪಟುಗಳನ್ನು ಗುರುತಿಸಿ, ಉತ್ತೇಜಿಸುತ್ತಿದೆ ಹಾಗೂ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಆಯ್ಕೆಗೊಂಡ ಕ್ರೀಡಾಪಟುಗಳನ್ನು ನಿಯೋಜಿಸಲಾಗುತ್ತಿದೆ. ಒಟ್ಟಾರೆ ಕವಿಪ್ರನಿನಿ ಕ್ರೀಡಾಪಟುಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುತ್ತಾರೆ. ಇವರುಗಳಿಗೆ ನಿಗಮದ ವತಿಯಿಂದ ಅಭಿನಂದನೆಗಳು.

**ಸಾಂಸ್ಥಿಕ ಆಡಳಿತ**

ಕ.ವಿ.ಪ್ರ.ನಿ.ನಿ.ಯು ತನ್ನ ಎಲ್ಲಾ ರೀತಿಯ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಪ್ರಾಮಾಣಿಕತೆಯ ಬಗ್ಗೆ ನಂಬಿಕೆ ಹೊಂದಿದೆ.

ಕ.ವಿ.ಪ್ರ.ನಿ.ನಿ.ಯ ಮಂಡಳಿಯು ತನ್ನ ಎಲ್ಲ ವ್ಯವಹರಣೆಗಳಲ್ಲಿ ಉತ್ತಮ ಆಚರಣೆಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಆಡಳಿತದ ಅಭ್ಯಾಸಗಳನ್ನು ನಂಬುತ್ತದೆ ಮತ್ತು ಬೆಂಬಲಿಸುತ್ತದೆ.

ಕಂಪನಿಯಲ್ಲಿನ ಆಡಳಿತದ ಪ್ರಕ್ರಿಯೆಯು, ಸಭೆಗಳ ನಂತರ ಅನುಸರಣೆ, ಪರಿಶೀಲನೆ ಹಾಗೂ ಮಂಡಳಿಯಿಂದ/ಮಂಡಳಿಯ ಉಪ ಸಮಿತಿಗಳಿಂದ ಕೈಗೊಂಡ ಕ್ರಮಗಳಿಗೆ/ ನಿರ್ಣಯಗಳ ಬಾಕಿ ಇರುವುದಕ್ಕೆ ವರದಿ ಸಲ್ಲಿಕೆ ಇಂತಹ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ.

31 ಮಾರ್ಚ್ 2019ರ ಅಂತ್ಯಕ್ಕೆ ಇರುವಂತೆ ನಿರ್ದೇಶಕರ ಮಂಡಳಿಯು 11 ಸದಸ್ಯರನ್ನು ಒಳಗೊಂಡಿರುತ್ತದೆ. ಮಂಡಳಿ ಮತ್ತು ಉಪಸಮಿತಿ ಸಭೆಗಳಲ್ಲಿ ಎಲ್ಲಾ ನಿರ್ದೇಶಕರು ಸಕ್ರಿಯವಾಗಿ ಪಾಲ್ಗೊಳ್ಳುವುದು ನಿರ್ಧಾರ ತೆಗೆದುಕೊಳ್ಳುವ ಪಕ್ರಿಯೆಗೆ ಮೌಲ್ಯವನ್ನು ನೀಡುತ್ತದೆ.

**ದಿನಾಂಕ : 01–04–2018ರಿಂದ ವರದಿ ಮಾಡುವ ದಿನಾಂಕದ ಅವಧಿಯಲ್ಲಿ ಮಂಡಳಿಯ ನಿರ್ದೇಶಕರಾಗಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿದೆ :**

| ಕ್ರಮ ಸಂಖ್ಯೆ | ನಿರ್ದೇಶಕರುಗಳ ಹೆಸರು ಶ್ರೀ/ಶ್ರೀಮತಿ | ಡಿ.ಐ.ಎನ್ | ಹುದ್ದೆ | ಅವಧಿ | |
|---|---|---|---|---|---|
| | | | | ಇಂದ | ವರೆಗೆ |
| 1 | ಬಿ.ಎಸ್. ಯಡಿಯೂರಪ್ಪ | 02319705 | ಗೌರವಾನ್ವಿತ ಅಧ್ಯಕ್ಷರು | 05/08/2019 | – |
| 2 | ಹೆಚ್.ಡಿ. ಕುಮಾರಸ್ವಾಮಿ | 00267014 | ಗೌರವಾನ್ವಿತ ಅಧ್ಯಕ್ಷರು | 11/06/2018 | 05/08/2019 |
| 3 | ಡಿ.ಕೆ. ಶಿವಕುಮಾರ್ | 02021885 | ಗೌರವಾನ್ವಿತ ಅಧ್ಯಕ್ಷರು | 01/02/2014 | 01/06/2018 |
| 4 | ಜಾವೇದ್ ಅಕ್ತರ್, ಭಾ.ಆ.ಸೇ | 00385170 | ವ್ಯವಸ್ಥಾಪಕ ನಿರ್ದೇಶಕರು | 27/05/2015 | 08/08/2018 |

| ಕ್ರಮ ಸಂಖ್ಯೆ | ನಿರ್ದೇಶಕರುಗಳ ಹೆಸರು ಶ್ರೀ/ಶ್ರೀಮತಿ | ಡಿ.ಐ.ಎನ್ | ಹುದ್ದೆ | ಅವಧಿ | |
|---|---|---|---|---|---|
| | | | | ಇಂದ | ವರಗೆ |
| 5 | ಡಾ.ಎಸ್. ಸೆಲ್ವಕುಮಾರ್ ಭಾ.ಆ.ಸೇ | 00962240 | ವ್ಯವಸ್ಥಾಪಕ ನಿರ್ದೇಶಕರು | 08/08/2018 | 05/08/2019 |
| 6 | ಡಾ.ಎನ್. ಮಂಜುಳ, ಭಾ.ಆ.ಸೇ | 07508345 | ವ್ಯವಸ್ಥಾಪಕ ನಿರ್ದೇಶಕರು | 20/08/2019 | |
| 7 | ಪಿ. ರವಿಕುಮಾರ್, ಭಾ.ಆ.ಸೇ | 02285126 | ನಿರ್ದೇಶಕರು | 21/10/2017 | 24/06/2019 |
| | | | | 05/08/2019 | – |
| 8 | ಮಹೇಂದ್ರ ಜೈನ್, ಭಾ.ಆ.ಸೇ | 01660388 | ನಿರ್ದೇಶಕರು | 24/06/2019 | – |
| 9 | ಐ.ಎಸ್.ಎನ್. ಪ್ರಸಾದ್,ಭಾ.ಆ.ಸೇ | 01469651 | ನಿರ್ದೇಶಕರು | 24/08/2015 | – |
| 10 | ಎಮ್. ಲಕ್ಷ್ಮೀನಾರಯಣ, ಭಾ.ಆ.ಸೇ | 01895040 | ನಿರ್ದೇಶಕರು | 01/06/2018 | 27/06/2018 |
| 11 | ಇ.ವಿ. ರಮಣ ರೆಡ್ಡಿ, ಭಾ.ಆ.ಸೇ | 02935216 | ನಿರ್ದೇಶಕರು | 27/06/2018 | 05/08/2019 |
| 12 | ಜಿ. ಕುಮಾರ್ ನಾಯಕ್, ಭಾ.ಆ.ಸೇ | 01918435 | ನಿರ್ದೇಶಕರು | 07/05/2016 | 15/12/2018 |
| 13 | ವಿ. ಪೊನ್ನುರಾಜ್, ಭಾ.ಆ.ಸೇ | 05211567 | ನಿರ್ದೇಶಕರು | 15/12/2018 | – |
| | | | ವ್ಯವಸ್ಥಾಪಕ ನಿರ್ದೇಶಕರು (ಅಧಿಕ ಪ್ರಭಾರ) | 05/08/2019 | 20/08/2019 |
| 14 | ಪಿ. ರಾಜೇಂದ್ರ ಚೋಳನ್, ಭಾ.ಆ.ಸೇ | 06395219 | ನಿರ್ದೇಶಕರು | 13/06/2018 | 14/08/2018 |
| 15 | ಶಿಖಾ ಸಿ, ಭಾ.ಆ.ಸೇ | 06447295 | ನಿರ್ದೇಶಕರು | 14/08/2018 | 18/09/2019 |
| 16 | ರಾಜೇಶ್ ಗೌಡ ಎಮ್.ಬಿ, ಭಾ.ಆ.ಸೇ | 06917336 | ನಿರ್ದೇಶಕರು | 18/09/2019 | – |
| 17 | ಎಮ್. ರಾಮಕೃಷ್ಣ | 07008930 | ನಿರ್ದೇಶಕರು (ಆ ಮತ್ತು ಮಾ.ಸಂ) | 06/09/2014 | 22/06/2018 |
ಕಂಪನಿ ಕಾಯ್ದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆ.ವ2011–12,2012–13 ಮತ್ತು 2013–14ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ.

ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

6. **ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳು**

ಸಾ.ಸಾ.ಹೊ. ಸಮಿತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ನಿರ್ಧರಿಸುತ್ತದೆ :

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕ ಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;
- ಸಾ.ಸಾ.ಹೊ.ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಯಾವುದೇ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.
- ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ ಸಾ.ಸಾ.ಹೊ.ಚಟುವಟಿಕೆಗಳಿಂದ ಒದಗಿದ ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.
- ನಿಗಮದ ಉದ್ಯೋಗಿಗಳ ಸಾ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ಸಾ.ಸಾ.ಹೊ.ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

7. **ಆಡಳಿತ**

1. ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವ ಸಾ.ಸಾ.ಹೊ.ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚ ವಿವರಗಳ ಪ್ರಸ್ತಾಪವನ್ನು ಸಾ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ಸಾ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.
2. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಸಾ.ಸಾ.ಹೊ.ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.
3. ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ಸಾ.ಸಾ.ಹೊ.ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.
4. ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ಸಾ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

8. **ಮಾಹಿತಿಯ ಪ್ರಚಾರ**

ಸಾ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾ.ಹೊ. ಯೋಜನೆಗಳು/ ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಗಮವು ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.kptcl.com/ePrasarana ದಲ್ಲಿ ತುಂಬಿಸತಕ್ಕದ್ದು. ಮುಂದುವರೆಸಿ, ಸಾ.ಸಾ.ಹೊ. ಕಾರ್ಯಚಟುವಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚಾರಪಡಿಸುವುದು.

ಸಾ.ಸಾ.ಹೊ. ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ಸಾ.ಸಾ.ಹೊ. ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

## 2018–19ರ ನಿರ್ದೇಶಕರ ಮಂಡಳಿಯ ವರದಿಗೆ ಅನುಬಂಧ–4

**2018–19ರ ಮಂಡಳಿಯ ವರದಿಗೆ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಸೇರ್ಪಡಿಸಬೇಕಾಗಿರುತ್ತದೆ.**

(ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ನೀತಿಯ ಸಂಕ್ಷಿಪ್ತ ನೋಟ, ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿರುವ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅವಲೋಕನ, ಇವುಗಳನ್ನು ಅನುಬಂಧ–3 ಎಂದು ಲಗತ್ತಿಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ ಹಾಗೂ ಯೋಜನೆ/ಕಾರ್ಯಕ್ರಮಗಳ ಜಾಲತಾಣ ಸಂಪರ್ಕ: www.kptcl.com.

1. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ರಚನೆ ಹೀಗಿದೆ:

| ಕ್ರ.ಸಂ. | ಹೆಸರು / ಶ್ರೀಯುತ | ಪದನಾಮ |
|---|---|---|
| 1. | ಅಪರ ಮುಖ್ಯ ಕಾರ್ಯದರ್ಶಿ,<br>ಕರ್ನಾಟಕ ಸರ್ಕಾರ, ಇಂಧನ ಇಲಾಖೆ | ಅಧ್ಯಕ್ಷರು |
| 2. | ಅಪರ ಮುಖ್ಯ ಕಾರ್ಯದರ್ಶಿ,<br>ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ, | ಸದಸ್ಯರು |
| 3. | ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಸದಸ್ಯರು |
| | ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. | ಸಂಚಾಲಕರು |

2. ಆರ್ಥಿಕ ವರ್ಷ 2018–19ಕ್ಕೆ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಬೇಕಾದ ಮೊತ್ತದ ಲೆಕ್ಕಾಚಾರ.

| ಕ್ರ.ಸಂ. | ಆರ್ಥಿಕ ವರ್ಷ | ತೆರಿಗೆಗೆ ಮುಂಚಿನ ನಿವ್ವಳ ಲಾಭ (ರೂ.ಗಳಲ್ಲಿ) |
|---|---|---|
| 1. | 2015–16 | 229,53,23,390 |
| 2. | 2016–17 | 1915,08,07,018 |
| 3. | 2017–18 | 812,35,29,074 |
| 4. | ಒಟ್ಟು | 2956,96,59,482 |
| 5. | ಸರಾಸರಿ ನಿವ್ವಳ ಲಾಭ | 985,65,53,161 |
| 6. | ಶೇ.2% ರಂತೆ ಸರಾಸರಿ ನಿವ್ವಳ ಲಾಭ | 19,71,31,063 |
| 7. | ಹಿಂದಿನ ಆರ್ಥಿಕ ವರ್ಷ 2017–18ರಲ್ಲಿ ವ್ಯಯಿಸಲಾಗದ ಮೊತ್ತ. | 1,22,58,274 |
| 8. | ಆರ್ಥಿಕ ವರ್ಷ 2018–19ಕ್ಕೆ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಬೇಕಾದ ಮೊತ್ತ. | 20,93,89,337 |

ಕಳೆದ ಮೂರು ವರ್ಷಗಳಲ್ಲಿ (ಆ.ವ.2015–16 ರಿಂದ 2017–18) ಕಂಪನಿಯ ಸರಾಸರಿ ನಿವ್ವಳ ಲಾಭ (ತೆರಿಗೆಗೆ ಮುಂಚಿನ ನಿವ್ವಳ ಲಾಭವನ್ನು ಪರಿಗಣಿಸಿದ ನಂತರ) : ರೂ. 985,65,53,161/–.

3. ಪ್ರಸಕ್ತ ಆರ್ಥಿಕ ವರ್ಷ 2018–19ಕ್ಕೆ ನಿಗಧಿಪಡಿಸಿರುವ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಬೇಕಾದ ಮೊತ್ತ. : ರೂ. 20,93,89,337/–.

4. ಪ್ರಸಕ್ತ ಆರ್ಥಿಕ ವರ್ಷ2018–19 ರಲ್ಲಿ ವ್ಯಯಿಸಿದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ವೆಚ್ಚದ ವಿವರಗಳು
   - ಎ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ವ್ಯಯಿಸಿದ ಒಟ್ಟು ಮೊತ್ತ : ರೂ.15,58,00,000/–
   - ಬಿ) ವ್ಯಯಿಸಲಾಗದೆ ಉಳಿದಿರುವ ಮೊತ್ತ : ರೂ. 5,35,89,337/–

ಸಿ) ಸದರಿ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದ ಮೊತ್ತದ ವಿಧಾನ ಈ ಕೆಳಗಿನಂತಿದೆ:

| (1)<br>ಕ್ರ ಸಂ. | (2)<br>ಸಿ.ಎಸ್.ಆರ್. ಯೋಜನೆ ಅಥವಾ ಗುರುತಿಸಿರುವ ಚಟುವಟಿಕೆ. | (3)<br>ಯೋಜನೆಯು ಯಾವ ಕ್ಷೇತ್ರದಲ್ಲಿ ಒಳಗೊಂಡಿದೆ. | (4)<br>ಯೋಜನೆ ಅಥವಾ ಕಾರ್ಯಕ್ರಮಗಳು 1) ಸ್ಥಳೀಯ ಪ್ರದೇಶ ಅಥವಾ ಇತರೆ 2) ಯೋಜನೆ ಅಥವಾ ಕಾರ್ಯಕ್ರಮವನ್ನು ಕೈಗೊಂಡ ರಾಜ್ಯ ಹಾಗೂ ಜಿಲ್ಲೆಯ ಹೆಸರನ್ನು ತಿಳಿಸಿ | (5)<br>ಯೋಜನೆ/ ಕಾರ್ಯಕ್ರಮವಾರು ಹೂಡಿದ ಮೊತ್ತ (ಬಜೆಟ್) | (6)<br>ಭರಿಸಿದ ಮೊಬಲಗಿನ ವೆಚ್ಚ ಯೋಜನೆ/ಕಾಮಗಾರಿಗಳಿಗೆ ಭರಿಸಿದ ವೆಚ್ಚ ಉಪ–ಕಂಡಿಕೆ | (7)<br>ವರದಿ ಸಲ್ಲಿಕೆಯವರೆಗಿನ ಸಂಚಿತ ವೆಚ್ಚ | (8)<br>ನೇರವಾಗಿ ಅಥವಾ ಅನುಷ್ಠಾನದ ಏಜೆನ್ಸಿ ಮೂಲಕ ಭರಿಸಿದ ವೆಚ್ಚ |
|---|---|---|---|---|---|---|---|
| 1. | ರಾಮನಗರದ ಅರ್ಚಕರಹಳ್ಳಿಯ ಜೆ.ಎಸ್.ಬಿ ಬ್ಲೈಂಡ್ ಶಾಲಾವರಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ | ಶಿಕ್ಷಣ | ಅರ್ಚಕರಹಳ್ಳಿ ರಾಮನಗರ, ಕರ್ನಾಟಕ | ರೂ.400 ಲಕ್ಷ | ರಾಮನಗರದ ಅರ್ಚಕರಹಳ್ಳಿಯ ಜೆ.ಎಸ್.ಬಿ ಬ್ಲೈಂಡ್ ಶಾಲಾವರಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ | ರೂ.400 ಲಕ್ಷ | ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್(ರಿ), ಜೆ.ಎಸ್.ಬಿ ಬ್ಲೈಂಡ್ ಶಾಲೆ, ಅರ್ಚಕರಹಳ್ಳಿ ರಾಮನಗರ, ಕರ್ನಾಟಕ |
| 2. | ವೈದ್ಯಕೀಯ ಉಪಕರಣಗಳ ಖರೀದಿ | ಆರೋಗ್ಯ ರಕ್ಷಣೆ | ಬೆಂಗಳೂರು ನಗರ | ರೂ.634 ಲಕ್ಷ | ವೈದ್ಯಕೀಯ ಉಪಕರಣಗಳ ಖರೀದಿ | ರೂ.1034 ಲಕ್ಷ | ಶ್ರೀ ಜಯದೇವ ಕಾರ್ಡಿಯೊ ವ್ಯಾಸ್ಕ್ಯುಲರ್ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು |
| 3. | ವೈದ್ಯಕೀಯ ಉಪಕರಣಗಳ ಖರೀದಿ | ಆರೋಗ್ಯ ರಕ್ಷಣೆ | ಬೆಂಗಳೂರು ನಗರ | ರೂ.524 ಲಕ್ಷ | ವೈದ್ಯಕೀಯ ಉಪಕರಣಗಳ ಖರೀದಿ | ರೂ.1558 ಲಕ್ಷ | ಸಂಜಯ್ ಗಾಂಧಿ ಟ್ರೂಮಾ ಮತ್ತು ಆರ್ಥೋಪೆಡಿಕ್ಸ್ ಸಂಸ್ಥೆ, ಬೆಂಗಳೂರು |
| | | | **ಒಟ್ಟು** | **ರೂ.1558 ಲಕ್ಷ** | | | |

5. ಕಂಪನಿಯು ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭದ ಮೊಬಲಗನ್ನು ಅಥವಾ ಅದರ ಭಾಗಾಂಶವನ್ನು ಈ ನಿಮಿತ್ತವಾಗಿ ಖರ್ಚು ವ್ಯಯಿಸಲು ವಿಫಲಗೊಂಡರೆ, ಕಂಪನಿಯು ತನ್ನ ಮಂಡಳಿ ವರದಿಯಲ್ಲಿ ಖರ್ಚನ್ನು ವ್ಯಯಿಸದಿರುವುದರ ಕಾರಣವನ್ನು ತಿಳಿಸತಕ್ಕದ್ದು: ಕ.ವಿ.ಪ್ರ.ನಿ.ನಿ ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಕರ್ನಾಟಕ ವಿಧಾನಸಭೆಯ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ(ದಿನಾಂಕ:27ಮಾರ್ಚ್2018ರಿಂದ ವಿಧಾನಸಭೆಯ ಚುನಾವಣೆಯ ದಿನಾಂಕ:12ಮೇ2018ರ ವರೆಗೆ) ಮತ್ತು ಯೋಜನೆಗಳನ್ನು ಗುರುತಿಸುವುದು ತಡವಾದುದರಿಂದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಯೋಜನೆಗಳು ಅನುಮೋದಿಸಿರುವುದಿಲ್ಲ.

6. ಸಿ.ಎಸ್.ಆರ್. ಸಮಿತಿಯ ಜವಾಬ್ದಾರಿಯುತ ಹೇಳಿಕೆ:

ಸಿ.ಎಸ್.ಆರ್. ನೀತಿಯ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಕಂಪನಿಯ ಸಿ.ಎಸ್.ಆರ್. ನೀತಿ ಮತ್ತು ಧ್ಯೇಯೋದ್ದೇಶಗಳು ಅನುಸರಿಸಲಾಗಿದೆ ಎಂದು ಸದಸ್ಯರು ಹೇಳಿಕೆ ನೀಡಿರುತ್ತಾರೆ.

ಸಹಿ/–
**(ಡಾ॥ ಎನ್.ಮಂಜುಳ, ಭಾ.ಆ.ಸೇ.)**
**ಡಿನ್ : 07508345**
**ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ**

ಸಹಿ/–
**(ಮಹೇಂದ್ರ ಜೈನ್, ಭಾ.ಆ.ಸೇ.)**
**ಡಿನ್ : 01660388**
**ಅಧ್ಯಕ್ಷರು, ಸಿ.ಎಸ್.ಆರ್. ಸಮಿತಿ, ಕ.ವಿ.ಪ್ರ.ನಿ.ನಿ.**

**ಕಂಪನಿ ಕಾಯಿದೆ 2013 ಪ್ರಕರಣ 143(6) (ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೆಂಗಳೂರು ಇದರ 31ನೇ ಮಾರ್ಚ್ 2019 ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಹಾಗೂ ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಅಭಿಪ್ರಾಯಗಳು.**

ಕಂಪನಿ ಕಾಯಿದೆ 2013ರ ಅಡಿಯಲ್ಲಿ ನಿಗಧಿಪಡಿಸಿರುವ ಆರ್ಥಿಕ ಕಾರ್ಯನೀತಿ ಚೌಕಟ್ಟಿನ ಪ್ರಕಾರ, 31ನೇ ಮಾರ್ಚ್ 2019 ಕ್ಕೆ ಅಂತ್ಯಗೊಂಡಂತೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಆರ್ಥಿಕ ನಿರೂಪಣೆಯ ಲೆಕ್ಕ ಪತ್ರ ಪಟ್ಟಿಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ಕಾಯಿದೆಯ ಪ್ರಕರಣ 139(5) ಅಥವಾ 139(7) ರ ಅಡಿಯಲ್ಲಿ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರಿಂದ ನೇಮಿಸಲ್ಪಟ್ಟಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಕಾಯಿದೆಯ ಪ್ರಕರಣ 143(10) ರಲ್ಲಿ ನಿಗಧಿಪಡಿಸಿರುವ ಪರಿಶೋಧನೆ ಮತ್ತು ಖಚಿತ ಗುಣಮಟ್ಟಗಳ ಪ್ರಕಾರ, ಈ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರ ಪಟ್ಟಿಗಳ ಮೇಲೆ, ಸ್ವಾಯತ್ತ ಪರಿಶೋಧನೆ ನಡೆಸಿ ಕಾಯಿದೆಯ ಪ್ರಕರಣ 143 ರ ಅಡಿಯಲ್ಲಿ ಅಭಿಪ್ರಾಯ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಪರಿಶೋಧನಾ ಕಾರ್ಯವನ್ನು ಸದರಿ ಶಾಸನಬದ್ಧ ಲೆಕ್ಕ ಪರಿಶೋಧಕರು ದಿನಾಂಕ: 26.09.2019 ರಂದು ಪೂರ್ಣಗೊಳಿಸಿದ್ದಾರೆಂದು ಪರಿಶೋಧಾನ ವರದಿಯ ಮೂಲಕ ನಿರೂಪಿಸಲ್ಪಟ್ಟಿದೆ.

ಕಾಯಿದೆ ಪ್ರಕರಣ 143(6) (ಎ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 31ನೇ ಮಾರ್ಚ್ 2019 ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ ಪೂರಕ ಪರಿಶೋಧನೆ ನಡೆಸಿದ್ದೇನೆ. ಶಾಸನಬದ್ಧ ಲೆಕ್ಕಪರಿಶೋಧಕರ ಪರಿಶೋಧಿತ ಕಾರ್ಯನಿರೂಪಣಾ ಮಾಹಿತಿಯನ್ನು ಪರಾಮರ್ಶಿಸದೆ ಹಾಗೂ ಕೇವಲ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿ ಸಿಬ್ಬಂದಿಯೊಡನೆ ನಡೆಸಿದ ವಿಚಾರಣೆ ಹಾಗೂ ಕೆಲವು ಆಯ್ದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆ ಮೂಲಕ ವೈಯಕ್ತಿಕವಾಗಿ ಈ ಪೂರಕ ಲೆಕ್ಕಪರಿಶೋಧನಾ ಕಾರ್ಯವನ್ನು ನಿರ್ವಹಿಸಲಾಗಿದೆ.

ಈ ಪೂರಕ ಲೆಕ್ಕಪರಿಶೋಧನಾ ಸಮಯದಲ್ಲಿ ನನ್ನ ಗಮನಕ್ಕೆ ಯಾವುದೇ ಟೀಕೆ, ಅಭಿಪ್ರಾಯಗಳಲ್ಲಿ ಅಥವಾ ಕಾಯಿದೆ ಪ್ರಕರಣ 143(6) (ಬಿ) ಅಡಿಯಲ್ಲಿ ಲೆಕ್ಕಪರಿಶೋಧಕರ ವರದಿಗೆ ಸೇರಿಸಬೇಕಾದ ಯಾವುದೇ ತಿದ್ದುಪಡಿ ಇರುವುದಿಲ್ಲ.

**ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ**

**ಸಹಿ/–**
**(ಅನುಪ್ ಫ್ರಾನ್ಸಿಸ್ ಡುಂಗ್ ಡುಂಗ್)**
**ಪ್ರಧಾನ ಲೆಕ್ಕಪರಿಶೋಧಕರು**
**ಆರ್ಥಿಕ ಮತ್ತು ರೆವಿನ್ಯೂ ವಲಯ ಪರಿಶೋಧನೆ**
**ಕರ್ನಾಟಕ, ಬೆಂಗಳೂರು.**

**ಸ್ಥಳ : ಬೆಂಗಳೂರು**
**ದಿನಾಂಕ : 05.11.2019**

# ಬಿ.ಪಿ.ರಾವ್ ಮತ್ತು ಕಂಪನಿ

**ಸನ್ನದಿತ ಲೆಕ್ಕಿಗರು**

ನಂ.5, ಪೂರ್ಣ ಪ್ರಸಾದ ರಸ್ತೆ,
ಹೈ ಗ್ರೌಂಡ್ಸ್, ಬೆಂಗಳೂರು 560 001.
ಫೋ: 080–22200200, 22200201.
ಫ್ಯಾಕ್ಸ್ ಸಂಖ್ಯೆ: 22205030.
ಮಿಂಚಂಚೆ : Bpraoco@gmail.com
ಜಾಲತಾಣ : Bpraoco.com


## ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

**ಗೆ,**

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ**

**IND-AS ರನ್ವಯ ಆರ್ಥಿಕ ಲೆಕ್ಕಪತ್ರಗಳ ಮೇಲಿನ ವರದಿ**

### ಅಂಗೀಕಾರ್ಹ ಅಭಿಪ್ರಾಯ

ನಾವು ಈ ವರದಿಯ ಜತೆ ಲಗತ್ತಿಸಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕಂಪನಿ) 31ನೇ ಮಾರ್ಚ್ 2019 ರಂದು ಇದ್ದಂತೆ, ಆಯವ್ಯಯ ಪಟ್ಟಿ, ಲಾಭ ನಷ್ಟ ತಖ್ತೆ (ಇತರೆ ಸಮಗ್ರ ಆದಾಯವನ್ನೊಳಗೊಂಡಂತೆ) ಆ ದಿನಾಂಕದಂದು ಅಂತ್ಯಗೊಂಡ ವರ್ಷದ ನಗದು ಹರಿವಿನ ವಿವರಣಾಪಟ್ಟಿ ಮತ್ತು ಗಮನಾರ್ಹ ಲೆಕ್ಕಪದ್ಧತಿ ತತ್ವಗಳು, ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳನ್ನೊಳಗೊಂಡ IND-AS ಆರ್ಥಿಕ ವಿವರಣೆಗಳ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. (ಇಲ್ಲಿಂದ ಮುಂದೆ IND-AS ನ ಆರ್ಥಿಕ ನಿರೂಪಣಾ ಪಟ್ಟಿಗಳು ಎಂದು ಉಲ್ಲೇಖಿಸಲಾಗುತ್ತದೆ).

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ಯುಕ್ತಾತೀತ ಅಭಿಪ್ರಾಯದ ಆಧಾರಗಳ ಅಡಿಯಲ್ಲಿ ವಿವರಿಸಿರುವ ಅಂಶಗಳ ಪರಿಣಾಮಗಳ ವಿನಃ, ಮೇಲೆ ತಿಳಿಸಿರುವ ಆರ್ಥಿಕ ನಿರೂಪಣಾಪಟ್ಟಿಗಳು ಕಂಪನಿ ಕಾಯ್ದೆಯು ಅಗತ್ಯಪಡಿಸುವ ಪ್ರಕಾರ ಮಾಹಿತಿಯನ್ನು ಒದಗಿಸಿವೆ ಮತ್ತು ಭಾರತ ದೇಶದಲ್ಲಿ ಸಾಮಾನ್ಯವಾಗಿ ಅಳವಡಿಸಿಕೊಂಡಿರುವ ಲೆಕ್ಕ ತತ್ವಗಳಿಗೆ ಅನುಗುಣವಾಗಿ ಮಾರ್ಚ್ 31, 2019ಕ್ಕೆ ಇದ್ದಂತೆ ಅಗತ್ಯವಿರುವ ನೈಜ ಹಾಗೂ ನ್ಯಾಯಸಮ್ಮತ ಮಾಹಿತಿಯನ್ನು ನೀಡುತ್ತವೆ. ವ್ಯವಹರಣೆಗಳ ಆಸ್ತಿ–ಹೊಣೆ ಪಟ್ಟಿಯ ವಿಷಯದಲ್ಲಿ, ಲಾಭ ಮತ್ತು ನಷ್ಟದ ವಿಷಯದಲ್ಲಿ, ಆ ದಿನಾಂಕದಂದು ಮುಕ್ತಾಯಗೊಂಡ ಕಂಪನಿಯ ಲಾಭದ ಬಗ್ಗೆ, ಇತರೆ ಸಮಗ್ರ ಆದಾಯ, ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸ, ಹಣ ಚಲಾವಣೆ ವಿಷಯದಲ್ಲಿ ಅಗತ್ಯವಿರುವ ನೈಜ ಹಾಗೂ ನ್ಯಾಯಸಮ್ಮತ ಮಾಹಿತಿಯನ್ನು ನೀಡುತ್ತವೆ.

### ಯುಕ್ತಾತೀತ ಅಭಿಪ್ರಾಯದ ಆಧಾರಗಳು:

ಕೆಳಗೆ ತಿಳಿಸಲಾದ 31/03/2019 ರ ಹಣಕಾಸು ಹೇಳಿಕೆಯ ವಿಷಯಗಳು ನಮ್ಮ ಪೂರ್ವಭಾವಿ ಲೆಕ್ಕಪರಿಶೋಧನಾ ವರದಿಯಲ್ಲಿಯೂ ಸಹ ಅರ್ಹತೆಯ ವಿಷಯಗಳಾಗಿವೆ.

i) ಟಿಪ್ಪಣಿ ಸಂಖ್ಯೆ :1.2 (ಬಿ) ರಲ್ಲಿ ಸೂಚಿಸಿರುವಂತೆ ಹಿಂದಿನ ವರ್ಷದ ಅಂಕಿ ಅಂಶಗಳನ್ನು ಪ್ರಾರಂಭಿಕ ಇತರೆ ಸ್ವಾಮ್ಯ ಹಾಗೂ ಸಮಗ್ರ ಆದಾಯದಲ್ಲಿ IND-AS ಗೆ ಅನುಗುಣವಾಗಿ ಅಂಕಿ ಅಂಶಗಳನ್ನು ಮನಃಸ್ಥಾಪನೆ ಮಾಡಲಾಗಿಲ್ಲ.

ii) ಟಿಪ್ಪಣಿ ಸಂಖ್ಯೆ: 1.6 ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳಿಗೆ ಸಂಬಂಧಿಸಿದಂತೆ ಹಾಗೂ ಟಿಪ್ಪಣಿ ಸಂಖ್ಯೆ:2.5 (ಬಿ) ಮತ್ತು ಟಿಪ್ಪಣಿ ಸಂಖ್ಯೆ:33 ರಲ್ಲಿ ಸೂಚಿಸಿದಂತೆ ಕಂಪನಿಯು ಹಿಂದಿನ ಅವಧಿಗೆ ಸಂಬಂಧಿಸಿದ ಆದಾಯ ಮತ್ತು ವೆಚ್ಚಗಳನ್ನು ಪ್ರಸಕ್ತ ಸಾಲಿನಲ್ಲಿ ಹೊಂದಾಣಿಕೆ ಮಾಡಿದ್ದು ಹಿಂದಿನ ಅವಧಿಗೆ ಸಂಬಂಧಿಸಿದ ತಪ್ಪುಗಳನ್ನು ಪೂರ್ವಾನ್ವಯವಾಗಿ ಮನಃಸ್ಥಾಪನೆ ಮಾಡದೆ ಮತ್ತು ಸದರಿ ಮೊತ್ತಗಳಿಗೆ ತುಲನಾತ್ಮಕ ಮೊತ್ತವನ್ನು ನೀಡಲಾಗದ ಕಾರಣ ಆರಂಭಿಕ ಶಿಲ್ಕು ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಇತರೆ ಸ್ವಾಮ್ಯಗಳ ಆರಂಭಿಕ ಶಿಲ್ಕುಗಳನ್ನು ಮನಃ ಸ್ಥಾಪನೆಗೊಳಿಸದಿರುವುದು IND-AS 8 "ಲೆಕ್ಕ ಪತ್ರ ನೀತಿಗಳು, ಲೆಕ್ಕ ಪತ್ರ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ದೋಷಗಳು" ಕಂಪನಿಯ (ಭಾರತೀಯ ಲೆಕ್ಕ ಪತ್ರ ಮಾನದಂಡ) ನಿಯಮಗಳು, 2015ರನ್ವಯ ನಿಗಧಿಪಡಿಸಲಾಗಿರುವುದನ್ನು ಪಾಲಿಸಿರುವುದಿಲ್ಲ.

iii) ಟಿಪ್ಪಣಿ ಸಂಖ್ಯೆ:1.9; ಗಮನಾರ್ಹ ಲೆಕ್ಕ ಪದ್ದತಿ ತತ್ವ ಮತ್ತು ಟಿಪ್ಪಣಿ ಸಂಖ್ಯೆ: 31.1; ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿ ಇ ಆರ್ ಸಿ) ಅಧಿಸೂಚನೆ ಸಂಖ್ಯೆ:ಐ–1/144/2013/CERC dated: 05.11.2015 ರನ್ವಯ ಗುರುತಿಸಲ್ಪಡದ ಫೈಬರ್ ಆಪ್ಟಿಕ್‌ಗಳನ್ನು ಪ್ರತ್ಯೇಕವಾಗಿ ಬಂಡವಾಳಿಕರಣಗೊಳಿಸಿ ಸವಕಳಿಯನ್ನು ನಿಗಧಿತ ಶೇಕಡ 6.33ರಷ್ಟು ಪರಿಗಣಿಸದೆ ಕೇವಲ ಶೇಕಡ 5.28 ರಷ್ಟು ಪರಿಗಣಿಸಿ ಸವಕಳಿಯನ್ನು ಲೆಕ್ಕೀಕರಿಸಲಾಗಿದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲೆ ಆಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

iv) ಟಿಪ್ಪಣಿ ಸಂಖ್ಯೆ:1.9 (ಜಿ) ಗಮನಾರ್ಹ ಲೆಕ್ಕ ಪದ್ದತಿ ತತ್ವಗಳನ್ವಯ ಮತ್ತು ಟಿಪ್ಪಣಿ ಸಂಖ್ಯೆ:2(ಎ).1(ಬಿ) ಗಳನ್ವಯ ಬಿಡುಗಡೆಗೊಳಿಸಿದ ಆಸ್ತಿಗಳನ್ನು ಪುನರ್ ಉಪಯೋಗಿಸಿದಲ್ಲಿ ಸವಕಳಿಯನ್ನು ಪರಿಗಣಿಸುವಾಗ ನೂತನವಾಗಿ ಬಂಡವಾಳಿಕರಿಸಿದ ಆಸ್ತಿಗಳಿಗಿರುವಂತೆ ಮೂಲ ಬಾಳಿಕೆ ಅವಧಿಯನ್ನೇ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಸದರಿ ನಿಯಮವು IND AS 16ರ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಸವಕಳಿಗಳ ಬಗ್ಗೆ ನಿಗಧಿಪಡಿಸಿದಂತೆ ಪಾಲಿಸಲಾಗಿರುವುದಿಲ್ಲ. IND AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ರನ್ವಯ ಬಿಡಿಗಡೆಗೊಳಿಸಿದ ಆಸ್ತಿಯನ್ನು ಮತ್ತೊಮ್ಮೆ ಬಂಡವಾಳಿಕರಿಸಿದಲ್ಲಿ ಉಳಿದ ಬಾಕಿ ವರ್ಷಗಳನ್ನು ಪರಿಗಣಿಸಿ ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ಪರಿಗಣಿಸಬೇಕಾಗಿರುತ್ತದೆ. ಸದರಿ ಬದಲಾವಣೆಯಿಂದ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಗಳ ಮೇಲೆ ಉಂಟಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

v) ಟಿಪ್ಪಣಿ ಸಂಖ್ಯೆ:1.10(ಡಿ); ಗಮನಾರ್ಹಾ ಲೆಕ್ಕ ಪದ್ದತಿ ತತ್ವಗಳಲ್ಲಿ ಸೂಚಿಸಿದಂತೆ ಮೇಲ್ವಿಚಾರಣ ಶುಲ್ಕ, ಸಲಹಾ ಶುಲ್ಕ, ಭೂಮಿ ಪರವಾಗಿ ಹಂಚಿಕೆ ಮಾಡಿದ ಶುಲ್ಕ (charges towrds land spared), ಪರೀಕ್ಷಾ ಶುಲ್ಕ, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು (Earth mat design charges) ಮಂಡಪ್ ಕೀಪರ್ ಶುಲ್ಕ (Mandap Keeper Charges) ಆದಾಯಗಳ ಗುರುತಿಸುವಿಕೆ ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿದ್ದು ಸದರಿ ಲೆಕ್ಕೀಕರಣವು ಕಂಪನಿಯ ಕಾಯ್ದೆ (ಭಾರತೀಯ ಲೆಕ್ಕ ವಿಧಾನ) ನಿಯಮ 2015ರ ಅಡಿಯಲ್ಲಿ ಬಿಡುಗಡೆ ಮಾಡಲಾದ IND AS 115-Revenue from contracts with customers ರಲ್ಲಿ ನಿಗಧಿಪಡಿಸಿರುವುದನ್ನು ಪಾಲಿಸದ ಕಾರಣ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

vi) ಟಿಪ್ಪಣಿ ಸಂಖ್ಯೆ: 1.15; ಗಮನಾರ್ಹ ಲೆಕ್ಕ ಪದ್ದತಿ ತತ್ವಗಳು ಸಾಲಗಳ ವೆಚ್ಚ (Borrowing Cost) ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ತೂಕದ ವಿಧಾನ (Weighted Average) ಆಧಾರದ ಮೇಲೆ ಕಂಪನಿಯು ಪರಿಗಣಿಸಿರುತ್ತದೆ. ಹಾಗೂ ಪರಿಣಾಮಕಾರಿ ಬಡ್ಡಿ ದರದ ವಿಧಾನ (Effective Interest Rate Method) ವನ್ನು ಅಳವಡಿಸಿಕೊಳ್ಳದಿರುವುದು IND AS 23, (ಭಾರತೀಯ ಲೆಕ್ಕ ವಿಧಾನ) 2015 ರನ್ವಯ ಸಮಂಜಸವಾಗಿರುವುದಿಲ್ಲ. ಆದ ಕಾರಣ ಅದರಿಂದಾಗುವ ಪರಿಣಾಮವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮತ್ತು ಅವುಗಳ ಮೇಲಿನ ಸವಕಳಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

vii) ಕಂಪನಿಯು IND AS ಅನ್ವಯ ಲೆಕ್ಕೀಕರಣ/ಲೆಕ್ಕ ಪತ್ರಗಳ ಪ್ರಸ್ತುತಿ/ ಪುನರ್ ಸ್ಥಾಪನೆ/ಪೂರ್ಣ ಪ್ರಕಟಣೆಯಲ್ಲಿ ಈ ಕೆಳಕಂಡ IND AS ನಿಯಮಗಳನ್ನು ಅನುಸರಿಸಿರುವುದಿಲ್ಲ.

ಅ. ಇತರೆ ಸಮಗ್ರ ಆದಾಯ ಗುರುತಿಸುವಿಕೆ ಮತ್ತು ಪುನರ್ ಸ್ಥಾಪನೆ.

ಆ. ರಿಯಾಯಿತಿ ದರದಲ್ಲಿ ಹಾಗೂ ಉಚಿತ ದರದಲ್ಲಿ ಖರೀದಿಸಿದ ಜಮೀನಿನ ನ್ಯಾಯಯುತ ಮೌಲ್ಯವನ್ನು ಲೆಕ್ಕಿಕರಿಸುವ ಬಗ್ಗೆ – IND AS –20.

ಇ. IND AS–115 ರ ಅನ್ವಯ ಗ್ರಾಹಕರೊಂದಿಗಿನ ಒಪ್ಪಂದಗಳ ಗುರುತಿಸುವ, ಪರಿವರ್ತನೆ ಮತ್ತು ಅಳವಡಿಸಿಕೊಳ್ಳುವ ಬಗ್ಗೆ –

ಈ. IND AS–23 ಬಡ್ಡಿ ವೆಚ್ಚಗಳು/ಆದಾಯದ ಅನ್ವಯ ಪರಿಣಾಮಕಾರಿ ಬಡ್ಡಿದರದ ವಿಧಾನವನ್ನು ಅಳವಡಿಸಿಕೊಳ್ಳದಿರುವುದು.

ಉ. ಹಣಕಾಸಿನ ಸ್ವತ್ತುಗಳು/ಹೊಣೆಗಾರಿಕೆಗಳನ್ನು ಪ್ರಸ್ತುತ ಮೌಲ್ಯದಲ್ಲಿ ಬಿಂಬಿಸುವುದು.– IND AS–32

ಊ. ನಗದು ಹರಿವಿನ ಪಟ್ಟಿಯನ್ನು ಬಿಂಬಿಸುವುದು.– IND AS–7

ಋ. ವರದಿ ಮಾಡುವ ಅವಧಿಯ ನಂತರ ಸಂಭವಿಸುವ ಘಟನೆಗಳ ವರದಿ – IND AS – 10.

viii) ಟಿಪ್ಪಣಿ ಸಂಖ್ಯೆ: 1.17 ಗಮನಾರ್ಹ ಲೆಕ್ಕ ಪದ್ದತಿ ತತ್ವ ಹಾಗೂ ಟಿಪ್ಪಣಿ ಸಂಖ್ಯೆ: 37.7ರಂತೆ ಆಸ್ತಿಗಳ ದುರ್ಬಲತೆ ನಷ್ಟ (Impairment of Assets) ಕುರಿತು, ಕಂಪನಿಯಲ್ಲಿ ಯಾವುದೇ ದಾಖಲಾತಿಗಳನ್ನು ಅಳವಡಿಸಿಕೊಳ್ಳದೇ ಇರುವುದರಿಂದ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ಲೆಕ್ಕ ಪರಿಶೋಧಕ ನೀತಿಗಳನ್ವಯ ಹೊರಡಿಸುವ IND AS 36 ರಲ್ಲಿರುವಂತೆ ಆಸ್ತಿಗಳ ದುರ್ಬಲ ನಷ್ಟ ಕುರಿತು ನಿಗಧಿಪಡಿಸಿದಂತೆ ಕಂಪನಿಯಲ್ಲಿ ಆಸ್ತಿಗಳ ದುರ್ಬಲತೆ ನಷ್ಟ ಪರೀಕ್ಷೆಗೆ ತಾಂತ್ರಿಕ ಮೌಲ್ಯಮಾಪನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸದೇ ಇರುವ ಕಾರಣ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

ix) ಟಿಪ್ಪಣಿ ಸಂಖ್ಯೆ:2.1, 2.2(ಎ)(1) ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿ ಎಂದು ವರ್ಗೀಕರಿಸಿ ದಾಖಲಾತಿ ಮಾಡುವುದು ಮತ್ತು ಸಮನ್ವಯಗೊಳಿಸುವುದು ಬಾಕಿ ಇರುವ ಕಾರಣ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

x) ಟಿಪ್ಪಣಿ ಸಂಖ್ಯೆ:2.2 (ಎಚ್) ಮತ್ತು 37.18 ರಲ್ಲಿ ಸೂಚಿಸಿದಂತೆ ಇತರೆ ಗ್ರಾಹಕರಿಂದ ಉಚಿತ/ಕಡಿತ ದರದಲ್ಲಿ ಪಡೆದ ಭೂಮಿಯನ್ನು ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕೀಕರಿಸಿ ಬಹಿರಂಗಪಡಿಸುವಿಕೆಯು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, ರಡಿಯಲ್ಲಿ ಸೂಚಿಸಲಾದ ವಿಧಾನದಲ್ಲಿ ಲೆಕ್ಕೀಕರಿಸಿರುವುದಿಲ್ಲ, ಈ ಕಾರಣದಿಂದಾಗಿ IND AS115-Revenue from contracts with customers ರಂತೆ ಕಂದಾಯದ ಪಿ.ಪಿ.ಇ, ಅನುದಾನ, ಋಣಮುಕ್ತತೆ, ಗ್ರಾಹಕ ಕೊಡುಗೆ ಹಾಗೂ ಇತರೆ ಆದಾಯದ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xi) ಟಿಪ್ಪಣಿ ಸಂಖ್ಯೆ:2.4 (ಸಿ) ಮತ್ತು 3.6 ರಲ್ಲಿ ಸೂಚಿಸಿದಂತೆ ಕಂಪನಿಯು ಅಂದಾಜಿಸಿದಂತೆ ರೂ.2709.98 ಲಕ್ಷಗಳಷ್ಟು ವರದಿಯ ದಿನಾಂಕದಂದು ನಿರಂತರ ಜ್ಯೋತಿ ಯೋಜನೆ (NJY) ಅಡಿಯಲ್ಲಿ ಖರ್ಚು ಮಾಡಲಾಗಿದ್ದು ಸದರಿ ಖರ್ಚನ್ನು ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಹಾಗೂ ಬಂಡವಾಳ ಕಾಮಗಾರಿ ವೆಚ್ಚಗಳಲ್ಲಿ ಲೆಕ್ಕೀಕರಿಸಿದೆ. ಆದರೆ ಸದರಿ ಖರ್ಚನ್ನು ಎಸ್ಕಾಂಗಳಿಂದ ಪಡೆಯುವುದು ಬಾಕಿ ಇರುತ್ತದೆ. ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದೆ ಇರುವುದರಿಂದ ನಾವು ಹಣಕಾಸಿನ ಹೇಳಿಕೆಗಳ ಮೇಲೆ ಅದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ..

xii) ಟಿಪ್ಪಣಿ ಸಂಖ್ಯೆ :2.4 (ಇ), 3.1, 26.4, 26.1 (i) ಮತ್ತು 37.18 ರಲ್ಲಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡ ಸ್ವ ಕಾಮಗಾರಿಗಳ (SEW) ಕುರಿತು ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಇದರ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ನ್ಯಾಯಸಮ್ಮತ ಮೌಲ್ಯದಲ್ಲಿ ಬಂಡವಾಳೀಕರಿಸಿರುವುದಿಲ್ಲ, ಪೂರ್ಣಗೊಂಡ ಸ್ವ ಕಾಮಗಾರಿಗಳನ್ನು ಋಣಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಮೂಲ ಸೌಕರ್ಯ ವೆಚ್ಚವನ್ನು (Infrastructure Charges), ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಭೂಮಿಯನ್ನು ನೀಡಲು ಪಡೆಯಲಾಗುತ್ತಿರುವ ಒಂದು ಬಾರಿ ಹಿಂದಿರುಗಿಸದ ಠೇವಣಿ (One Time Non-Refundable Deposit) ಕುರಿತು ನಿಖರವಾದ ವಿಧಾನದ ಅನುಪಸ್ಥಿತಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯು ಸ್ವ ಕಾಮಗಾರಿಗಳನ್ನು ಬಂಡವಾಳೀಕರಿಸಿರುವುದಿಲ್ಲವೆಂದು ನಮ್ಮ ಲೆಕ್ಕ ಪರಿಶೋಧನೆಯ ಮೂಲಕ ಗುರುತಿಸಲಾಗಿದ್ದು ಸದರಿ ಪರಿಣಾಮದಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ) ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಬೀರುವ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ.

xiii) ಟಿಪ್ಪಣಿ ಸಂಖ್ಯೆ: 2.5 (ಎ) ಸ್ಥಿರಾಸ್ತಿ ಪುಸ್ತಕದ ಸಮನ್ವಯ ಬಾಕಿ ಇರುವುದರಿಂದ ಬಿಡುಗಡೆ ಮಾಡಲ್ಪಟ್ಟ ಸ್ವತ್ತುಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡುವಾಗ ಸಾಗಿಸುವ ಮೌಲ್ಯವನ್ನು ಪರಿಗಣಿಸುವಾಗ ಕಳಚಿದ ಆಸ್ತಿಗಳ, ಆಸ್ತಿಗಳ ಮಾರಾಟ ಇವುಗಳಿಗೆ ಇಳಿಸಿದ ಆಸ್ತಿ ಮೌಲ್ಯ (ಮೂಲ ಬೆಲೆ– ಸಂಚಿತ ಸವಕಳಿ)

ಗುರುತಿಸಲಾಗುವುದಿಲ್ಲ. ಈ ಪದ್ಧತಿಯು ಹಂಗಾಮಿ (Adhoc) ಪದ್ಧತಿಯಾಗಿರುತ್ತದೆ. ಮಾಹಿತಿಯ ಅನುಪಸ್ಥಿತಿಯಲ್ಲಿ ಪಿಪಿಇ, ಮಾರಟಕ್ಕಿರುವ ಆಸ್ತಿ, ಸವಕಳಿ ಇವುಗಳ ಮೇಲೆ ಬೀರಿರುವ ಲಾಭ/ನಷ್ಟಗಳ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xiv) ಟಿಪ್ಪಣಿ ಸಂಖ್ಯೆ: 2.5 (ಸಿ), ಟಿಪ್ಪಣಿ 3 ಮತ್ತು 37.18 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಮಾಲೀಕತ್ವ, ದಾಖಲಾತಿಕರಣ, ಭೌತಿಕ ನಿಯಂತ್ರಣಗಳು, ಗುತ್ತಿಗೆದಾರರ ಪ್ರೋತ್ಸಾಹ ಧನಕ್ಕೆ ಅವಕಾಶ ಕಲ್ಪಿಸದಿರುವುದು ಮತ್ತು ಬೆಲೆ ವ್ಯತ್ಯಾಸ ಹಾಗೂ ಪ್ರಮಾಣ ವ್ಯತ್ಯಾಸಗಳಿಗೆ ಅವಕಾಶ ಕಲ್ಪಿಸದಿರುವುದು/ಖಚಿತಪಡಿಸಿಕೊಳ್ಳದಿರುವುದು, ಅನುಪಾತವಾರು ಬಂಡವಾಳೀಕರಣಗೊಳಿಸಿದ ಸಿಬ್ಬಂದಿ ವೆಚ್ಚಗಳು, ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು ಮತ್ತು ಇತರೆ ಸಾಮಾನ್ಯ ಮೇಲು ವೆಚ್ಚಗಳು, ಎರವಲು ವೆಚ್ಚಗಳು, ಹಾಗೂ ಸ್ವ–ಕಾಮಗಾರಿಗಳ ಮೇಲೆ ವಸೂಲಿ ಮಾಡಲಾದ ಮೇಲ್ವಿಚಾರಣ ಶುಲ್ಕಗಳನ್ನು ಸೂಕ್ತ ಅನುಪಾತದಲ್ಲಿ ಹಂಚಿಕೆ ಮಾಡಲಾದ ವೆಚ್ಚಗಳು, ಬಂಡವಾಳೀಕರಣ ಕಾರ್ಯ ವಿಮುಕ್ತಿ ವೆಚ್ಚವನ್ನು ಪ್ರಸ್ತುತ ಮೌಲ್ಯದ ಆಧಾರದ ಅನ್ವಯ ಅಂದಾಜು ಮಾಡಿ 'ಪ್ರಾರಂಭಿಕ ಹಂತದಲ್ಲಿ ಬಂಡವಾಳೀಕರಣಗೊಳಿಸುವುದು ಹಾಗೂ ಸರಿಯಾದ ದಿನಾಂಕದ ಆಧಾರದ ಮೇಲೆ ಬಂಡವಾಳೀಕರಣಗೊಳಿಸುವುದು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ನಿಯಮಗಳಡಿಯಲ್ಲಿ ಹೊರಡಿಸಿರುವ IND AS 16 ಆಸ್ತಿ, ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ರನ್ವಯ ನಿಗದಿಪಡಿಸಿರುವುದನ್ನು ಲೆಕ್ಕೀಕರಿಸುವ ವಿಧಾನ ಪಾಲಿಸಲಾಗಿರುವುದಿಲ್ಲ. ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳು ಮತ್ತು ಸವಕಳಿಗಳ ಮೇಲೆ ಉಂಟಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xv) ಟಿಪ್ಪಣಿ ಸಂಖ್ಯೆ:2.5 (ಡಿ)ರಲ್ಲಿ ಹೇಳಿರುವಂತೆ ಹೂಡಿಕೆ ಮಾಡಲಾಗಿರುವ ಆಸ್ತಿಗಳ ಮೌಲ್ಯ ಗಮನಾರ್ಹವಾಗಿರುವುದಿಲ್ಲ. ಈ ಬಗ್ಗೆ ಕಂಪನಿಯು ಸೂಕ್ತವಾದ ದಾಖಲಾತಿಗಳನ್ನು ಒದಗಿಸದ ಕಾರಣ ಸದರಿ ಆಸ್ತಿಗಳ ಮುಂದುವರೆಸಿಕೊಂಡು ಹೋಗುವ ಮೌಲ್ಯವು (Carrying cost) ಕಂಪನಿಯ (ಭಾರತೀಯ ಲೆಕ್ಕ ವಿಧಾನ) IND AS 40 "ಹೂಡಿಕೆ ಮಾಡಲಾಗಿರುವ ಆಸ್ತಿಗಳು" ನಿಯಮ 2015 ಹೊರಡಿಸಿರುವ ಅನ್ವಯ ಸದರಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xvi) ಟಿಪ್ಪಣಿ ಸಂಖ್ಯೆ:3.1, 18.7, 22 ಮತ್ತು 37.18 ರಲ್ಲಿ ಸೂಚಿಸಿರುವಂತೆ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡ ಠೇವಣಿ ವಂತಿಗೆ ಕಾಮಗಾರಿಗಳ (DCW) ಕುರಿತು ಪ್ರಸ್ತುತ ಸ್ಥಿತಿ ಹಾಗೂ ಪರಿಪೂರ್ಣ ಮಾಹಿತಿಯನ್ನು ಕಂಪನಿಯು ಒದಗಿಸದ ಕಾರಣ ನಾವು ಠೇವಣಿವಂತಿಗೆ ಕಾಮಗಾರಿಗಳನ್ನು ನ್ಯಾಯ ಸಮ್ಮತ ಮೌಲ್ಯದಲ್ಲಿ ಬಂಡವಾಳೀಕರಿಸುವ ಬಗ್ಗೆ ಹಾಗೂ ಪೂರ್ಣಗೊಂಡ ಠೇವಣಿವಂತಿಗೆ ಕಾಮಗಾರಿಗಳನ್ನು ಋಣಮುಕ್ತತೆ (Amortization) ಮಾಡುವಲ್ಲಿ ಒಪ್ಪಂದದ ಅವಧಿಯ ಬದಲಾಗಿ ಉಪಯುಕ್ತ ಜೀವನಾಧಾರದಲ್ಲಿ ಋಣಮುಕ್ತತೆಯನ್ನು ಮಾಡಲಾಗಿರುತ್ತದೆ. ಇದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣ (ಪಿಪಿಇ), ಪ್ರಸ್ತುತ/ಪ್ರಸ್ತುತವಲ್ಲದ ಹೊಣೆಗಾರಿಕೆ, ಸ್ವೀಕೃತಿ, ಕಂದಾಯಗಳ ಮೇಲೆ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ. ಮುಂದುವರೆದು, ಕಂಪನಿಯಲ್ಲಿ ಠೇವಣಿವಂತಿಗೆ ಕಾಮಗಾರಿಗಳನ್ನು IND AS 115 (Revenue from contracts with Consumers) "ಗ್ರಾಹಕರೊಂದಿಗಿನ ಒಪ್ಪಂದಗಳಿಂದ ಆದಾಯ" ರಲ್ಲಿ ಸೂಚಿಸಿರುವಂತೆ ಲೆಕ್ಕೀಕರಿಸುವ ವಿಧಾನದ ಅನುಪಸ್ಥಿತಿಯಲ್ಲಿ ಆದಾಯ ಮತ್ತು ತೆರಿಗೆ ಮುಂಚಿನ ಲಾಭದ ಮೇಲೆ ಆಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xvii) ಟಿಪ್ಪಣಿ ಸಂಖ್ಯೆ:3.4,3.5,18.8 ಮತ್ತು 22.2 ರಲ್ಲಿ ಸೂಚಿಸಿದಂತೆ 220ಕೆವಿ ಮತ್ತು 400ಕೆವಿ ಉಪಕೇಂದ್ರಗಳ ನವೀಕರಣ ಹಾಗೂ ಉನ್ನತೀಕರಣ ಕಾಮಗಾರಿಗಳಿಗೆ ಪಿಎಸ್‌ಡಿಎಫ್ ಅನುದಾನದಿಂದ ರೂ.5437.60 ಲಕ್ಷಗಳಷ್ಟು ಮತ್ತು ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯ ಅಭಿವೃದ್ಧಿ ಕಾಮಗಾರಿಗಳನ್ನು ಜಿ.ಇ.ಸಿ ಅನುದಾನದಿಂದ ರೂ.17119.10 ಲಕ್ಷಗಳಷ್ಟನ್ನು ಗುರುತಿಸಲಾಗದ ಕಾರಣ ನಾವು ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ (CWIP), ದುರಸ್ತಿ ಮತ್ತು ನಿರ್ವಹಣೆ ಮತ್ತು ಈ ವರ್ಷದ ಲಾಭದ ಮೇಲಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xviii) ಟಿಪ್ಪಣಿ ಸಂಖ್ಯೆ:3.7 ರಲ್ಲಿ ಸೂಚಿಸಿದಂತೆ ಟವರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ಕಾರಿಡಾರ್ ನಿರ್ಮಾಣಕ್ಕೆ ನೀಡಿದ ಪರಿಹಾರ, ನೆಡುತೋಪಿಗೆ (Plantation) ನೀಡಿದ ಪರಿಹಾರ, ಮರ ಕಡಿತಕ್ಕೆ ನೀಡಿದ ಪರಿಹಾರ ಮತ್ತು

ಬೆಳೆ ನಾಶಕ್ಕೆ ನೀಡಿದ ಪರಿಹಾರವನ್ನು ನಗದು ಆಧಾರದ ವಿಧಾನದಲ್ಲಿ ಲೆಕ್ಕೀಕರಿಸಲಾಗುತ್ತಿದ್ದು ಸದರಿ ನಿಯಮವು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS 1 ರನ್ವಯ ಸಮಂಜಸವಾಗಿರುವುದಿಲ್ಲ. ಆದುದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಇದರಿಂದಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

xix) ಟಿಪ್ಪಣಿ ಸಂಖ್ಯೆ:6.5 ರಲ್ಲಿ ಸೂಚಿಸಿರುವಂತೆ ಬಳಕೆಯಲ್ಲಿಲ್ಲದ ದಾಸ್ತಾನುಗಳ ಗುರುತಿಸುವಿಕೆಯು ಬಾಕಿ ಇರುವುದರಿಂದ ಲೆಕ್ಕಗಳಲ್ಲಿ ಕಂಪನಿಯ ನಿಯಮಗಳಂತೆ ಅವಕಾಶ ಕಲ್ಪಿಸಲಾಗಿರುವುದಿಲ್ಲ ಇದರಿಂದಾಗಿ ದಾಸ್ತಾನುಗಳ ಮೇಲೆ ಮತ್ತು ತೆರಿಗೆ ಮುಂಚಿನ ಲಾಭದ ಮೇಲಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xx) ಟಿಪ್ಪಣಿ ಸಂಖ್ಯೆ: 7.2 ವಿಸಕಂಗಳೊಂದಿಗೆ ಮಾಡಿಕೊಳ್ಳಲಾಗಿರುವ ಪ್ರಸರಣ ಒಪ್ಪಂದ ಹಾಗೂ ಕ.ವಿ.ನಿ.ಆಯೋಗ 2006ರ ನಿಯಮಾವಳಿಗಳಲ್ಲಿನ ಕಲಮುನಲ್ಲಿರುವಂತೆ (Clause) ರಿಯಾಯಿತಿಯ ಕುರಿತು ವಿವಾದವಿರುವುದರಿಂದ ವಿಸಕಂಗಳಿಂದ ಸಕಾಲಕ್ಕೆ ಸರಿಯಾಗಿ ಪಾವತಿಸಿರುವ ಪ್ರಸರಣ ಶುಲ್ಕಕ್ಕೆ ಕ್ಲೇಮ್ ಮಾಡಿರುವ ರಿಯಾಯಿತಿ ಮೊತ್ತ ರೂ. 9317.54 ಲಕ್ಷಗಳು, ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xxi) ಟಿಪ್ಪಣಿ ಸಂಖ್ಯೆ: 16, 15.A.1 ಮತ್ತು 23, ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳ ವಾಸ್ತವಿಕ ಮೌಲ್ಯಮಾಪನ ವರದಿಗೆ ಸಂಬಂಧಪಟ್ಟಂತೆ, ಸದರಿ ಮೌಲ್ಯಮಾಪನವನ್ನು ಪರಿಗಣಿಸುವಾಗ ಅಳವಡಿಸಿಕೊಂಡಿರುವ ಮಾಹಿತಿಗಳು, ಊಹೆಗಳು ಮತ್ತು ಬಹಿರಂಗಪಡಿಸುವಿಕೆಗಳು ಸೂಕ್ತವಾಗಿರುವುದಿಲ್ಲ, ನೌಕರ ಸಂಖ್ಯೆಗೆ ಸಂಬಂಧಪಟ್ಟಂತೆ, ರಜೆ ನಗಧೀಕರಣ ದರ, ಪ್ಲಾನ್ ಅಸ್ಸೆಟ್‌ಗಳನ್ನು ಪರಿಗಣಿಸದಿರುವುದು, ಸಂಬಳದಲ್ಲಿನ ಹೆಚ್ಚಳ ದರ, ವಾರ್ಷಿಕ ಗಳಿಕೆ ನಗಧೀಕರಣ ದಿನಗಳನ್ನು ಪರಿಗಣಿಸದೇ ಇರುವುದು ಹಣಕಾಸಿನ ನಿರೂಪಣಾ ಪಟ್ಟಿಗಳಲ್ಲಿ ಅದರಿಂದಾಗುವ ಪರಿಣಾಮಕಾರಿ ಪರಿಣಾಮವು ಖಚಿತಪಡಿಸಿಕೊಳ್ಳಲಾಗಿರುವುದಿಲ್ಲ. ಮುಂದುವರೆದು, ಕಂಪನಿಯು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳ ಲಾಭವನ್ನು ಸಿಬ್ಬಂದಿ ವೆಚ್ಚಗಳಲ್ಲಿ ಲೆಕ್ಕೀಕರಿಸಲಾಗಿದ್ದು ಸದರಿ ಲಾಭವನ್ನು ಪ್ರತ್ಯೇಕವಾಗಿ ಇತರೆ ಸಮಗ್ರ ಆದಾಯದಲ್ಲಿ ಪರಿಗಣಿಸಲಾಗಿರುವುದಿಲ್ಲ ಇದರ ಕುರಿತು ಸೂಕ್ತ ಬಹಿರಂಗಪಡಿಸುವಿಕೆಯನ್ನು ಹಣಕಾಸಿನ ನಿರೂಪಣ ಪಟ್ಟಿಯಲ್ಲಿ ನೀಡಲಾಗಿರುವುದಿಲ್ಲ. ಇದರಿಂದಾಗಿ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS 19 'EMPLOYEE BENEFITS' ರಲ್ಲಿ ನೀಡಲಾಗಿರುವ ವಿಧಾನವನ್ನು ಪರಿಗಣಿಸಿರುವುದಿಲ್ಲ. ಈ ಕಾರಣದಿಂದಾಗಿ ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳಿಂದ ಹಣಕಾಸಿನ ನಿರೂಪಣೆಗಳ ಮೇಲಾಗುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xxii) ಕರ್ನಾಟಕ ಸರ್ಕಾರದಿಂದ ಹೊಂದಾಣಿಕೆಯ ಅಧಿಸೂಚನೆಯು ಬಾಕಿ ಇದ್ದು, ಟಿಪ್ಪಣಿ ಸಂಖ್ಯೆ:18.4ರಲ್ಲಿ ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ರೂ.4238.53ಲಕ್ಷ ಶಿಲ್ಕನ್ನು ತೋರಿಸಿದ್ದು, ಇದು ದಿನಾಂಕ 01.06.2002 ರಿಂದ ಅಂತಿಮ ಅರಂಭ ಶಿಲ್ಕನ್ನು ಅಧಿಸೂಚಿಸಿದ ನಂತರ ಮಾಡಿದ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಸಮನ್ವಯಗೊಳಿಸಿಕೊಂಡು, ಅನುಮೋದನೆಗಾಗಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸರ್ಕಾರವು ಕ.ವಿ.ಪ್ರ.ನಿ.ನಿ.ಗೆ ನಿರ್ದೇಶನ ನೀಡಿದೆ. ದಿನಾಂಕ: 31.03.2019ರಂದು ಇದ್ದಂತೆ, ಮೇಲಿನ ಲೆಕ್ಕಗಳ ಲೆಕ್ಕಸಮನ್ವಯ ಗೊಳಿಸುವಿಕೆಯು ಪ್ರಗತಿಯಲ್ಲಿದ್ದು, ನಿವ್ವಳ ಮೌಲ್ಯದ ಮೇಲಿನ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xxiii) ಟಿಪ್ಪಣಿ ಸಂಖ್ಯೆ:20 ರಲ್ಲಿ ವಿದ್ಯುತ್ ಖರೀದಿಗಾಗಿ ವಿವಿಧ ದೇಣಿದಾರರು ಶೀರ್ಷಿಕೆಯಲ್ಲಿ ರೂ.1573.41/–ಲಕ್ಷಗಳನ್ನು (ಕೆಪಿಸಿಗೆ ಪಾವತಿಸಬೇಕಾದ ಬಡ್ಡಿ 66853.20 ಲಕ್ಷಗಳನ್ನು ಹೊರತುಪಡಿಸಿ) 9.06.2005ರ ವರೆಗಿನ ವಿದ್ಯುತ್ ಖರೀದಿಗೆ ಸಂಬಂಧಿಸಿದ ಪಾವತಿಯಾಗಬೇಕಾಗಿರುವ ಬಾಕಿಯೆಂದು ತೋರಿಸಲ್ಪಟ್ಟಿದ್ದು ಸದರಿ ಹೊಣೆಗಾರಿಕೆ ಅಥವಾ ಹೆಚ್ಚುವರಿ ಹೊಣೆಗಾರಿಕೆಗಳಿದ್ದಲ್ಲಿ ಅದರ ನಿಖರತೆಯನ್ನು ನಾವು ಗೊತ್ತುಪಡಿಸಿಕೊಳ್ಳಲಾಗಿಲ್ಲ.

xxiv) ಟಿಪ್ಪಣಿ ಸಂಖ್ಯೆ:20.1 ಕೆಪಿಸಿಗೆ ವಿದ್ಯುತ್ ಖರೀದಿ ಬಾಕಿಯ ಮೇಲೆ ಬಡ್ಡಿ ಹೊಣೆಗಾರಿಕೆ ಮೊತ್ತ ರೂ.66853.20 ಲಕ್ಷಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಜಂಸವಲ್ಲ, ಕರ್ನಾಟಕ ಸರ್ಕಾರದ ಶಾಸನ ಬದ್ಧ ಆದೇಶ ಸಂಖ್ಯೆ:EN 131 PSR 2003 Dated:10.05.2005 ಮತ್ತು ಕ.ವಿ.ನಿ.ಆಯೋಗ

ತನ್ನ ದರ ಪರಿಷ್ಕರಣ ಆದೇಶ ದಿನಾಂಕ:25.11.2009 ರಲ್ಲಿ ವಿದ್ಯುತ್ ಖರೀದಿ ವ್ಯವಹಾರವನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದರಿಂದ ಎಲ್ಲಾ ವಿದ್ಯುತ್ ಖರೀದಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ವಿ.ಸ.ಕಂ ಗಳಿಗೆ ವರ್ಗಾಯಿಸುವುದು ಎಂದು ಸೂಚಿಸಿರುವ ಕಾರಣ ರೂ. 66853.20 ಲಕ್ಷಗಳನ್ನು ಕಂಪನಿಯು ವಿದ್ಯುತ್ ಖರೀದಿ ಬಾಕಿ ಎಂದು ಬಿಂಬಿಸುತ್ತಿರುವುದು ಸಮಂಜಸವಲ್ಲ. ಇದರಿಂದಾಗಿ ಮೀಸಲು (Reserve) ಕಡಿಮೆಯಾಗಿ ಹಾಗೂ ವ್ಯವಹಾರ ಪಾವತಿಗಳನ್ನು ಹೆಚ್ಚಾಗಿ ಬಿಂಬಿಸಿದಂತಾಗುತ್ತದೆ.

xxv) ಟಿಪ್ಪಣಿ ಸಂಖ್ಯೆ:22, 26.1(ii) ಮತ್ತು 26.3 ರಲ್ಲಿ ಸೂಚಿಸಿರುವಂತೆ ಕಂಪನಿಯು ಅರ್ಧದಲ್ಲಿಯೇ ಮುಕ್ತಾಯಗೊಳಿಸಿದ ಕಾಮಗಾರಿಗಳ ಮೇಲೆ ವಿಧಿಸಿದ ದಂಡದ ಕುರಿತು ಹಾಗೂ ಗುತ್ತಿಗೆದಾರರಿಂದ ದಂಡ ಮನ್ನಣೆ ಮಾಡುವ ಕುರಿತು ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು ಪರಿಪೂರ್ಣವಾಗಿ ನೀಡಿರುವುದಿಲ್ಲ. ಕಂಪನಿಯು ಇತರೆ ಪಾವತಿಗಳಲ್ಲಿ ಬಿಂಬಿಸಿರುವ ಮೊತ್ತ ರೂ.8240.04 ಲಕ್ಷಕ್ಕೆ ಹಾಗೂ ರೂ.1698.13 ಲಕ್ಷ ಇತರೆ ಆದಾಯದ ಮೊತ್ತಕ್ಕೆ ಪರಿಪೂರ್ಣ ಮಾಹಿತಿಯನ್ನು ನೀಡಿರುವುದಿಲ್ಲ ಇದರಿಂದಾಗಿ ಹಣಕಾಸಿನ ನಿರೂಪಣೆಯ ಮೇಲೆ ಬೀರುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xxvi) ಟಿಪ್ಪಣಿ ಸಂಖ್ಯೆ:22.4 'ಇತರೆ ಪ್ರಸಕ್ತ ಹೊಣೆಗಾರಿಕೆಗಳಲ್ಲಿ' ಅಂತರ ಘಟಕ ಲೆಕ್ಕ ಶೀರ್ಷಿಕೆ ಜಮ/ಖರ್ಚುಗಳ ನಿವ್ವಳ ಶಿಲ್ಕು ರೂ.1572.49 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಸಾಮಗ್ರಿಗಳು ಮತ್ತು ರೂ.2127.15 ಲಕ್ಷಗಳು ಅಂತರ ಘಟಕ ಲೆಕ್ಕ ಶೀರ್ಷಿಕೆ ಬಿಡುಗಡೆಗೊಳಿಸಲಾದ ಆಸ್ತಿಗಳು ಮತ್ತು ಟಿಪ್ಪಣಿ ಸಂಖ್ಯೆ:12.1 'ಇತರೆ ಪ್ರಸಕ್ತ ಆಸ್ತಿ' ಮೊತ್ತ ರೂ.32.78 ಲಕ್ಷಗಳು (ಡೆಬಿಟ್) ಅಂತರ ಘಟಕ ಲೆಕ್ಕ ಶೀರ್ಷಿಕೆ–ಸಿಬ್ಬಂದಿ ಮತ್ತು ರೂ.19.69 ಲಕ್ಷ ಅಂತರ ಘಟಕ ಲೆಕ್ಕ ಶೀರ್ಷಿಕೆ ತೀರುವಳಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ ಹಾಗೂ ಹಿಂದಿನ ವರ್ಷದ ವಹಿವಾಟುಗಳನ್ನು ಒಳಗೊಂಡಿರುತ್ತದೆ. ಈ ಕಾರಣದಿಂದಾಗಿ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xxvii) ಟಿಪ್ಪಣಿ ಸಂಖ್ಯೆ: 22.1; ರಾಜ್ಯ ವಿದ್ಯುತ್ ರವಾನೆ ಕೇಂದ್ರವು (ಎಸ್ ಎಲ್ ಡಿ ಸಿ) "ಯು ಐ/ DSM(Deviation settlement mechanism) ಡಿ.ಎಸ್.ಎಂ. ಶುಲ್ಕಕ್ಕೆ ಸಂಬಂಧಿಸಿದಂತೆ ಯು ಐ/ DSM(Deviation settlement mechanism) ಶೀರ್ಷಿಕೆಯಲ್ಲಿ ಜಮೆ ಮೊತ್ತ ರೂ. 438.01 ಲಕ್ಷಗಳಷ್ಟು ಶಿಲ್ಕು ಇದ್ದು ವೆಚ್ಚ ಶಿಲ್ಕಿಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆಯಲ್ಲಿ ರೂ. 757.47/– ಲಕ್ಷಗಳು ಮಾತ್ರ ಇರುವುದಾಗಿ ಬಿಂಬಿಸಲಾಗುತ್ತಿದೆ. ಇವುಗಳ ಸಮನ್ವಯ ಕಾರ್ಯವು ಬಾಕಿ ಇರುವುದರಿಂದ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xxviii) ಟಿಪ್ಪಣಿ ಸಂಖ್ಯೆ: 26 ಇತರೆ ಆದಾಯ (17) ಮತ್ತು ಟಿಪ್ಪಣಿ ಸಂಖ್ಯೆ:26.2 ಇತರೆ ವಸೂಲಾತಿ ಇದರಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರನ್ನು ಗುರುತಿಸಿ ಪಡೆಯಲಾದ ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಮೊತ್ತ ರೂ.248.81 ಲಕ್ಷಗಳು ಸೇರಿವೆ. ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ, ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಕುರಿತು ಸಂಪೂರ್ಣತೆಯನ್ನು/ಬಂಡವಾಳ ವೆಚ್ಚ/ಮೂಲ ಸೌಕರ್ಯಗಳ ಸುಧಾರಣೆಯ ವೆಚ್ಚಕ್ಕೆ ಸಂಬಂದಿಸಿದಂತೆ ಸ್ವತಂತ್ರ ಉತ್ಪಾದಕರಿಂದ ಕಾರ್ಯ ಮತ್ತು ನಿರ್ವಹಣೆ ವೆಚ್ಚವನ್ನು ವಸೂಲು ಮಾಡಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಸರಿಯಾಗಿರುವಿಕೆಯನ್ನು ಅಥವಾ ಸಂಪೂರ್ಣತೆಯನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ, ಈ ಕಾರಣದಿಂದಾಗಿ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮಕಾರಿ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

xxix) ಟಿಪ್ಪಣಿ ಸಂಖ್ಯೆ:26.1 (iv) ಆದಾಯ ತೆರಿಗೆ ಕಾಯ್ದೆಯ ನಮೂನೆ 26 AS ರಲ್ಲಿ ಮೂಲ ಆದಾಯದ ಮೇಲೆ ತೆರಿಗೆ ಕಡಿತ ಮಾಡಿದ ಮೊತ್ತ (TDS) ರೂ.67.31/– ಲಕ್ಷಗಳನ್ನು ಕವಿಪ್ರನಿನಿಯ ಸಮನ್ವಯಗೊಳಿಸದೆ ಇರುವುದರಿಂದ ಸದರಿ ಮೊತ್ತವನ್ನು ಆದಾಯವೆಂದು ಪರಿಗಣಿಸಲಾಗಿದ್ದು ಇದರಿಂದಾಗಿ ಆದಾಯ, ಗ್ರಾಹಕರಿಂದ ಬಂದ ಮುಂಗಡ ಮತ್ತು ವ್ಯವಹಾರದ ಸ್ವೀಕೃತಿಗಳ ಮೇಲಾಗುವ ಪರಿಣಾಮವನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

xxx) ಟಿಪ್ಪಣಿ ಸಂಖ್ಯೆ 37.10 (II) ಪ್ರಸರಣ ವ್ಯವಸ್ಥೆಯ ದಕ್ಷತೆ, ಲಭ್ಯತೆ ಮತ್ತು ಪ್ರಸರಣ ನಷ್ಟದ ಇಳಿಕೆಗಾಗಿ ಆರ್ಥಿಕ ವರ್ಷ 2018–19ನೇ ಸಾಲಿನಲ್ಲಿ ರೂ.2446.03/– ಲಕ್ಷಗಳನ್ನು ವಿಸಕಂಗಳಿಂದ ಕವಿಪ್ರನಿನಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹ ಧನವನ್ನು ಲೆಕ್ಕೀಕರಣೆ ಮಾಡದೇ ಇರುವ ಹಾಗು ಕ.ವಿ.ನಿ.ಆಯೋಗದಿಂದ ಅನುಮೋದನೆಗೊಳ್ಳುವ ಪ್ರಕ್ರಿಯೆ ಬಾಕಿ ಇರುವ ಕ್ರಮವು ಲೆಕ್ಕ ವಿಧಾನ 2015ರನ್ವಯ ಹೊರಡಿಸಲಾದ IND AS 115(Revenue from

contracts with Consumers) "ಗ್ರಾಹಕರೊಂದಿಗಿನ ಒಪ್ಪಂದಗಳಿಂದ ಆದಾಯ" ರನ್ವಯ ಸಮಂಜಸವಲ್ಲ. ಇದರಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

xxxi) ಟಿಪ್ಪಣಿ ಸಂಖ್ಯೆ:37.12 (ಬಿ) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆಯಬೇಕಾದ ಒಟ್ಟು ಮೊತ್ತ ರೂ.17895.87 ಲಕ್ಷ ಹಾಗೂ (ಟಿಪ್ಪಣಿ ಸಂಖ್ಯೆ:11) ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತ ರೂ.18554.32 ಲಕ್ಷಗಳಿಗೆ (ಟಿಪ್ಪಣಿ ಸಂಖ್ಯೆ:21) ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಮನ್ವಯಗೊಳಿಸುವಿಕೆಯು ಹಾಗೂ ದೃಢಪಡಿಸಿಕೊಳ್ಳುವ ಕಾರ್ಯವು ಬಾಕಿಯಿದೆ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

xxxii) ಕವಿಪ್ರನಿನಿಯು ವಿಸಕಂಗಳಿಂದ ವಿಳಂಬವಾಗಿ ಪಾವತಿಸಿದ ಮೊತ್ತಗಳ ಮೇಲೆ ಹೆಚ್ಚುವರಿ ಶುಲ್ಕ (Surcharge) ಶೇಕಡ 1.25 ರಷ್ಟು ವಿಧಿಸಲಾಗಿರುವುದಿಲ್ಲ. ಸದರಿ ಹೆಚ್ಚುವರಿ ಶುಲ್ಕವನ್ನು ವಿಧಿಸುವುದು ವಿಸಕಂಗಳಿಗೆ ಮಾಡಿಕೊಂಡ ಪ್ರಸರಣ ಒಪ್ಪಂದದನ್ವಯ ಹಾಗೂ ಕ.ವಿ.ನಿ.ಆಯೋಗದ ದರ ಪಟ್ಟಿ ನಿಯಮಾವಳಿ 2006ರಲ್ಲಿ ಸೂಚಿಸಿರುವಂತೆ ಪಾಲಿಸಲಾಗಿರುವುದಿಲ್ಲ. ಹಾಗೂ ವಿಳಂಬವಾಗಿ ಪಾವತಿಸಿರುವ ಪ್ರಸರಣ ಶುಲ್ಕಗಳಿಗೆ ಸಂಬಂಧಪಟ್ಟಂತೆ ಅವಶ್ಯವಿರುವ ಮಾಹಿತಿಯನ್ನು ಒದಗಿಸಲಾಗದ ಕಾರಣ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

ಕೆಳಗೆ ತಿಳಿಸಲಾದ ವಿಷಯಗಳು 31 ಮಾರ್ಚ್ 2019 ರಂತೆ ಮೊದಲ ಬಾರಿಗೆ IND AS ಹಣಕಾಸು ಹೇಳಿಕೆಗಳಿಗೆ ಅರ್ಹತೆಯ ವಿಷಯವಾಗಿದೆ.

xxxiii) 2018–19ರ ಹಣಕಾಸು ವರ್ಷದಲ್ಲಿ ಸಿಎಸ್‌ಆರ್ ನಿಧಿಯ ಖರ್ಚು ಮಾಡದ ಮೊತ್ತಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 29.4 ಮತ್ತು ಟಿಪ್ಪಣಿ 37.13 ರೂ.402.85 ಲಕ್ಷಗಳು ಮತ್ತು ಹಣಕಾಸು ವರ್ಷ 2017–18 ರೂ.165 ಲಕ್ಷಗಳು ಕಂಪನಿ ಕಾಯ್ದೆಯ 2013ರ ಸೆಕ್ಷನ್ 135ರ ಪ್ರಕಾರ ಇರುವುದಿಲ್ಲವಾದರಿಂದ ಹಣಕಾಸಿನ ಹೇಳಿಕೆಯ ಮೇಲೆ ಪರಿಣಾಮ ಬೀರುತ್ತದೆ.

xxxiv) ಟಿಪ್ಪಣಿ ಸಂಖ್ಯೆ 29.5 ರಲ್ಲಿ ದಿನಾಂಕ: 01.04.2016 ರ ನಂತರ ಮಾಡಿದ ಹೊಸ ನೇಮಕಾತಿಗಳ ಗುತ್ತಿಗೆದಾರರ ಪಿ.ಎಫ್ ಕೊಡುಗೆಗೆ ಉದ್ಯೋಗದಾತರ ಕೊಡುಗೆಗಿಂತ ಹೆಚ್ಚಿನ ಪಾವತಿಯಾಗಿರುವುದಕ್ಕೆ ಸಂಬಂಧಿಸಿದಂತೆ PMRPY ಯೋಜನೆಯಡಿ ಭಾರತ ಸರ್ಕಾರವು ಸಹ ಭರಿಸಿರುತ್ತಿರುತ್ತದೆ ಮತ್ತು ಇದರಿಂದ ಹಣಕಾಸು ಹೇಳಿಕೆಯಲ್ಲಿ ತಪ್ಪಾಗಿ ಅರ್ಥೈಸುವಿಕೆಯ ಪರಿಣಾಮ ವೆಚ್ಚಗಳಿಗೆ ಸಂಬಂಧಿಸಿದಂತೆ ಮತ್ತು ಮರು ಪಡೆಯಬಹುದಾದ ಮೊತ್ತವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

xxxv) ಟಿಪ್ಪಣಿ 3.9, ಗುತ್ತಿಗೆದಾರರು ರೂ.4369.07 ಲಕ್ಷಗಳಷ್ಟು ಒದಗಿಸಿದ ಬ್ಯಾಂಕ್ ಗ್ಯಾರಂಟಿಗಳ (ಬಿಜಿ) ನಗದಾಗಿಸುವಿಕೆಗೆ ಸಂಬಂಧಿಸಿದಂತೆ, ಕಂಪನಿಯು ಇದರ ಆದಾಯದಂತೆ ಅಥವಾ ವರ್ಷಾಂತ್ಯದಲ್ಲಿ ಪಿಪಿಇ/ಸಿಡಬ್ಲ್ಯುಐಪಿಗೆ ಹೊಂದಾಣಿಕೆ ಎಂದು ವರ್ಗೀಕರಿಸಿರುವುದಿಲ್ಲ, ಇದು IND AS 16 – ಆಸ್ತಿ ಮತ್ತು ಸಲಕರಣೆಗಳು ರ ಅನುಗುಣವಾಗಿರುವುದಿಲ್ಲ, IND AS 8 – ಲೆಕ್ಕಪತ್ರಗಳ ನೀತಿಗಳು, ಲೆಕ್ಕಪತ್ರಗಳ ಅಂದಾಜುಗಳು ಮತ್ತು ದೋಷಗಳಲ್ಲಿನ ಬದಲಾವಣೆಗಳು ಮತ್ತು IND AS 115 – ಗ್ರಾಹಕರೊಂದಿಗಿನ ಒಪ್ಪಂದಗಳಿಂದ ಬರುವ ಆದಾಯ ಮತ್ತು ಅದರ ಪರಿಣಾಮವು ಯಾವುದಾದರೂ ಇದ್ದರೆ, ಪಿಪಿಇ ವೆಚ್ಚವನ್ನು ಪರಿಗಣಿಸುವ ವಿಷಯದಲ್ಲಿ ತಪ್ಪು ತಿಳುವಳಿಕೆಯ ಮೇಲೆ ಸಿಡಬ್ಲ್ಯುಐಪಿ, ಸವಕಳಿ ಮತ್ತು ಅದರ ಮೇಲಿನ ತೆರಿಗೆಯನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

ಕಂಪನಿ ಕಾಯ್ದೆ 2013 (ಕಾಯ್ದೆ)ನ ಸೆಕ್ಷನ್ 143(10) ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಾನದಂಡಗಳು (ಎಸ್‌ಎ)ಗೆ ಅನುಗುಣವಾಗಿ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ನಾವು ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಹಣಕಾಸು ಹೇಳಿಕೆಗಳ ವಿಭಾಗದ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ವಿವರಿಸಲಾಗಿದೆ. ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿದ ನೀತಿ ಸಂಹಿತೆಯ ಅನುಸಾರ ನಾವು ಕಂಪನಿಯಿಂದ ಸ್ವಂತತ್ರರಾಗಿದ್ದೇವೆ ಮತ್ತು ಕಂಪನಿಗಳ ಕಾಯ್ದೆ 2013ರ ನಿಬಂಧನೆಗಳ ಅಡಿಯಲ್ಲಿನ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಹಣಕಾಸು ಹೇಳಿಕೆಗಳ ನೈತಿಕ ಅವಶ್ಯಕತೆಗಳು ಮತ್ತು ಅದರ ನಿಯಮಗಳು ಮತ್ತು ಈ ಅವಶ್ಯಕತೆಗಳು ಮತ್ತು ಐಸಿಎಐ ನ ನೀತಿ ಸಂಹಿತೆಗೆ ಅನುಗುಣವಾಗಿ ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ನಾವು ಪೂರೈಸಿದ್ದೇವೆ. ನಮ್ಮ ಅರ್ಹ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಾವು ಪಡೆದ ಲೆಕ್ಕಪರಿಶೋಧನೆಯ ಪುರಾವೆಗಳು ಸಾಕಷ್ಟು ಸೂಕ್ತವೆಂದು ನಾವು ನಂಬುತ್ತೇವೆ.

**ನಿರೂಪಣಾ ವಿಷಯದ ಸ್ಪಷ್ಟೀಕರಣ**

ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ನೀಡದೆ ಆರ್ಥಿಕ ನಿರೂಪಣಾಪಟ್ಟಿಯ ಕೆಳಕಂಡ ಟಿಪ್ಪಣಿಗಳತ್ತ ಗಮನ ಸೆಳೆಯಲಾಗಿದೆ.

1) ಟಿಪ್ಪಣಿ ಸಂಖ್ಯೆ:1.10 ಮತ್ತು 37.18 ಪ್ರಸರಣ ಶುಲ್ಕವನ್ನು ಪರಿಷ್ಕೃತ ದರದ ಆದೇಶದ ಆಧಾರದ ಮೇಲೆ ಸರಿದೂಗಿಸಿ ಹೊಂದಿಸಿ ಲೆಕ್ಕೀಕರಿಸುವ ಬಗ್ಗೆ ಸೂಕ್ತವಾದ ವೇದಿಕೆಯಿಂದ ಅಭಿಪ್ರಾಯ ಪಡೆಯುವುದು ಬಾಕಿಯಿರುತ್ತದೆ.

2) ಟಿಪ್ಪಣಿ ಸಂಖ್ಯೆ:1, 2.2(ಎ),(ಜಿ),(ಐ) ಮತ್ತು (ಎನ್)– ಜೆಎಸ್‌ಡಬ್ಲ್ಯೂ ಎನರ್ಜಿ ಲಿಮಿಟೆಡ್ ಮತ್ತು ಕಂಪನಿಯ ನಡುವೆ ಬಳ್ಳಾರಿ ಪೂಲಿಂಗ್ ಸ್ಟೇಷನ್ ಸ್ಥಾಪನೆಗೆ ಸಂಬಂಧಿಸಿದಂತೆ ಸ್ವ ಕಾಮಗಾರಿಯ ಒಪ್ಪಂದದ ನಿವೇದನಾ ಪತ್ರ/ಕರಾರು ಪತ್ರ ಲಭ್ಯವಿರುವುದಿಲ್ಲ. ಮುಂದುವರೆದು, ಬಳ್ಳಾರಿ ಪೂಲಿಂಗ್ ಸ್ಟೇಷನ್‌ನ್ನು ಸ್ವ ಕಾಮಗಾರಿ ಅಡಿಯಲ್ಲಿ ನಿರ್ಮಿಸಿದ್ದರೂ ಕೂಡ ಕಂಪನಿಯು ಭೂಮಿಯನ್ನು ಕೆಐಎಡಿಬಿ ಯಿಂದ ರೂ.5379.70 ಲಕ್ಷಗಳನ್ನು ಪಾವತಿಸಿ ಭೂಮಿಯನ್ನು ಪಡೆದಿರುತ್ತದೆ.

3) ಟಿಪ್ಪಣಿ 2.4 (ಎ): ಭೋಗ್ಯದ ಮೇಲೆ ಹಿಂದೆ ಪಡೆದಿದ್ದ, ಆದರೆ ಲೆಕ್ಕಪತ್ರಗಳಲ್ಲಿ ಅವಕಾಶ ಕಲ್ಪಿಸಿಲ್ಲದ ಆಸ್ತಿಗಳ ಹಕ್ಕುಪತ್ರಗಳ ವರ್ಗಾವಣೆ, ಭೋಗ್ಯದ ಒಪ್ಪಂದದ ಅವಧಿಯನ್ನು ರದ್ದುಪಡಿಸಿ, ಆಸ್ತಿಗಳನ್ನು ಪುನರ್ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳು ಹೊಂದಿರುವ ರೂ.59.60ಲಕ್ಷ ಮೌಲ್ಯದ ಆಸ್ತಿಗಳನ್ನೂ ಒಳಗೊಂಡಂತೆ, ಲೆಸ್ಸರ್ ಸಲ್ಲಿಸಿರುವ ಬೇಡಿಕೆ ಮೊಬಲಗು ರೂ.112.50ಲಕ್ಷದ ಬಗ್ಗೆ ವ್ಯವಹರಣೆಯು ಪ್ರಗತಿಯಲ್ಲಿರುವ ಬಗ್ಗೆ.

4) ಟಿಪ್ಪಣಿ 2.4 (ಬಿ) ಸ್ಥಾವರ ಮತ್ತು ಉಪಕರಣಗಳ ಅವಧಿಯ ಮುಕ್ತಾಯದ ನಂತರ ಕಂಪನಿಯು ಉಳಿಸಿಕೊಂಡಿರುವ ಆಸ್ತಿಗಳ ವೆಚ್ಚ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್ (ಈಗ ಕೊಟಾಕ್ ಮಹೀಂದ್ರಾ ಬ್ಯಾಂಕ್) ಯಿಂದ ಹಿಡುವಳಿ ಆಸ್ತಿಯ ವೆಚ್ಚವನ್ನು ಒಳಗೊಂಡಿರುವುದಿಲ್ಲ ಮತ್ತು ಆಸ್ತಿಗಳು ಅವುಗಳ ಉಳಿಕೆ ಮೌಲ್ಯವನ್ನು ತಲುಪಿವೆ ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿವೆ ಮತ್ತು ಅಂತಹ ಆಸ್ತಿಗಳ ನಿಖರವಾದ ಸ್ಥಳವನ್ನು ಗುರುತಿಸಲಾಗುವುದಿಲ್ಲ.

5) ಟಿಪ್ಪಣಿ 5 ಮತ್ತು 18.3: ಕಂಪನಿಯು ಟಿ.ಬಿ.ಪಿ.ಸಿ.ಎಲ್.ಗೆ ಪಾವತಿಸಿರುವ ರೂ.543.84 ಲಕ್ಷ ಹೆಚ್ಚುವರಿ ನಿಗಧಿತ ಶುಲ್ಕವನ್ನು ನಿಯಂತ್ರಿತ ಆಸ್ತಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲು ಮಾಡಬೇಕಾದ್ದು ಎಂದು ಲೆಕ್ಕೀಕರಿಸಿರುವ ಬಗ್ಗೆ. ಸದರಿ ಹೆಚ್ಚುವರಿ ನಿಗದಿತ ಶುಲ್ಕದ ಬಗ್ಗೆ ಕ.ವಿ.ನಿ.ಆಯೋಗದಿಂದ ನಿರ್ದೇಶನವು ಬಾಕಿ ಉಳಿದಿದೆ.

6) ಟಿಪ್ಪಣಿ ಸಂಖ್ಯೆ:4.7: ದಿನಾಂಕ:27.04.2012 ರಿಂದ ಸಾಮಗ್ರಿಯನ್ನು ಒಳಗೊಂಡು ಒಟ್ಟಾರೆ ಒಪ್ಪಂದದ ಮೌಲ್ಯ ರೂ.229.86 ಲಕ್ಷಗಳ ಮೇಲೆ ವರ್ಕರ್ಸ್ ವೆಲ್‌ಫೇರ್ ಸೆಸ್ (Workers Welfare Cess) ಅನ್ವಯಿಸುವಿಕೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಮಂಡಳಿಯಿಂದ ಸ್ಪಷ್ಟೀಕರಣ ಪಡೆದು ಆಡಳಿತ ಮಂಡಳಿಯು ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ.

7) ಟಿಪ್ಪಣಿ ಸಂಖ್ಯೆ:15ಎ ಮತ್ತು 21 ಹಕ್ಕು ಒತ್ತಾಯಿಸದೆ ಉಳಿಸಿಕೊಂಡ ಹಣದ ಜಮ ಮೊತ್ತ ರೂ.90316.13 ಲಕ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯಲ್ಲಿ ಸೂಕ್ತವಾದ ನಿಯಮವಿರುವುದಿಲ್ಲ.

8) ಟಿಪ್ಪಣಿ 15ಎ, 21 ಮತ್ತು 26.1 (iiii) ರಲ್ಲಿ ಗುತ್ತಿಗೆದಾರರಿಂದ ಸಂಗ್ರಹಿಸಲಾದ ಇಎಮ್‌ಡಿ/ಭದ್ರತಾ ಠೇವಣಿ ರೂ.2543.26 ಲಕ್ಷಗಳ ಮೊತ್ತಕ್ಕೆ ಸಂಬಂಧಿಸಿದಂತೆ, ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಬಾಕಿಯಿರುವುದನ್ನು ಆದಾಯಕ್ಕೆ ವರ್ಗಾಯಿಸದಿರುವುದು ಸೇರಿದೆ.

9) ಟಿಪ್ಪಣಿ 18.2: ಹಿಂದಿನ ವರ್ಷದಲ್ಲಿ ರೂ. 26243.84 ಲಕ್ಷ ಮೊಬಲಗಿಗೆ ಬಿಲ್ ಮಾಡಿ ಲೆಕ್ಕೀಕರಿಸಿರುವ ಪ್ರಸರಣ ಶುಲ್ಕದಲ್ಲಿನ ವ್ಯತ್ಯಾಸವನ್ನು ಇತರೆ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ತೋರಿಸಿದ್ದು, ಈ ಬಗ್ಗೆ ಕ.ವಿ.ನಿ.ಆಯೋಗದಿಂದ ನಿರ್ದೇಶನವು ಬಾಕಿಯಿದೆ.

10) ಟಿಪ್ಪಣಿ ಸಂಖ್ಯೆ:21.1 ಔಪಚಾರಿಕ ಮತ್ತು ವಿಧಾನಗಳು ಪೂರ್ಣಗೊಳ್ಳದ ಕಾರಣ ರೂ.113.99 ಲಕ್ಷಗಳಷ್ಟು ಪ್ರಸ್ತಾವಿತ ನೌಕರರ ಕಲ್ಯಾಣ ಟ್ರಸ್ಟ್‌ಗೆ ವರ್ಗಾವಣೆ ಮಾಡುವುದು ಬಾಕಿಯಿದೆ.

11) ಟಿಪ್ಪಣಿ ಸಂಖ್ಯೆ:21.4 ಮೈಕ್ರೋ, ಸ್ಮಾಲ್ ಮತ್ತು ಮೀಡಿಯಮ್ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್, 2006 ರ ಅಡಿಯಲ್ಲಿ ಮಾರಾಟಗಾರರಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವ ಬಗ್ಗೆ.

12) ಟಿಪ್ಪಣಿ:21.3: ಆರ್ಥಿಕ ವರ್ಷ 2014–15 ನೇ ಸಾಲಿನಿಂದ ನೌಕರರಿಗೆ ಅನುಗ್ರಹವನ್ನು ಪಾವತಿಸಿ ಕರ್ನಾಟಕ ಸರ್ಕಾರದಿಂದ ಘಟನೋತ್ತರ ಅನುಮೋದನೆಯ ಅನುಸಮರ್ಥನೆ/ಸ್ಥಿರೀಕರಣ ಪಡೆಯುವುದನ್ನು ಗಮನ ಸೆಳೆದಿದೆ.

13) ಟಿಪ್ಪಣಿ 37.12 (ಎ): ಆರ್ಥಿಕ ಸಂಸ್ಥೆಗಳು ಹಾಗೂ ಬ್ಯಾಂಕುಗಳಿಂದ ಪಡೆದ ಸಾಲ, ಬ್ಯಾಂಕಿನಲ್ಲಿರುವ ಶಿಲ್ಕಿನ ಬಗ್ಗೆ ಮಾತ್ರ ಶಿಲ್ಕು ದೃಢೀಕರಣವನ್ನು ಪಡೆಯಲಾಗಿದೆ. ತತ್ಪರಿಣಾಮವಾಗಿ, ಲೆಕ್ಕಗಳಲ್ಲಿ ತೋರಿಸಿರುವ ಬ್ಯಾಂಕ್ ಗ್ಯಾರಂಟಿ ಕೊಟ್ಟಿರುವ / ಸಾಲ ಪತ್ರ ನೀಡಿರುವ, ಸ್ವೀಕೃತಿಗಳು/ವ್ಯವಹರಣೆ ಪಾವತಿಗಳು/ಸಾಲ ಹಾಗೂ ಮುಂಗಡಗಳು/ಇತರೆ ಹೊಣೆಗಾರಿಕೆ/ರಿಪೇರಿಗೆ ನೀಡಿದ ಸಾಮಗ್ರಿಗಳು ಇತ್ಯಾದಿಗಳ ಶಿಲ್ಕುಗಳು ದೃಢೀಕರಣಕ್ಕೊಳಪಡಬೇಕಾಗಿದೆ.

14) ಟಿಪ್ಪಣಿ ಸಂಖ್ಯೆ:37.20 (ಎ) ಕಂಪನಿ ಕಾಯ್ದೆ, 2013 ಅನುಸೂಚಿ 3 ರನ್ವಯ ಹಾಗೂ ಭಾರತೀಯ ಲೆಕ್ಕ ವಿಧಾನಗಳನ್ವಯ ಹಣಕಾಸಿನ ನಿರೂಪಣೆಗಳಲ್ಲಿ ಕಂಡುಬರುವ ಅಂಕಿಗಳನ್ನು ಹತ್ತಿರದ ಲಕ್ಷ, ದಶಲಕ್ಷ, ಕೋಟಿ ಅಥವಾ ದಶಾಂಶಗಳಲ್ಲಿ ಬಿಂಬಿಸಿರುವುದಿಲ್ಲ.

15) ಟಿಪ್ಪಣಿ ಸಂಖ್ಯೆ 21.2, ಕೆಇಆರ್‌ಸಿ ಆದೇಶ ಸಂಖ್ಯೆ ಎನ್/64/11 ದಿನಾಂಕ 30.11.2012ರ ಪ್ರಕಾರ ಕಂಪನಿಯು ಗ್ರಾಹಕರಿಂದ ವರ್ಧನೆಯ ಶುಲ್ಕವನ್ನು ಸಂಗ್ರಹಿಸುವ ಅಧಿಕಾರವಿಲ್ಲದಿರುವುದರಿಂದ ರೂ.1244.98 ಲಕ್ಷಗಳನ್ನು ಮರುಪಾವತಿ ಮಾಡಬೇಕಾಗಿರುತ್ತದೆ. ಇದು ಹಣಕಾಸುಗಳ ಮೇಲೆ ಪರಿಣಾಮಕಾರಿಯಾದ ಪರಿಣಾಮ ಬೀರುತ್ತದೆ.

16) ಟಿಪ್ಪಣಿ ಸಂಖ್ಯೆ 25.1 ರಲ್ಲಿ ಕಂಪನಿಯು ಸಿಇಆರ್‌ಸಿ ಆದೇಶಗಳ ಆಧಾರದ ಮೇಲೆ 2014 ರಿಂದ 2019 ರವರೆಗೆ ಅಂತರ ರಾಜ್ಯ ಪ್ರಸರಣ ಮಾರ್ಗಗಳ ಪ್ರಸರಣ ಶುಲ್ಕ ರೂ.15137.98 ಲಕ್ಷವನ್ನು ವ್ಯತಿರಿಕ್ತಗೊಳಿಸಿದೆ.(reversed). ಸಿಇಆರ್‌ಸಿ ಮತ್ತು ಮೇಲ್ಮನವಿ ನ್ಯಾಯಾಧಿಕರಣದ ವಿದ್ಯುತ್‌ಗಾಗಿ ಮುಂದೆ ಸಲ್ಲಿಸಬೇಕಾದ ಉದ್ದೇಶಿತ ಅರ್ಜಿಯ ಫಲಿತಾಂಶ ಬಾಕಿ ಉಳಿದಿದೆ. ಇದರಿಂದ ಹಣಕಾಸಿನ ಮೇಲೆ ಪರಿಣಾಮಕಾರಿಯಾದ ಪರಿಣಾಮ ಬೀರುವುದು.

17) ಟಿಪ್ಪಣಿ ಸಂಖ್ಯೆ 25.2, ಲೆಕ್ಕಪತ್ರಗಳ ನೀತಿಗಳು ಸಂಖ್ಯೆ 1.10(ಬಿ) ಆಧಾರದ ಮೇಲೆ ಕವಿನಿಆ ಅನುಮೋದನೆಗೆ ಒಳಪಟ್ಟಂತೆ ಏಪ್ರಿಲ್ 2017 ರಿಂದ ಮಾರ್ಚ್ 2019ರವರೆಗಿನ ಹಣಕಾಸು ವರ್ಷಗಳಲ್ಲಿ ಅಂತರ ರಾಜ್ಯ ಮಾರ್ಗಗಳಲ್ಲದ ಪ್ರಸರಣ ಮಾರ್ಗಗಳಿಗೆ ರೂ.3185.48 ಲಕ್ಷವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಇದರಿಂದ ಹಣಕಾಸಿನ ಮೇಲೆ ಪರಿಣಾಮಕಾರಿಯಾದ ಪರಿಣಾಮ ಬೀರುವುದು.

18) ಟಿಪ್ಪಣಿ ಸಂಖ್ಯೆ 25.4, ಕರ್ನಾಟಕ ಸರ್ಕಾರದ ಆದೇಶದ ದಿನಾಂಕ:24/07/2019ರ ಪ್ರಕಾರ ಮತ್ತು ಕಂಪನಿಯ ಆಂತರಿಕ ಸುತ್ತೋಲೆ ದಿನಾಂಕ:16.08.2018ರ ಪ್ರಕಾರ NHAI ನಿಂದ ಶೇ.2.50% ಬದಲಿಗೆ ಶೇ.10% ರಂತೆ ಮೇಲ್ವಿಚಾರಣಾ ಶುಲ್ಕ ಸಂಗ್ರಹ ಮಾಡಿರುವುದು, ಹಣಕಾಸಿನ ಮೇಲೆ ಪರಿಣಾಮಕಾರಿಯಾದ ಪರಿಣಾಮ ಬೀರುವುದು.

19) ಟಿಪ್ಪಣಿ ಸಂಖ್ಯೆ 26 ರಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳಿಂದ ಪ್ರಸರಣ ವ್ಯವಸ್ಥೆ ಲಭ್ಯತೆಗಾಗಿ ಪಡೆದ ಪ್ರೋತ್ಸಾಹದ ರೂ.2211.00 ಲಕ್ಷಗಳ ಮೊತ್ತದ ಬಳಕೆಗೆ ಹಾಗೂ ಸಾಧನಗಳು ಮತ್ತು ಯಂತ್ರೋಪಕರಣಗಳಲ್ಲಿ ತಾಂತ್ರಿಕ ಪ್ರಗತಿಯನ್ನು ಅಳವಡಿಸಿಕೊಳ್ಳಲು ಮತ್ತು ಅದರ ಅಧಿಕಾರಿ ಮತ್ತು ಉದ್ಯೋಗಿಗಳಿಗೆ ಕಾರ್ಯಕ್ಷಮತೆಯಲ್ಲಿ ಸುಧಾರಿತ ತರಬೇತಿಯನ್ನು ಚಾಲನೆಗೊಳಿಸಲು ಹಾಗೂ ಅವರ ದಕ್ಷತೆಯನ್ನು ಹೆಚ್ಚಿಸುವ ವಿಷಯದಲ್ಲಿ ಸಂಬಂಧಿಸಿದ ದಾಖಲೆಗಳ ಕೊರತೆಯಿಂದ ಹಣಕಾಸಿನ ಹೇಳಿಕೆಯ ಮೇಲೆ ಪರಿಣಾಮಕಾರಿ ಪರಿಣಾಮ ಬೀರುತ್ತದೆ.

20) ಟಿಪ್ಪಣಿ ಸಂಖ್ಯೆ 37.9ರಲ್ಲಿ IND-AS 37 ನಿಬಂಧನೆಗಳು, ನಿರಂತರ ಹೊಣೆಗಾರಿಕೆಗಳು ಮತ್ತು ನಿರಂತರ ಸ್ವತ್ತುಗಳ ಸಾಕಷ್ಟು ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ಕಂಪನಿಯು ನೀಡಿರುವ ಬ್ಯಾಂಕ್ ಗ್ಯಾರಂಟಿ ಮತ್ತು ಎಲ್‌ಸಿ ಗಳಿಗೆ ದಾಖಲೆಗಳ ಲಭ್ಯತೆ ಇರುವುದಿಲ್ಲ.

21) ಟಿಪ್ಪಣಿ ಸಂಖ್ಯೆ 23.2 ಮತ್ತು 27.5 ರಲ್ಲಿ ಮಾಸಿಕ ಪಿಂಚಣಿ / ಉಪದಾನ ಕೊಡುಗೆಗೆ ಸಂಬಂಧಿಸಿದಂತೆ ವಾಸ್ತವಿಕ ಮೌಲ್ಯಮಾಪನವು ಬಾಕಿ ಉಳಿದಿರುವ ಬಗ್ಗೆ ಕವಿಪ್ರನಿನಿ ಮತ್ತು ಎಸ್ಕಾಂ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಒದಗಿಸಿದ ದರಗಳ ಪ್ರಕಾರ ಲೆಕ್ಕಹಾಕಲಾಗುತ್ತದೆ.

22) ಟಿಪ್ಪಣಿ 4 ಮತ್ತು 4.1 (ಕ್ರ.ಸಂ 2 ಮತ್ತು 3) ರಲ್ಲಿ ಆದಾಯ ತೆರಿಗೆ ಮರುಪಾವತಿ ಸ್ವೀಕೃತಿ ಮತ್ತು ಮುಂಗಡ ಆದಾಯ ತೆರಿಗೆ ಮತ್ತು ಟಿಡಿಎಸ್ ಸ್ವೀಕೃತಿ ಮತ್ತು ತೆರಿಗೆ ವಿಧಿಸುವಿಕೆಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಸಲ್ಲಿಕೆ ಮತ್ತು ಆದಾಯ ತೆರಿಗೆ ಮೌಲ್ಯಮಾಪನ ಆದೇಶಗಳಿಗೆ ಮತ್ತು ಮರುಪಾವತಿ ಸ್ವೀಕೃತಿ / ಹೊಂದಿಸಿರುವುದಕ್ಕೆ ಹೊಂದಾಣಿಕೆ ಮಾಡಿರುವುದಿಲ್ಲ.

**ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು**

ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು, ನಮ್ಮ ವೃತ್ತಿಪರ ತೀರ್ಪಿನಲ್ಲಿ, ನಮ್ಮ ಲೆಕ್ಕಪರಿಶೋಧನೆಯಲ್ಲಿ ಪ್ರಸ್ತುತ ಅವಧಿಯ ಹಣಕಾಸು ಹೇಳಿಕೆಗಳು ಹೆಚ್ಚು ಮಹತ್ವದ್ದಾಗಿವೆ. ಒಟ್ಟಾರೆಯಾಗಿ ನಮ್ಮ ಲೆಕ್ಕಪರಿಶೋಧನೆಯ ಹಣಕಾಸಿನ ಹೇಳಿಕೆಗಳ ಸಂದರ್ಭದಲ್ಲಿ ಮತ್ತು ಅದರ ಮೇಲೆ ನಮ್ಮ ಅಭಿಪ್ರಾಯವನ್ನು ರೂಪಿಸುವಲ್ಲಿ ಈ ವಿಷಯಗಳನ್ನು ತಿಳಿಸಲಾಗಿದೆ ಮತ್ತು ಈ ವಿಷಯಗಳ ಬಗ್ಗೆ ನಾವು ಪ್ರತ್ಯೇಕ ಅಭಿಪ್ರಾಯವನ್ನು ನೀಡುವುದಿಲ್ಲ.

ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳ ವರದಿಯ ಎಸ್‌ಎ 701ರ ಪ್ರಕಾರ, ಕೀಆಡಿಟ್ ವಿಷಯಗಳು ಕಂಪನಿಗೆ ಅನ್ವಯವಾಗುವುದಿಲ್ಲ ಏಕೆಂದರೆ ಇದು ಪಟ್ಟಿಮಾಡದ ಕಂಪನಿಯಾಗಿದೆ.

**IND AS ಹಣಕಾಸು ಹೇಳಿಕೆಗಳು ಮತ್ತು ಲೆಕ್ಕಪರಿಶೊಧಕರ ವರದಿಯನ್ನು ಹೊರತುಪಡಿಸಿ ಮಾಹಿತಿ**

ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿಯ ತಯಾರಿಕೆಗೆ ಕಾರಣವಾಗಿದೆ. ಇತರೆ ಮಾಹಿತಿಯು ನಿರ್ವಹಣಾ ಚರ್ಚೆ ಮತ್ತು ವಿಶ್ಲೇಷಣೆಯಲ್ಲಿ ಒಳಗೊಂಡಿರುವ ಮಾಹಿತಿಯನ್ನು ಒಳಗೊಂಡಿದೆ, ಮಂಡಳಿಯ ವರದಿಗೆ ಅನುಬಂಧಗಳು, ವ್ಯವಹಾರ ಜವಾಬ್ದಾರಿ ವರದಿ, ಕಾರ್ಪೊರೇಟ್ ಆಡಳಿತ ಮತ್ತು ಷೇರುದಾರರ ಮಾಹಿತಿ ಸೇರಿದಂತೆ ಮಂಡಳಿಯ ವರದಿ, ಆದರೆ IND AS ಹಣಕಾಸು ಹೇಳಿಕೆಗಳು ಮತ್ತು ನಮ್ಮ ಲೆಕ್ಕಪರಿಶೋಧಕರ ವರದಿಯನ್ನು ಒಳಗೊಂಡಿಲ್ಲ. ಮೇಲೆ ಗುರುತಿಸಲಾದ ಇತರ ಮಾಹಿತಿಯು ಈ ಲೆಕ್ಕ ಪರಿಶೋಧಕರ ವರದಿಯ ದಿನಾಂಕದ ನಂತರ ನಮಗೆ ಲಭ್ಯವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

IND AS ಹಣಕಾಸು ಹೇಳಿಕೆಗಳ ಬಗ್ಗೆ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಂಡಿರುವುದಿಲ್ಲ ಮತ್ತು ಅದರ ಮೇಲೆ ನಾವು ಯಾವುದೇ ರೀತಿಯ ಭರವಸೆ ತೀರ್ಮಾನವನ್ನು ವ್ಯಕ್ತಪಡಿಸುವುದಿಲ್ಲ.

IND AS ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಇತರ ಮಾಹಿತಿಯು ಲಭ್ಯವಾದಾಗ ಅದನ್ನು ಓದುವುದು ನಮ್ಮ ಜವಾಬ್ದಾರಿಯಾಗಿದೆ ಮತ್ತು ಹಾಗೆ ಮಾಡುವಾಗ, ಇತರ ಮಾಹಿತಿಯು IND AS ಹಣಕಾಸು ಹೇಳಿಕೆಗಳೊಂದಿಗೆ ಭೌತಿಕವಾಗಿ ಹೊಂದಾಣಿಕೆಯಾಗುತ್ತದೆಯೇ ಅಥವಾ ಈ ಸಮಯದಲ್ಲಿ ಪಡೆದ ನಮ್ಮ ಜ್ಞಾನವನ್ನು ಪರಿಗಣಿಸಿ ನಮ್ಮ ಲೆಕ್ಕಪರಿಶೋಧನೆಯ ಕೋರ್ಸ್ ಅಥವಾ ಭೌತಿಕವಾಗಿ ತಪ್ಪಾಗಿ ಅರ್ಥೈಸಲ್ಪಟ್ಟಿದೆ. ಈ ನಿಟ್ಟಿನಲ್ಲಿ ನಾವು ವರದಿ ಮಾಡಲು ಏನೂ ಇರುವುದಿಲ್ಲ.

**IND-AS ನ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ:**

ಕಂಪನಿ ಅಧಿನಿಯಮ(ಅಧಿನಿಯಮ), 2013ರ ಪರಿಚ್ಛೇಧ 134(5)ರಲ್ಲಿ ಸೂಚಿಸಿರುವಂತೆ, ಹಾಗೂ ಕಂಪನಿ (ಲೆಕ್ಕಗಳು)ನಿಯಮಾವಳಿಗಳು, 2014ರ ನಿಯಮ 7ರೊಂದಿಗೆ ಅನ್ವಯಿಸಲ್ಪಟ್ಟ ಅಧಿನಿಯಮದ ಪರಿಚ್ಛೇಧ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕವಿಧಾನದಂತೆ, ಭಾರತದಲ್ಲಿ ಸರ್ವಸಾಮಾನ್ಯವಾಗಿ ಒಪ್ಪಿತವಾಗಿರುವ ಲೆಕ್ಕಪದ್ಧತಿಗಳ ಪ್ರಕಾರ ಮತ್ತು IND-AS ರನ್ವಯ ಕಂಪನಿಯ ಆರ್ಥಿಕ ಸ್ಥಿತಿ, ಸಮಗ್ರ ಆದಾಯವನ್ನೊಳಗೊಂಡ ಆರ್ಥಿಕ ಸಾಧನೆ, ನಗದಿನ ಹರಿವು ಹಾಗೂ ಕಂಪನಿಯ ಬಂಡವಾಳದಲ್ಲಿನ ಬದಲಾವಣೆ ಬಗ್ಗೆ ನೈಜ ಹಾಗೂ ತೃಪ್ತಿಕರ ಮಾಹಿತಿಯುಳ್ಳ ಈ IND-AS ಆರ್ಥಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ವರ್ಗಕ್ಕೆ ಸಂಬಂಧಿಸಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು ಅಧಿನಿಯಮದ ಅವಕಾಶಗಳ ಪ್ರಕಾರ ಅಗತ್ಯ ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲಾತೀತ ನಿರ್ವಹಣೆ, ಮೋಸ, ವಂಚನಾತೀತ ಹಾಗೂ ಇತರ ನಿಯಮವಿರುದ್ಧವಾದವುಗಳನ್ನು ಪತ್ತೆ ಹಚ್ಚಿ ತಡೆಗಟ್ಟುವುದು, ಸೂಕ್ತ ಲೆಕ್ಕಪದ್ಧತಿ ತತ್ವಗಳನ್ನು ಆಯ್ಕೆ ಮಾಡಿ ಅನ್ವಯಿಸುವುದು, ವಿವೇಚನಾತೀತ ಹಾಗೂ ದೂರದೃಷ್ಟಿಯುಳ್ಳ ಅಂದಾಜು ಹಾಗೂ ತೀರ್ಮಾನ ತೆಗೆದುಕೊಳ್ಳುವುದು, ನಿಖರತೆ ಹಾಗೂ ಪರಿಪೂರ್ಣತೆಯ ಲೆಕ್ಕಪತ್ರ ದಾಖಲೆಗಳನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ವಿನ್ಯಾಸ, ಅನುಷ್ಠಾನ ಹಾಗೂ ನೈಜ ಮತ್ತು ತೃಪ್ತಿಕರ ಮಾಹಿತಿಗಳನ್ನು ಬಿಂಬಿಸುವ ಆಂತರಿಕ ಆರ್ಥಿಕ ನಿಯಂತ್ರಣ, ನೈಜ ಹಾಗೂ ನ್ಯಾಯಸಮ್ಮತ ದೃಷ್ಟಿಯನ್ನು ಬೀರುವ IND-AS ಆರ್ಥಿಕ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಅವು ಮೋಸ, ವಂಚನೆಗಳಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡು, ಮಂಡಿಸುವುದು ಇಂತಹವುಗಳನ್ನು ಒಳಗೊಂಡಿದೆ.

IND AS ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ, ಕಂಪನಿಯ ಮುಂದುವರೆಸುವ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವ ನಿರ್ಣಯವು ಹಾಗೂ ಮುಂದುವರೆಸುವ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಪಡಿಸುವುದು ನಿಗಮದ ಜವಾಬ್ದಾರಿಯಾಗಿದ್ದು ಮತ್ತು ಇದರ ಬಳಕೆಯ ಲೆಕ್ಕ ಪತ್ರದ ನಿರ್ವಹಣೆಯ ಆಧಾರದ ಮೇರೆಗೆ ಕಂಪನಿಯನ್ನು ದಿವಾಳಿಯಾಗಿಸಲು ಉದ್ದೇಶಿಸದ ಹೊರತು ಅಥವಾ ಕಾರ್ಯಚರಣೆಗಳನ್ನು ನಿಲ್ಲಿಸಲು, ಅಥವಾ ಹಾಗೆ ಮಾಡಲು ವಾಸ್ತವಿಕ ಪರ್ಯಾಯವನ್ನು ಹೊಂದಿಲ್ಲ.

ಕಂಪನಿಯ ಹಣಕಾಸು ವರದಿಯ ಮೇಲ್ವಿಚಾರಣೆ ಮಡುವ ಜವಾಬ್ದಾರಿಯನ್ನು ನಿರ್ದೇಶಕರ ಮಂಡಳಿಯು ಹೊಂದಿದೆ.

**ಲೆಕ್ಕಪರಿಶೋಧಕರ ಜವಾಬ್ದಾರಿ**

ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ವರದಿಯಲ್ಲಿ ಒಟ್ಟಾರೆಯಾಗಿ IND AS ಹಣಕಾಸು ಹೇಳಿಕೆಗಳು ವಂಚನೆ ಅಥವಾ ದೋಷದಿಂದಾಗಿ ಮತ್ತು ಲೆಕ್ಕಪರಿಶೋಧಕರ ವರದಿಯ ನೀಡುವ ಕುರಿತು ತಪ್ಪು ಗ್ರಹಿಕೆಯಿಂದ ಮುಕ್ತವಾಗಿದೆಯೇ ಎಂಬುದರ ಬಗ್ಗೆ ಸಮಂಜಸವಾದ ಭರವಸೆ ಪಡೆಯುವುದು ನಮ್ಮ ಉದ್ದೇಶವಾಗಿರುತ್ತದೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಆಶ್ವಾಸನೆಯಾಗಿದ್ದು ಎಸ್‌ಎ ಗಳಿಗೆ ಅನುಗುಣವಾಗಿ ನಡೆಸಿದ ಲೆಕ್ಕ ಪರಿಶೋಧನೆಯು ಅಸ್ಥಿತ್ವದಲ್ಲಿರುವ ಎಲ್ಲಾ ವಸ್ತು ಪತ್ತೆಯಾಗುತ್ತದೆ ಎಂದು ಖಾತರಿ ಪಡಿಸಲಾಗುವುದಿಲ್ಲ. ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ತಪ್ಪುಗಳು ವಂಚನೆ ಅಥವಾ ದೋಷದಿಂದಾಗಿ ಉದ್ಭವಿಸಬಹುದು ಮತ್ತು ಅವುಗಳನ್ನು ಪರಿಗಣಿಸಲಾಗುತ್ತದೆ. IND AS ಹಣಕಾಸು ಹೇಳಿಕೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳು ಪ್ರಭಾವ ಬೀರುತ್ತದೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

ಲೆಕ್ಕಪರಿಶೋಧನೆಯ ಭಾಗವಾಗಿ ಎಸ್‌ಎಗಳಿಗೆ ಅನುಗುಣವಾಗಿ, ನಾವು ವೃತ್ತಿಪರ ತೀರ್ಪನ್ನು ನೀಡುತ್ತೇವೆ ಮತ್ತು ಲೆಕ್ಕಪರಿಶೋಧನೆಯ ಉದಕ್ಕೂ ವೃತ್ತಿಪರ ಸಂದೇಹವನ್ನು ಕಾಪಾಡಿಕೊಳ್ಳುತೇವೆ. ನಾವು ಕೂಡ:

1. ವಂಚನೆ ಅಥವಾ ದೋಷದಿಂದಾಗಿ IND AS ಹಣಕಾಸು ಹೇಳಿಕೆಗಳ ಆಸ್ತಿ ತಪ್ಪು ತಿಳುವಳಿಕೆಯ ಅಪಾಯಗಳನ್ನು ಗುರುತಿಸಿ ಮತ್ತು ನಿರ್ಣಯಿಸಿ, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಿ ಮತ್ತು ನಿರ್ವಹಿಸಿ, ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧಕ ಸಾಕ್ಷ್ಯಗಳನ್ನು ಪಡೆದುಕೊಳ್ಳುವುದು. ವಂಚನೆಯಿಂದ ಒಂಟಾಗುವ ತಪ್ಪು ಗ್ರಹಿಕೆಯನ್ನು ಪತ್ತೆ ಮಾಡದಿರುವ ಅಪಾಯವು ದೋಷದಿಂದ ಉಂಟಾಗುವ ಲೋಪಕ್ಕಿಂತ ಹೆಚ್ಚಾಗಿರುತ್ತದೆ, ಏಕೆಂದರೆ ವಂಚನೆಯ ಒಡನಾಟ, ಖೋಟಾ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು ಒಳಗೊಂಡಿರಬಹುದು.
2. ಸೂಕ್ತವಾದ ಲೆಕ್ಕಪರಿಶೊಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸುವ ಸನ್ನಿವೇಶಗಳಲ್ಲಿ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಳ್ಳುವುದು. ಕಂಪನಿಯ ಕಾಯ್ದೆ 2013ರ ಸೆಕ್ಷನ್ 143(3)(ಐ) ಅಡಿಯಲ್ಲಿ, ಕಂಪನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರ್ಯತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ.
3. ಲೆಕ್ಕಪರಿಶೋಧಕ ನೀತಿಗಳ ಸೂಕ್ತತೆಯ ಬಳಕೆ ಮತ್ತು ಲೆಕ್ಕಪತ್ರಗಳ ಅಂದಾಜುಗಳ ಸಮಂಜಸತೆ ಮತ್ತು ನಿರ್ವಹಣೆಯಿಂದ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳನ್ನು ಮೌಲ್ಯಮಾಪನ ಮಾಡುವುದು.
4. ಲೆಕ್ಕಪರಿಶೋಧನೆಯ ಕಾಳಜಿಯ ಆಧಾರವನ್ನು ನಿರ್ವಹಣೆಯ ಸೂಕ್ತತೆಯ ಬಗ್ಗೆ ತೀರ್ಮಾನಿಸಿ ಮತ್ತು ಪಡೆದ ಲೆಕ್ಕಪರಿಶೋಧನೆಯ ಸಾಕ್ಷ್ಯಗಳ ಆಧಾರದ ಮೇಲೆ, ಘಟನೆಗಳು ಅಥವಾ ಷರತ್ತುಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯು ಅಸ್ಥಿತ್ವದಲ್ಲಿದೆಯೆ ಎಂದು ಕಂಪನಿಯು ಮುಂದುವರಿಯುವ ಸಾಮರ್ಥ್ಯದ ಮೇಲೆ ಗಮನಾರ್ಹ ಅನುಮಾನವನ್ನು ಉಂಟುಮಾಡಬಹುದು. ಅನಿಶ್ಚಿತತೆಯು ಅಸ್ಥಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ IND AS ಹಣಕಾಸು ಹೇಳಿಕೆಗಳಲ್ಲಿನ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳಿಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗಿದೆ ಅಥವಾ ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಲು ನಮ್ಮ ತೀರ್ಮಾನಗಳು ಲೆಕ್ಕಪರಿಶೊಧಕರ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನೆಯ

ಪುರಾವೆಗಳನ್ನು ಆಧರಿಸಿವೆ. ಆದಾಗ್ಯೂ ಭವಿಷ್ಯದ ಘಟನೆಗಳು ಅಥವಾ ಷರತ್ತುಗಳು ಕಂಪನಿಯು ಮುಂದುವರಿಯುವುದನ್ನು ನಿಲ್ಲಿಸಲು ಕಾರಣವಾಗಬಹುದು.

5. IND AS ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಿಷಯವನ್ನು ಮೌಲ್ಯಮಾಪನ ಮಾಡಿ ಬಹಿರಂಗಪಡಿಸುವಿಕೆಗಳನ್ನು ಒಳಗೊಂಡಂತೆ ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ IND AS ಹಣಕಾಸು ಹೇಳಿಕೆಗಳು ಆಧಾರವಾಗಿರುವಂತೆ ವಹಿವಾಟುಗಳು ಮತ್ತು ಘಟನೆಗಳನ್ನು ಪ್ರತಿನಿಧಿಸುತ್ತವೆಯೆ.

"ಅರ್ಹ ಅಭಿಪ್ರಾಯಕ್ಕಾಗಿ ಆಧಾರ" ಪ್ಯಾರಾಗಳಲ್ಲಿ ಹೇಳಿರುವಂತೆ ಹೊರತುಪಡಿಸಿ, ಸ್ವತಂತ್ರ ಹಣಕಾಸು ಹೇಳಿಕೆಗಳ ಕುರಿತು ನಮ್ಮ ಅರ್ಹ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ನಮ್ಮಿಂದ ಪಡೆದ ಲೆಕ್ಕಪರಿಶೊಧನೆಯ ಪುರಾವೆಗಳು ಸಾಕಷ್ಟು ಮತ್ತು ಸೂಕ್ತವೆಂದು ನಾವು ನಂಬುತ್ತೇವೆ.

ನಮ್ಮ ಲೆಕ್ಕಪರಿಶೊಧನೆಯ ಸಮಯದಲ್ಲಿ ನಾವು ಗರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನ್ಯತೆಗಳನ್ನು ಒಳಗೊಂಡಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ವದ ಲೆಕ್ಕ ಪರಿಶೋಧನೆಯ ಆವಿಷ್ಕಾರಗಳ ಬಗ್ಗೆ ನಾವು ಆಡಳಿತ ಆರೋಪ ಹೊಂದಿರುವವರೊಂದಿಗೆ ಸಂವಹನ ನಡೆಸುತ್ತೇವೆ.

ಆಡಳಿತ ಆರೋಪ ಹೊತ್ತಿರುವವರಿಗೆ ನಾವು ಸ್ವಾತಂತ್ರ್ಯದ ಬಗ್ಗೆ ಸಂಬಂಧಿಸಿದ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಮತ್ತು ನಮ್ಮ ಸ್ವಾತಂತ್ರ್ಯದ ಬಗ್ಗೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ ಸಂಬಂಧಗಳು ಮತ್ತು ಇತರೆ ವಿಷಯಗಳನ್ನು ಅವರೊಂದಿಗೆ ಸಂವಹನ ನಡೆಸುತ್ತೇವೆ ಮತ್ತು ಅನ್ವಯವಾಗುವ, ಸಂಬಂಧಿತ ಸುರಕ್ಷತೆಗಳನ್ನು ಒದಗಿಸುತ್ತೇವೆ. ಆಡಳಿತದ ಆರೋಪ ಹೊಂದಿರುವವರೊಂದಿಗೆ ಸಂವಹನ ನಡೆಸುವ ವಿಷಯಗಳಿಂದ, ಪ್ರಸ್ತುತ ಅವಧಿಯ IND AS ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಮಹತ್ವದ್ದಾಗಿರುವ ವಿಷಯಗಳನ್ನು ನಾವು ನಿರ್ಧರಿಸುತ್ತೇವೆ ಮತ್ತು ಆದ್ದರಿಂದ ಅವು ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳಾಗಿವೆ. ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಈ ವಿಷಯಗಳನ್ನು ನಾವು ವಿವರಿಸುತ್ತೇವೆ ಹೊರತು ಕಾನೂನು ಅಥವಾ ನಿಯಂತ್ರಣವು ಈ ವಿಷಯದ ಬಗ್ಗೆ ಸಾರ್ವಜನಿಕವಾಗಿ ಬಹಿರಂಗಪಡಿಸುವುದನ್ನು ತಡೆಯುತ್ತದೆ ಅಥವಾ ಯಾವಾಗ, ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ನಮ್ಮ ವರದಿಯಲ್ಲಿ ವಿಷಯವನ್ನು ಸಂವಹನ ಮಾಡಬಾರದು ಎಂದು ನಾವು ನಿರ್ಧರಿಸುತ್ತೇವೆ, ಏಕೆಂದರೆ ಹಾಗೆ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳು ಸಮಂಜಸವಾಗಿ ನಿರೀಕ್ಷಿಸಬಹುದು ಅಂತಹ ಸಂವಹನದ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರಿಸುತ್ತದೆ.

**ಇತರೆ ಕಾನೂನು ಮತ್ತು ನಿಯಂತ್ರಕ ಅವಶ್ಯಕತೆಗಳ ಮೇಲೆ ವರದಿ:**

1. ಕಾಯ್ದೆಯ ಪ್ರಕರಣ 143(11)ರನ್ವಯ ಕೇಂದ್ರ ಸರ್ಕಾರದಿಂದ ಹೊರಡಿಸಲ್ಪಟ್ಟ ಕಂಪನಿ (ಲೆಕ್ಕ ಪರಿಶೋಧಕ ವರದಿ) ಆದೇಶ, 2016 ರ ಪ್ರಕಾರ, ಕಂಡಿಕೆ 3 ಮತ್ತು 4 ರಲ್ಲಿ ನಿಗದಿಪಡಿಸಿರುವ ವಿಷಯಗಳ ಮೇಲೆ ನಾವು ಅನುಬಂಧ – "ಎ" ರಲ್ಲಿ ವಿವರಣೆಯನ್ನು ನೀಡಿರುತ್ತೇವೆ. ಇದು ನಮ್ಮ ಲೆಕ್ಕಪರಿಶೋಧನಾ ವರದಿಯ "ಅರ್ಹ ಅಭಿಪ್ರಾಯಕ್ಕಾಗಿ ಆಧಾರ" ಪ್ಯಾರಾಗಳಲ್ಲಿ ವಿವರಿಸಿದ ವಿಷಯಗಳ ಪರಿಣಾಮಗಳು / ಸಂಭವನೀಯ ಪರಿಣಾಮಗಳಿಗೆ ಒಳಪಟ್ಟಿರುತ್ತದೆ ಮತ್ತು ಆಂತರಿಕ ಹಣಕಾಸು ನಿಯಂತ್ರಣಗಳ ಕುರಿತು ನಮ್ಮ ಪ್ರತ್ಯೇಕ ವರದಿಯಲ್ಲಿ "ಅರ್ಹ ಅಭಿಪ್ರಾಯಕ್ಕಾಗಿ ಆಧಾರ" ಕಂಡಿಕೆಯಲ್ಲಿ ವಿವರಿಸಿರುವ ಸಾಮಗ್ರಿ ನ್ಯೂನ್ಯತೆ ಹಣಕಾಸು ಹೇಳಿಕೆಗಳಿಗೆ ಉಲ್ಲೇಖಿಸಲಾಗಿದೆ.
2. ಕಾಯ್ದೆಯ ಪ್ರಕರಣ 143(3) ರಲ್ಲಿ ಅಗತ್ಯ ಪಡಿಸುವಂತೆ ಹೀಗೆ ವರದಿ ಸಲ್ಲಿಸುತ್ತೇವೆ:
    ಅ) ವಿಷಯಗಳು/ಪರಿಣಾಮಗಳು/ಪರಿಮಿತಿ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅರಿವು ಮತ್ತು ನಂಬಿಕೆಗೆ ಅವಶ್ಯವಿರುವಂತೆ ಲೆಕ್ಕ ಪರಿಶೋಧನೆ ವರದಿ ಉದ್ದೇಶಕ್ಕೆ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಯನ್ನು ನಾವು ಕೋರಿರುತ್ತೇವೆ.
    ಆ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ನಾವು ಪುಸ್ತಕಗಳನ್ನು ತನಿಖೆ ಮಾಡಿರುವ ಪ್ರಕಾರ, ಕಂಪನಿಯು ಕಾನೂನಿಗೆ ಅವಶ್ಯವಾದ ಸೂಕ್ತ ಪ್ರಕಾರದ ಲೆಕ್ಕಪುಸ್ತಕಗಳನ್ನು ಹೊಂದಿದೆ.

ಇ) ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ಪರಿಶೀಲಿಸಿದಂತೆ ಆರ್ಥಿಕ ವಿವರಣಪಟ್ಟಿಯು ಲೆಕ್ಕದ ವಹಿ ಜೊತೆ ಹೊಂದಾಣಿಕೆಯಾಗುತ್ತದೆ.

ಈ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳು, ನಮ್ಮ ಅಭಿಪ್ರಾಯದಂತೆ, ಮೇಲೆ ತಿಳಿಸಿರುವ ಇಂಡ್–ಎಎಸ್ ಆರ್ಥಿಕ ವಿವರಣಾಪಟ್ಟಿ ಹೇಳಿಕೆಗಳು, ಅಧಿನಿಯಮದ ಪ್ರಕರಣ 133 ಮತ್ತು ಅದರಡಿ ಹೊರಡಿಸಲಾದ ನಿಯಮಾವಳಿಗಳೊಂದಿಗೆ ಓದಿಕೊಂಡಂತೆ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿರುವುದಿಲ್ಲ.

ಉ) ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ದಿನಾಂಕ 5ನೇ ಜೂನ್, 2015 ರಂದು ಹೊರಡಿಸಿದ ಜಿಎಸ್‌ಆರ್–463(ಇ) ರ ಪ್ರಕಾರ, ಕಂಪನಿಯು ಸರ್ಕಾರಿ ಸಂಸ್ಥೆಯಾಗಿರುವುದರಿಂದ ನಿರ್ದೇಶಕರ ಅನರ್ಹತೆಯು ಕಂಪನಿಗಳ ಕಾಯಿದೆ, 2013ರ ಪ್ರಕರಣ 164(2) ರಂತೆ ನಿರ್ದೇಶಕರ ಅನರ್ಹತೆಯು ಅನ್ವಯಿಸುವುದಿಲ್ಲ.

ಊ) ಲೆಕ್ಕಪತ್ರ ಹಾಗೂ ತತ್ಸಂಬಂಧ ದಾಖಲೆ ದಸ್ತಾವೇಜುಗಳ ನಿರ್ವಹಣೆಗೆ ಸಂಬಂಧಿಸಿದ ಅರ್ಹತಾದಾಯಕಗಳು, ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಕಂಡಿಕೆಗಳಲ್ಲಿ ತಿಳಿಯಪಡಿಸಿರುವ ಪ್ರಕಾರ ಇವೆ.

ಋ) ಕಂಪನಿಯ ಆರ್ಥಿಕ ನಿರೂಪಣಾ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗೆ ಸಂಬಂಧಿಸಿದಂತೆ, "ಅನುಬಂಧ–ಬಿ" ನಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ಪರಾಮರ್ಶಿಸುವುದು.

ಎ) ಕಂಪನಿಯ (ಲೆಕ್ಕಪರಿಶೋಧನೆ ಹಾಗೂ ಲೆಕ್ಕ ಪರಿಶೋಧಕರು)ನಿಯಮಗಳು, 2014ರ ನಿಯಮ 11ರ ಪ್ರಕಾರ, ಲೆಕ್ಕಪರಿಶೋಧಕರ ವರದಿಯಲ್ಲಿ ಒಳಪಡಿಸಬೇಕಾದ ಇತರ ವಿಷಯಾಂಶಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಂತೆ, ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ:

i. ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಗಳ ವಿನಃ, ಕಂಪನಿಯು ಆರ್ಥಿಕ ನಿರೂಪಣಾಪಟ್ಟಿಯ ಟಿಪ್ಪಣಿ 37.9 ಮತ್ತು 37.10 ರಲ್ಲಿ ವಿವರಿಸಿರುವಂತೆ, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಅದರ ಆರ್ಥಿಕ ಪರಿಸ್ಥಿತಿಯ ಮೇಲೆ ಅಂದಾಜು ಮಾಡಿರುವಂತೆ ಅದರ ಪರಿಣಾಮವನ್ನು ಪ್ರಕಟಿಸಿದೆ.

ii. ಕಂಪನಿಯು ಭವಿಷ್ಯದಲ್ಲಿ ಸಂಭವಿಸಬಹುದಾದ ಯಾವುದೇ ನಿಷ್ಪತ್ತಿ (foreseeable) ನಷ್ಟವನ್ನು ಉಂಟುಮಾಡಬಹುದಾದ ಯಾವುದೇ ದೀರ್ಘಾವಧಿ ಗುತ್ತಿಗೆಯನ್ನು ಹೊಂದಿರುವುದಿಲ್ಲ.

iii. ಕಂಪನಿಯು ಹೂಡಿಕೆದಾರರ ತಿಳುವಳಿಕೆ ಹಾಗೂ ಸುರಕ್ಷತೆ ನಿಧಿಗೆ ಯಾವುದೇ ಮೊತ್ತವನ್ನು ವರ್ಗಾಯಿಸುವ ಅಗತ್ಯತೆ ಇರುವುದಿಲ್ಲ.

ಏ) ಕಂಪನಿಯ ಕಾಯ್ದೆಯ ಪ್ರಕರಣ 143(5) ರ ಪ್ರಕಾರ, ನಾವು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ಹೊರಡಿಸಿರುವ ನಿರ್ದೇಶನದ ಮೇಲೆ ತೆಗೆದುಕೊಂಡಿರುವ ಕ್ರಮವನ್ನು ಪರಿಶೀಲಿಸಿರುತ್ತೇವೆ ಮತ್ತು ಕಂಪನಿಯ ಲೆಕ್ಕ ಮತ್ತು ಆರ್ಥಿಕ ನಿರೂಪಣಾಪಟ್ಟಿಯ ಮೇಲೆ ಅದರ ಪರಿಣಾಮವನ್ನು ಅನುಬಂಧ–"ಸಿ" ಯಲ್ಲಿ ನೀಡಲಾಗಿದೆ

**ಬಿ.ಪಿ.ರಾವ್ ಮತ್ತು ಕಂಪನಿ**
ಸನ್ನದಿತ ಲೆಕ್ಕಿಗರು
ಸಂಸ್ಥೆ ನೋ.ಸಂ:003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನಮ್ಮ ವರದಿಯ ಸಮ ಸಂಖ್ಯೆ ದಿನಾಂಕದ ಕಂಡಿಕೆ 1 ರಲ್ಲಿ "ಇತರೆ ಕಾನೂನು ಮತ್ತು ನಿಯಂತ್ರಿತ ಅಗತ್ಯತೆಗಳು" ರಲ್ಲಿ ಉಲ್ಲೇಖಿಸಲ್ಪಟ್ಟ ಅನುಬಂಧ – A

**I. ನಿಶ್ಚಿತ ಆಸ್ತಿಗಳು (ಪ್ರಸ್ತುತ ಆಸ್ತಿ, ಸ್ಥಾವರ ಮತ್ತು ಉಪಕರಣಗಳೆಂದು ಉಲ್ಲೇಖಿಸಲಾಗಿದೆ)**

ಅ) ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಆಸ್ತಿಯ ಪರಿಮಾಣ, ಸ್ಥಳ ಹಾಗೂ ಇತರೆ ವಿವರಗಳನ್ನು ತೋರಿಸುವ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು, ಕಂಪನಿಯು ಈ ಕೆಳಕಂಡ ಸ್ವತ್ತುಗಳ ವಿಷಯದಲ್ಲಿ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

1) ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ಭೂಮಿಯನ್ನು ಸ್ವತಂತ್ರ ಹಿಡುವಳಿ ಅಥವಾ ಗುತ್ತಿಗೆ ಹಿಡುವಳಿಗೆ ಸಂಬಂಧಿಸಿದಂತೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

2) ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ಆಸ್ತಿ (ಭೂಮಿಯನ್ನೊಳಗೊಂಡಂತೆ) ಭೂಮಿಯನ್ನು ಕಡಿತ ದರದಲ್ಲಿ/ ಉಚಿತವಾಗಿ ಸರ್ಕಾರದಿಂದ/ ಗ್ರಾಹಕರಿಂದ ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

ಆ)

i. ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ವಿದ್ಯುತ್ ಮಾರ್ಗಗಳಂತಹ ಆಸ್ತಿಗಳು ಅರಣ್ಯ ಪ್ರದೇಶ ಹಾಗೂ ರಾಜ್ಯಾದ್ಯಂತ ವಿಸ್ತೃತಗೊಂಡು, ನಿರಂತರವಾಗಿ ಕಾರ್ಯನಿರ್ವಹಣೆಗೆ ಒಳಗೊಳ್ಳುವುದರಿಂದ, ಭೌತಿಕವಾಗಿ ನಿಯತ ತಪಾಸಣೆಗೆ ಒಳಪಡಲಾಗದಿರುವುದರಿಂದ, ವಿದ್ಯುತ್ ಸರಬರಾಜು ಹಾಗೂ ಪ್ರಸರಣೆ ಸಂಬಂಧವಾಗಿ ಬಳಕೆಗೊಳಪಡಿಸಿರುವ ಅಂತಹ ಆಸ್ತಿ/ ಸ್ಥಾಪನಗಳು ಭೌತಿಕವಾಗಿ ಲಭ್ಯವಿವೆ.

ii. ಕಂಪನಿಯು, ಪ್ರತಿ ವರ್ಷ ಸನ್ನಾಹ ಹಾಗೂ ಪೀಠೋಪಕರಣಗಳ ಭೌತಿಕ ಪರಿಶೀಲನಾ ಕಾರ್ಯವ್ಯವಸ್ಥೆಯನ್ನು ಹೊಂದಿದೆ. ಆದರೆ, ಸ್ಥಿರಾಸ್ತಿ ನೋಂದಣಿ ಪುಸ್ತಕವನ್ನು ಸಮರ್ಪಕ ಪರಿಮಾಣಾತ್ಮಕ ಮಾಹಿತಿಯೊಂದಿಗೆ ನಿರ್ವಹಿಸಲಾಗಿಲ್ಲ ಇದರಿಂದಾಗುವ ವ್ಯತ್ಯಾಸಗಳ ಕುರಿತು ನಾವು ಅಭಿಪ್ರಾಯ ನೀಡಲು ಸಾಧ್ಯವಿಲ್ಲ.

iii. ವಿಭಾಗಗಳಲ್ಲಿನ ಭೂ ಆಸ್ತಿ ದಾಖಲೆಗಳನ್ನು ನಿಗಮ ಕಾರ್ಯಾಲಯದಲ್ಲಿ ಹೊಂದಿರುವ ಭೂ ಆಸ್ತಿ ದಾಖಲೆಗಳೊಂದಿಗೆ ಸಮನ್ವಯಗೊಳಿಸಬೇಕಾಗಿದೆ.

iv. ನಮ್ಮ ಅಭಿಪ್ರಾಯದ ಪ್ರಕಾರ, ಎಲ್ಲಾ ಸ್ಥಿರಾಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು (ಟರ್ನ್ ಕೀ ಆಧಾರದ ಮೇಲೆ ಖರೀದಿಸಿರುವ ಸಾಮಗ್ರಿಗಳನ್ನು ಒಳಗೊಂಡು), ಬಳಕೆಯಲ್ಲಿರದ ಆಸ್ತಿಗಳ ಬಗ್ಗೆ ಕಂಪನಿಯು ನಿಯತ ಭೌತಿಕ ತಪಾಸಣೆಯ ವ್ಯವಸ್ಥೆಯನ್ನು ಹೊಂದತಕ್ಕದ್ದು.

ಇ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯ 539 ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ಪತ್ರಗಳನ್ನು ಹೊಂದಿರುವುದಿಲ್ಲ. ಮುಂದುವರೆದು, ಕಂಪನಿಯು ಕೆ.ಐ.ಎ.ಡಿ.ಬಿ. ಮಾರಾಟ ಹಾಗೂ ಗುತ್ತಿಗೆ ಕರಾರಿನ ಮೂಲಕ ಸ್ವಾಧೀನ ಪಡೆದುಕೊಂಡ ರೂ. 5158.30 ಲಕ್ಷಗಳ ಮೌಲ್ಯ 263.62 ಎಕರೆ ಭೂಮಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಆದೇಶ ಸಂ. ಸಿಐ 15 ಎಸ್‌ಪಿಕ್ಯೂ 2017 ದಿನಾಂಕ 09.03.2017ರನ್ವಯ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಸ್ತುತ ಗುತ್ತಿಗೆ ಹಾಗೂ ಮಾರಾಟದ 99 ವರ್ಷದ ಅವಧಿಯನ್ನು ಕನಿಷ್ಠ ಎರಡು ವರ್ಷಗಳಿಗೆ ನಿಗಧಿಮಾಡಿ ಬದಲಾವಣೆ ಮಾಡುವ ಪ್ರಕ್ರಿಯೆಯಲ್ಲಿದೆ. ಕವಿಪ್ರನಿನಿಯು 263.62 ಎಕರೆ ಭೂಮಿಯಲ್ಲಿ ಇನ್ನೂ 9.62 ಎಕರೆಗಳಷ್ಟು ಭೂಮಿಯನ್ನು ಕೆಐಎಡಿಬಿ ಯಿಂದ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

**II. ದಾಸ್ತಾನು (Inventories):**

ಅ) ನಮಗೆ ಒದಗಿಸಿರುವ ಮಾಹಿತಿಯ ಪ್ರಕಾರ, ಕಂಪನಿಯು ಪ್ರತೀ ವರ್ಷ ಉಗ್ರಾಣ, ಬಿಡಿಭಾಗಗಳು, ಸನ್ನಾಹ ಹಾಗೂ ಸ್ಥಾವರಗಳ ಭೌತಿಕ ತಪಶೀಲನಾ ಕಾರ್ಯದ ವ್ಯವಸ್ಥೆಯನ್ನು ಸಮಂಜಸವಾದ ಮಧ್ಯಂತರಗಳಲ್ಲಿ ನಡೆಸುತ್ತದೆ.

ಆ) ನಮಗೆ ವಿವರಿಸಿರುವ ಪ್ರಕಾರ, ಉಗ್ರಾಣದ ಭೌತಿಕ ವ್ಯತ್ಯಾಸವನ್ನು ಲೆಕ್ಕಪುಸ್ತಕಗಳಿಗೆ ಹೋಲಿಸಿದರೆ, ಕೊರತೆ ಅನುಪಯುಕ್ತ ಸಾಮಗ್ರಿಗೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿನ ವ್ಯತ್ಯಾಸಗಳಿಗೆ ಲೆಕ್ಕಪುಸ್ತಕಗಳಲ್ಲಿ ಸೂಕ್ತವಾಗಿ ವ್ಯವಹರಿಸಲ್ಪಟ್ಟಿಲ್ಲ.

**III. ಸಾಲಗಳು ಮತ್ತು ಮುಂಗಡಗಳು:**

ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ಕಂಪನಿ ಕಾಯ್ದೆ 2013ರ ಪರಿಚ್ಛೇಧ 189ರ ಅಡಿಯಲ್ಲಿ ಒಳಗೊಂಡಿರುವ ಕಂಪನಿಗಳು, ಸಂಸ್ಥೆಗಳು, ನಿಯಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇನ್ನಿತರ ವ್ಯಕ್ತಿಗಳಿಗೆ ಕಂಪನಿಯು ಯಾವುದೇ ಸಾಲ, ಸುರಕ್ಷಿತ ಅಥವಾ ಸುರಕ್ಷಿತವಲ್ಲದ ಸಾಲವನ್ನು ನೀಡಿರುವುದಿಲ್ಲ. ತದನುಸಾರವಾಗಿ, ಆದೇಶದ ಕಲಮು 3(iii)ರನ್ವಯ, ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ನಾವು ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**IV. ಸಾಲಗಳು, ಹೂಡಿಕೆ ಮತ್ತು ಖಾತರಿಗಳು:**

ನಮಗೆ ತಿಳಿಸಿರುವಂತೆ, ಕಂಪನಿ ಕಾಯ್ದೆ, 2013ರ ಪರಿಚ್ಛೇಧ 185 ಮತ್ತು 186ರಲ್ಲಿ ಒಳಪಟ್ಟಿರುವ ಪಕ್ಷಕಾರರಿಗೆ ಕಂಪನಿಯು ಯಾವುದೇ ಸಾಲ ನೀಡಿಲ್ಲ ಹಾಗೂ ಅಂತಹವರೊಂದಿಗೆ ಯಾವುದೇ ಹೂಡಿಕೆ ಮಾಡಿಲ್ಲ, ಖಾತರಿ ಅಥವಾ ಭದ್ರತೆಗಳನ್ನು ಒದಗಿಸಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(iv) ರ ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**V. ಠೇವಣಿಗಳು:**

ಕಂಪನಿಯು ಕ.ವಿ.ನಿ.ಆಯೋಗದ ನಿರ್ದೇಶನಗಳಿಗೆ ವಿರುದ್ಧವಾಗಿ ದಿನಾಂಕ:30.11.2012 ರ ನಂತರ ನೆಟ್‌ವರ್ಕ್ ಆಗ್ಯುಮೆಂಟೇಷನ್ ಶುಲ್ಕ ರೂ.1244.98 ಲಕ್ಷ ವಸೂಲಾತಿ ಮಾಡಿದ್ದು ಕಾಯ್ದೆ ಮತ್ತು ನಿಯಮಗಳನ್ವಯ ನಿಗಧಿತ ಅವಧಿಯೊಳಗೆ ಮರು ಪಾವತಿಸಿರುವುದಿಲ್ಲ ಇದನ್ನು ಹೊರತುಪಡಿಸಿ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು 2013ರ ಕಂಪನಿಗಳ ಕಾಯ್ದೆ ಕಲಂ 73 ರಿಂದ 76 ರ ಅಡಿಯಲ್ಲಿ ಒಳಪಡುವ ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನು ಅಂಗೀಕರಿಸಿರುವುದಿಲ್ಲ.

**VI. ವೆಚ್ಚ ದಾಖಲೆಗಳು:**

ವಿದ್ಯುಚ್ಛಕ್ತಿ/ವಿದ್ಯುತ್ ಪ್ರಸರಣದ ದರ ದಾಖಲೆಗಳ ಲೆಕ್ಕ ನಿರ್ವಹಣೆಯನ್ನು ಸರ್ಕಾರವು ಕಂಪನಿ ಅಧಿನಿಯಮ, 2013ರ ಪರಿಚ್ಛೇಧ 148ರ ಉಪಪರಿಚ್ಛೇಧ(1)ರ ಅಡಿಯಲ್ಲಿ ನಿಗಧಿಪಡಿಸಿದೆ. ಕಂಪನಿಯು ಪ್ರತ್ಯೇಕ ವೆಚ್ಚ ರಿಜಿಸ್ಟರುಗಳು ಹಾಗೂ ವೆಚ್ಚ ದರದಾಖಲೆಗಳ ರಿಜಿಸ್ಟರುಗಳನ್ನು ಹೊಂದಿಲ್ಲ, ಆರ್ಥಿಕ ಲೆಕ್ಕೀಕರಣ ಪುಸ್ತಕ ನಿರ್ವಹಣೆ ಹಾಗೂ ದಾಖಲೆಗಳನ್ನು ಆಧರಿಸಿ ವೆಚ್ಚ ದರ ದಾಖಲೆ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ನಮಗೆ ತಿಳಿಸಲಾಯಿತು.

**VII.** ಶಾಸನಬದ್ದ ಬಾಕಿಗಳು:

ಅ) ನಾವು ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿರುವ ಪ್ರಕಾರ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಸೇವಾ ಸುಂಕಗಳನ್ನೂ ಒಳಗೊಂಡಂತೆ, ಅವಿವಾದಿತ ಶಾಸನಬದ್ದ ಬಾಕಿ ಹಾಗೂ ಇನ್ನಿತರ ಯಾವುದೇ ಅನ್ವಯಿತ ಶಾಸನಬದ್ದ ಬಾಕಿಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ನಿಯತವಾಗಿ ಪಾವತಿಸಲಾಗುತ್ತಿದೆ. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಆಯವ್ಯಯ ಪಟ್ಟಿ ದಿನಾಂಕದಿಂದ ಪಾವತಿಸಬೇಕಾಗಿ ಬಂದ ದಿನಾಂಕದಿಂದ 6 ತಿಂಗಳುಗಳಿಗೂ ಹೆಚ್ಚಿನ ಅವಧಿಗೆ ಯಾವುದೇ ಅವಿವಾದಿತ ಶಾಸನಬದ್ದ ಬಾಕಿ ಇರುವುದಿಲ್ಲ ಈ ಕೆಳಕಂಡವುಗಳನ್ನು ಹೊರತುಪಡಿಸಿ.

| ಕ್ರ.ಸಂ. | ಶಾಸನದ ಹೆಸರು | ಶಾಸನಬದ್ಧ ಬಾಕಿಯ ಸ್ವರೂಪ | ಮೊತ್ತ ರೂ.ಗಳಲ್ಲಿ |
|---|---|---|---|
| 1 | ಕೇಂದ್ರಿಯ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017 | ಸಂಯೋಜಿತ ಸರಕು ಮತ್ತು ಸೇವಾ ತೆರಿಗೆ | 4,88,058/– |
| 2 | ಕೇಂದ್ರಿಯ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017 | ಕೇಂದ್ರಿಯ ಸರಕು ಮತ್ತು ಸೇವಾ ತೆರಿಗೆ | 50,99,318/– |
| 3 | ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017 | ರಾಜ್ಯ ಸರಕು ಮತ್ತು ಸೇವಾ ತೆರಿಗೆ | 50,99,318/– |
| | **ಒಟ್ಟು** | | **1,06,86,694/–** |

ಆ) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕೆಳಗೆ ತಿಳಿಸಿರುವ ವಿವಾದಿತ ತೆರಿಗೆಗಳನ್ನು ಹೊರತುಪಡಿಸಿದಂತೆ, ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ ಹಾಗೂ ಇತರ ಶಾಸನಬದ್ಧ ಬಾಕಿಗಳು ವಿವಾದಿತಗೊಂಡ ಬಾಕಿಗಳೆಂದು ಪಾವತಿಯಾಗದೇ ಉಳಿದಿರುವುದಿಲ್ಲ, ಈ ಕೆಳಗಿನವುಗಳನ್ನು ಹೊರತುಪಡಿಸಿ.

| ಶಾಸನದ ಹೆಸರು | ಬಾಕಿಯ ಸ್ವರೂಪ | ಮೊತ್ತ ರೂ.ಗಳಲ್ಲಿ | ಅವಧಿ | ವಿವಾದ ಬಾಕಿ ಇರುವ ವೇದಿಕೆ |
|---|---|---|---|---|
| ಸೇವಾ ತೆರಿಗೆ | ಸೇವಾ ತೆರಿಗೆ (VSAT ಶುಲ್ಕಗಳು) | 1,68,568/– | 2011–12 | CESTAT |
| ಸೇವಾ ತೆರಿಗೆ | ಸೇವಾ ತೆರಿಗೆ (ಸ್ಥಿರಾಸ್ತಿಯ ಬಾಡಿಗೆ) | 1,02,03,581/– | 2007–08 ರಿಂದ 2009–10 | CESTAT |
| | | 16,28,588/– | ಏಪ್ರಿಲ್ 2010 ರಿಂದ ಮಾರ್ಚ್ 11 | |
| | | 37,70,652/– | ಏಪ್ರಿಲ್ 2011 ರಿಂದ ಮಾರ್ಚ್12 | |
| | | 12,30,928/– | 01.04.2012 ರಿಂದ 30.06.2012 | ಆಯುಕ್ತರು (ಮೇಲ್ಮನವಿ) |
| | | 17,86,173/– | ಜುಲೈ 2012 ರಿಂದ ಸೆಪ್ಟೆಂಬರ್ 13 | ಆಯುಕ್ತರು (ಮೇಲ್ಮನವಿ) |
| ಸೇವಾ ತೆರಿಗೆ | ಸೇವಾ ತೆರಿಗೆ (ತಾಂತ್ರಿಕ ಪರಿವೀಕ್ಷಣೆಯ ಮತ್ತು ಪ್ರಮಾಣೀಕರಣ ಸಂಬಂಧ ಹೋಗಿ ಬರುವ (to and fro)ಶುಲ್ಕಗಳು) | 3,62,972/– | ಏಪ್ರಿಲ್ 2010 ರಿಂದ ಸೆಪ್ಟೆಂಬರ್ 2010 | CESTAT |
| | | 1,94,104/– | ಏಪ್ರಿಲ್ 2011 ರಿಂದ ಸೆಪ್ಟೆಂಬರ್ 2011 | |
| | | 3,75,086/– | ಅಕ್ಟೋಬರ್ 2011 ರಿಂದ ಮಾರ್ಚ್ 2012 | |
| ಸೇವಾ ತೆರಿಗೆ | ಸೇವಾ ತೆರಿಗೆ, (ಠೇವಣಿಗಳು, ಧಾರಣ ಹಣ ಮತ್ತು ದಂಡ ಮರುಪಾವತಿಗೆ ಬಾಕಿ ಉಳಿದಿರುವ ನಿರ್ಧಾರವನ್ನು ಮೂರು ವರ್ಷಗಳ ನಂತರ ಆದಾಯಕ್ಕೆ ವರ್ಗಾಯಿಸಿರುವುದು) | 14,86,38,823/– | 01.07.2012 ರಿಂದ 30.03.2015 | ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ |
| | | 22,42,464/– | ಏಪ್ರಿಲ್ 2015 ರಿಂದ ಮಾರ್ಚ್ 2016 | ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ |

| ಶಾಸನದ ಹೆಸರು | ಬಾಕಿಯ ಸ್ವರೂಪ | ಮೊತ್ತ ರೂ.ಗಳಲ್ಲಿ | ಅವಧಿ | ವಿವಾದ ಬಾಕಿ ಇರುವ ವೇದಿಕೆ |
|---|---|---|---|---|
| ಆದಾಯ ತೆರಿಗೆ ಕಾಯ್ದೆ 1961 | ಆದಾಯ ತೆರಿಗೆ (ಮರುಪಾವತಿಯಿಂದ ಬಾಕಿ ಹೊಂದಾಣಿಕೆ) | 86,26,972/– | ಕಂದಾಯ ನಿರ್ಧರಣ ವರ್ಷ2009–10 | ಸಹಾಯಕ ಆಯುಕ್ತರು, ಆದಾಯ ತೆರಿಗೆ (ACIT) |
| | | 73,03,387/– | ಕಂದಾಯ ನಿರ್ಧರಣ ವರ್ಷ 2009–10 (ಎಫ್‌ಬಿಟಿ) | |
| | | 33,013/– | ಕಂದಾಯ ನಿರ್ಧರಣ ವರ್ಷ 2012–13 | |
| | | 80,73,980/– | ಕಂದಾಯ ನಿರ್ಧರಣ ವರ್ಷ 2015–16 | |
| ಸೇವಾ ತೆರಿಗೆ | ಸೇವಾ ತೆರಿಗೆ (ಮೇಲ್ವಿಚಾರಣ ಶುಲ್ಕಗಳು) | 1,96,62,528/– | ಜುಲೈ 2012 ರಿಂದ ಆಗಸ್ಟ್ 2014 | CESTAT |
| ಸೇವಾ ತೆರಿಗೆ | ಸೇವಾ ತೆರಿಗೆ (GoK ಗಾಗಿ ಖಾತರಿ ಕಮಿಷನ್ ಪಾವತಿಸಿದ್ದು) | 72,344/– | ಏಪ್ರಿಲ್ 2012 ರಿಂದ ಮಾರ್ಚ್ 2013 ಮತ್ತು ಜುಲೈ 2012 ರಿಂದ ಮಾರ್ಚ್ 2013 | ಆಯುಕ್ತರು (ಮೇಲ್ಮನವಿ) |

VIII. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಬ್ಯಾಂಕುಗಳು ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದ ಸಾಲಗಳು ಅಥವಾ ಎರವಲುಗಳನ್ನು ಮರುಪಾವತಿಸಲು ಕಂಪನಿ ವಿಫಲವಾಗಿಲ್ಲ. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ ಕಂಪನಿಯು ಸಾಲಪತ್ರಗಳ ವಿತರಣೆಯ ಮೂಲಕ ಯಾವುದೇ ಸಾಲಗಳನ್ನು ಸಂಗ್ರಹಿಸಿರುವುದಿಲ್ಲ.

IX. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಗಳ ಪ್ರಕಾರ, ಕಂಪನಿಯು, ಪ್ರಾರಂಭಿಕವಾಗಿ ಸಾರ್ವಜನಿಕ ವಿತರಣೆ ಅಥವಾ ಮುಂದುವರಿದ ಸಾರ್ವಜನಿಕ ವಿತರಣೆ ಮೂಲಕ (ಸಾಲ ಲಿಖಿತ ಪತ್ರವನ್ನೂ ಒಳಗೊಂಡು) ಹಣವನ್ನು ಸಂಗ್ರಹಿಸಿಲ್ಲ. ಬ್ಯಾಂಕುಗಳಿಂದ ಪಡೆದ ನಿರ್ದಿಷ್ಟ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ, ಸಾಲವನ್ನು ಪಡೆದುಕೊಂಡ ನಿರ್ದಿಷ್ಟ ಬಂಡವಾಳ ಕಾಮಗಾರಿಗಳಿಗೆ ಹೊರತುಪಡಿಸಿ ಬೇರೆ ಬಂಡವಾಳ ಕಾಮಗಾರಿಗಳಿಗೂ ಇದನ್ನು ಅದೇ ರೀತಿ ಬಳಸಿಕೊಳ್ಳಲಾಗಿದೆ ಮತ್ತು ಲಭ್ಯವಿರುವ ಮಾಹಿತಿಯೊಂದಿಗೆ, ಅದನ್ನು ಖಚಿತಪಡಿಸಲಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

X. ನಮ್ಮ ಅತ್ಯುತ್ತಮ ಜ್ಞಾನ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಪನಿಯ ಮೇಲೆ ಅಥವಾ ಕಂಪನಿಯಿಂದ ಯಾವುದೇ ವಂಚನೆಗಳು ಆಗಿರುವುದು ಕಂಡು ಬಂದಿರುವುದಿಲ್ಲ ಹಾಗೂ ಅಂತಹ ಯಾವುದೇ ಪ್ರಕರಣಗಳ ಕುರಿತು ಆಡಳಿತ ಮಂಡಳಿಯು ನಮಗೆ ವರದಿ ಮಾಡಿರುವುದಿಲ್ಲ.

ಕೆಲವು ಉದ್ಯೋಗಿಗಳ ವಿರುದ್ಧ ವಿಚಾರಣೆ ಪ್ರಾರಂಭವಾಗಿರುವ ಗಂಭೀರ ಪ್ರಕರಣಗಳ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ವಿಚಾರಣೆ ಪೂರ್ಣಗೊಂಡ ನಂತರವಷ್ಟೇ ಪ್ರಕರಣದ ಸ್ವರೂಪವನ್ನು ಗೊತ್ತುಪಡಿಸಿಕೊಳ್ಳಬಹುದಾಗಿದೆ ಎಂದು ನಮಗೆ ತಿಳಿಸಲ್ಪಟ್ಟಿದೆ.

XI. ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್‌ಆರ್ 463 (ಇ) ದಿನಾಂಕ 5ನೇ ಜೂನ್, 2015ರನ್ವಯ ಆಡಳಿತಾತ್ಮಕ ಸಂಭಾವನೆಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013 ಕಲಂ 197ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ

ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(11)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

XII. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(12)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

XIII. ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್ಆರ್ 463(ಇ) ದಿನಾಂಕ 5.6.2015 ರನ್ವಯ ಸಂಬಂಧಿತ ಪಕ್ಷಕಾರರೊಂದಿಗಿನ ವ್ಯವಹಾರದಲ್ಲಿ ಕಂಪನಿಗಳ ಕಾಯ್ದೆ 2013 ಕಲಂ 177 ಮತ್ತು 188 ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(13)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

XIV.ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(12) ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

XV. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು ಪ್ರಸಕ್ತ ವರ್ಷದಲ್ಲಿ, ಸಂಬಂಧಿತ ನಿರ್ದೇಶಕರುಗಳು ಅಥವಾ ವ್ಯಕ್ತಿಗಳೊಂದಿಗೆ ಯಾವುದೇ ನಗದು ರೂಪದಲ್ಲಿಲ್ಲದ ವ್ಯವಹಾರಗಳನ್ನು ಕೈಗೊಂಡಿಲ್ಲ ಆದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪ್ರಕರಣ 192ರ ನಿಬಂಧನೆಗಳನುಸಾರ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ 2016 ಷರತ್ತು 3(xv) ರಲ್ಲಿ ಉಲ್ಲೇಖಿಸಲಾದ ವಿಷಯದ ಮೇಲೆ ನಮ್ಮ ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

XVI.ಕಂಪನಿಯು ಬ್ಯಾಂಕೇತರ ಹಣಕಾಸು ಕಂಪನಿಯಾಗಿರುತ್ತದೆ ಆದುದರಿಂದ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಕಲಂ 45–IA ರಡಿಯಲ್ಲಿ ನೊಂದಾಯಿಸಬೇಕಾದ ಅವಶ್ಯಕತೆ ಇರುವುದಿಲ್ಲ.

**ಬಿ.ಪಿ.ರಾವ್ ಮತ್ತು ಕಂಪನಿ**
ಸನ್ನದಿತ ಲೆಕ್ಕಿಗರು
ಸಂಸ್ಥೆ ನೋ.ಸಂ:003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

## ನಮ್ಮ ಸಮ ಸಂಖ್ಯೆ ದಿನಾಂಕದ ವರದಿ "ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳು" ರ ಕಂಡಿಕೆ 2(ಜಿ)ಗೆ ಉಲ್ಲೇಖಿಸಿದ ಅನುಬಂಧ –"ಬಿ"

**ಕಂಪನಿಗಳ ಕಾಯ್ದೆ 2013 ("ಕಾಯ್ದೆ") ಕಲಂ 143ರ ಉಪ ಕಲಂ (3) ರ ಕಂಡಿಕೆ 4 ರಡಿಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ.**

31ನೇ ಮಾರ್ಚ್, 2019 ರಂತೆ ನಾವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕಂಪನಿ) ಆರ್ಥಿಕ ವರದಿ ಮೇಲೆ ಆಂತರಿಕ ನಿಯಂತ್ರಣಗಳನ್ನು, ಆ ದಿನಾಂಕದಂದು ಅಂತ್ಯಗೊಂಡ ವರ್ಷಕ್ಕೆ IND-AS ನ ಆರ್ಥಿಕ ನಿರೂಪಣಾಪಟ್ಟಿಗಳ ಜೊತೆ ಲೆಕ್ಕ ಪರಿಶೋಧನೆ ನಡೆಸಿರುತ್ತೇವೆ.

**ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ಆಡಳಿತವರ್ಗದ ಜವಾಬ್ದಾರಿ:**

ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ಪಟ್ಟಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅನುಷ್ಠಾನಗೊಳಿಸಿರುವ ಆರ್ಥಿಕ ನಿರೂಪಣಾ ವರದಿಯ ಅಂಶಗಳ ಮೇಲಿನ ಆಂತರಿಕ ನಿಯಂತ್ರಣವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅನುಷ್ಠಾನಗೊಳಿಸುವುದು ಕಂಪನಿಯ ವ್ಯವಸ್ಥಾಪಕ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿ ಕಾಯ್ದೆ 2013ರಲ್ಲಿ ಅಗತ್ಯಪಡಿಸಿರುವಂತೆ, ಈ ಜವಾಬ್ದಾರಿಗಳು ವಿನ್ಯಾಸ, ಕಂಪನಿಯ ಕಾರ್ಯನೀತಿಯನ್ನು ಪಾಲಿಸುವುದನ್ನೂ ಒಳಗೊಂಡಂತೆ ವ್ಯವಹರಣೆಯನ್ನು ಅನುಕ್ರಮವಾಗಿ ಮತ್ತು ದಕ್ಷರೀತಿಯಿಂದ ನಡೆಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಯಾಚರಣೆಗೊಳಿಸುತ್ತಿದ್ದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನ ಹಾಗೂ ನಿರ್ವಹಣೆ, ಆಸ್ತಿಗಳನ್ನು ಸುರಕ್ಷಿತಗೊಳಿಸುವುದು, ಮೋಸ, ವಂಚನೆ ಹಾಗೂ ಲೋಪಗಳನ್ನು ಪತ್ತೆ ಮಾಡಿ ತಡೆಗಟ್ಟುವುದು, ಲೆಕ್ಕೀಕರಣ ದಾಖಲೆಗಳ ನಿಖರತೆ ಹಾಗೂ ಪರಿಪೂರ್ಣತೆ, ನಂಬಿಕೆಯುಕ್ತ ಆರ್ಥಿಕ ಮಾಹಿತಿಗಳನ್ನು ಸಕಾಲದಲ್ಲಿ ಸಿದ್ಧಪಡಿಸುವುದು ಇವುಗಳನ್ನು ಒಳಗೊಂಡಿದೆ.

### ಲೆಕ್ಕಪರಿಶೋಧಕರ ಜವಾಬ್ದಾರಿ:

ನಮ್ಮ ಪರಿಶೋಧನೆಯನ್ನು ಆಧರಿಸಿದಂತೆ, ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ(ಐ.ಸಿ.ಎ.ಐ) ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ ಹಾಗೂ ಗುಣಮಾನಕಗಳ ಪ್ರಕಾರ ನಾವು ನಮ್ಮ ಪರಿಶೋಧನೆಯನ್ನು ನಡೆಸಿದ್ದು, ಪರಿಶೋಧನೆಯು ಕಂಪನಿ ಕಾಯ್ದೆ, 2013ರ ಪ್ರಕರಣ 143(10)ರ ಅಡಿಯಲ್ಲಿ ನಿಗಧಿಪಡಿಸಿರುವಂತೆ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆಗೆ ಅನ್ವಯಿಸುವ ಹಾಗೂ ಐ.ಸಿ.ಎ. ಐ ಹೊರಡಿಸಿರುವ ಮಟ್ಟಿಗೆ ಇದೆ ಎಂದು ಭಾವಿಸಲಾಗಿದೆ. ಈ ಗುಣಮಾನಕಗಳು ಹಾಗೂ ಮಾರ್ಗದರ್ಶಕ ಟಿಪ್ಪಣಿಗಳು ನಾವು ನೈತಿಕ ಯೋಜನಾತೀತ ಅಗತ್ಯತೆ ಹಾಗೂ ಯೋಜನೆಗಳನ್ನು ಪಾಲಿಸಿ, ಆರ್ಥಿಕ ವರದಿಗಳ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣ ಸಾಕಷ್ಟು ಪ್ರಮಾಣದಲ್ಲಿ ಇತ್ತೇ ಹಾಗೂ ನಿರ್ವಹಿತಗೊಂಡಿತ್ತೇ ಹಾಗೂ ಅಂತಹ ನಿಯಂತ್ರಣಗಳು ಎಲ್ಲಾ ಭೌತಿಕ ಅಂಶಗಳ ವಿಷಯದಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಂಡಿತ್ತೇ ಎಂಬುದರ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಪಡೆದುಕೊಳ್ಳಲು ಪರಿಶೋಧನೆಯನ್ನು ನಡೆಸಬೇಕು.

ನಮ್ಮ ಪರಿಶೋಧನೆಯು, ಆರ್ಥಿಕ ನಿರೂಪಣ ಪಟ್ಟಿಯ ಸಲ್ಲಿಕೆ ಹಾಗೂ ಅವುಗಳ ಕಾರ್ಯಾಚರಣೆ ಪರಿಣಾಮದ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆಯ ಬಗ್ಗೆ ಪರಿಶೋಧಿತ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವ ಕಾರ್ಯಪ್ರಕ್ರಿಯೆಯನ್ನು ಒಳಗೊಂಡಿದೆ. ಆರ್ಥಿಕ ಪಟ್ಟಿಯ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಸಂಬಂಧದ ನಮ್ಮ ಪರಿಶೋಧನೆಯು, IND-AS ಆರ್ಥಿಕ ಪಟ್ಟಿಯ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ಭೌತಿಕ ಕೊರತೆಯ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದು, ಹೀಗೆ ಗೊತ್ತುಪಡಿಸಿಕೊಂಡ ಅಪಾಯವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣದ ಕಾರ್ಯಾಚರಣೆ ಪರಿಣಾಮ, ವಿನ್ಯಾಸವನ್ನು ಪರೀಕ್ಷಿಸಿ ಮೌಲ್ಯೀಕರಿಸುವುದು, ಇವುಗಳನ್ನು ಒಳಗೊಂಡಿದೆ. ಆಯ್ಕೆ ಮಾಡಿಕೊಂಡಿರುವ ಕಾರ್ಯಪ್ರಕ್ರಿಯೆಯು, ಮೋಸ ಅಥವಾ ಲೋಪದಿಂದಲೇ ಆಗಿದ್ದರೂ, IND-AS ಆರ್ಥಿಕ ನಿರೂಪಣಾಪಟ್ಟಿಗಳ ಭೌತಿಕ ಲೋಪಯುಕ್ತ ನಿರೂಪಣೆಗಳ ಸಂಬಂಧವಾದ

ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದನ್ನೂ ಒಳಗೊಂಡಂತೆ, ಪರಿಶೋಧಕರ ನಿರ್ಣಯವನ್ನು ಅವಲಂಬಿಸಿದೆ. ಆರ್ಥಿಕ ನಿರೂಪಣೆ ಪಟ್ಟಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣ ವ್ಯವಸ್ಥೆ ಸಂಬಂಧವಾಗಿ ನಮ್ಮ ಯುಕ್ತ ಪರಿಶೋಧಿತ ಅಭಿಪ್ರಾಯವನ್ನು ಒದಗಿಸಲು ನಾವು ಪಡೆದುಕೊಂಡಿರುವ ಪರಿಶೋಧಿತ ಸಾಕ್ಷ್ಯಾಧಾರಗಳು ಅಗತ್ಯ ಪ್ರಮಾಣದಲ್ಲಿವೆ ಹಾಗೂ ಸೂಕ್ತವಾಗಿವೆ ಎಂದು ನಂಬಿದ್ದೇವೆ.

**ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅರ್ಥ:**

ಒಂದು ಕಂಪನಿಯು ತನ್ನ ಆರ್ಥಿಕ ನಿರೂಪಣಾ ಪಟ್ಟಿಯ ಮೇಲೆ ಹೊಂದಿರುವ ಆಂತರಿಕ ಆರ್ಥಿಕ ನಿಯಂತ್ರಣವು ಒಂದು ಕಾರ್ಯಪ್ರಕ್ರಿಯೆಯಾಗಿದ್ದು, ಇದನ್ನು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕೀಕರಣ ತತ್ವಗಳ ಪ್ರಕಾರ, ಆರ್ಥಿಕ ನಿರೂಪಣಾ ಪಟ್ಟಿಯ ಸಲ್ಲಿಕೆಯ ಭರವಸೆ ಹಾಗೂ ನಂಬಿಕೆ, ಬಾಹ್ಯ ಉದ್ದೇಶಗಳಿಗಾಗಿ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಯುಕ್ತ ಖಚಿತತೆಯನ್ನು ಲಭ್ಯವಾಗಿಸುವ ವಿನ್ಯಾಸವಾಗಿದೆ. ಒಂದು ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು (1) ಕಂಪನಿಯ ಆಸ್ತಿಗಳ ವ್ಯವಹರಣೆ ಹಾಗೂ ವಿಲೇವಾರಿ ಸಂಬಂಧವಾಗಿ ವಿವರವಾದ, ನಿಖರವಾದ ಹಾಗೂ ನ್ಯಾಯಸಮ್ಮತ ದಾಖಲೆಗಳನ್ನು ಬಿಂಬಿಸುವುದಕ್ಕೆ ಸಂಬಂಧಿಸಿದ, (2) ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕತತ್ವಗಳ ಪ್ರಕಾರ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಅಗತ್ಯವಾದ ವ್ಯವಹರಣೆಗಳನ್ನು ದಾಖಲಿಸಲು ಹಾಗೂ ಕಂಪನಿಯ ವ್ಯವಸ್ಥಾಪಕ ಮಂಡಳಿ ಮತ್ತು ನಿರ್ದೇಶಕರುಗಳ ಅಧಿಕೃತ ಒಪ್ಪಿಗೆಯೊಂದಿಗೆ ಕಂಪನಿಯ ಸ್ವೀಕೃತಿ ಮತ್ತು ವೆಚ್ಚಗಳನ್ನು ಕೈಗೊಳ್ಳುತ್ತಿರುವ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಒದಗಿಸಲು, (3) ಕಂಪನಿಯ IND-AS ಆರ್ಥಿಕ ನಿರೂಪಣಾಪಟ್ಟಿಗಳ ಮೇಲೆ ಪರಿಣಾಮ ಬೀರಬಹುದಾದ ಆಸ್ತಿಗಳ ಅನಧಿಕೃತ ವಶಪಡಿಸಿಕೊಳ್ಳುವಿಕೆ, ಬಳಕೆ ಅಥವಾ ವಿಲೇವಾರಿಗಳನ್ನು ಸಕಾಲದಲ್ಲಿ ಪತ್ತೆ ಮಾಡುವುದು ಅಥವಾ ತಪ್ಪಿಸಲು ಯುಕ್ತಾತೀತ ಖಚಿತತೆಯನ್ನು ಒದಗಿಸಲು ಅಗತ್ಯವಾದ ಕಾರ್ಯನೀತಿ ಹಾಗೂ ಕಾರ್ಯಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

**ಆರ್ಥಿಕ ನಿರೂಪಣಾ ಪಟ್ಟಿಯ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳು:**

ನಿಯಂತ್ರಣಗಳ ಮೇಲೆ ಅಸೂಕ್ತವಾದ ನಿರ್ವಹಣಾ ಅಧಿಕಾರ, ಒಳಸಂಚನ್ನೂ ಒಳಗೊಂಡಂತೆ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲೆ ಇರುವ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳ ಕಾರಣ ಲೋಪ ಅಥವಾ ಮೋಸದ ಭೌತಿಕ ತಪ್ಪು ನಿರೂಪಣೆಗಳು ಉಂಟಾಗುವ ಸಾಧ್ಯತೆಗಳಿದ್ದು, ಅವು ಕಂಡುಹಿಡಿಯಲು ಆಗದಂತಹದ್ದಾಗಿರಬಹುದಾಗಿದೆ. ಅಲ್ಲದೆ ಭವಿಷ್ಯದ ಅವಧಿಗಳಿಗೆ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಮೌಲ್ಯೀಕರಣ ತೋರಿಕೆಗಳು ಅಪಾಯಕ್ಕೆ ಒಳಪಡಬಹುದಾಗಿದ್ದು, ಪರಿಸ್ಥಿತಿಯ ಬದಲಾವಣೆ, ಕಾರ್ಯನೀತಿ ಅಥವಾ ಕಾರ್ಯಪ್ರಕ್ರಿಯೆಗಳ ಅನುಸರಣೆಯ ಪ್ರಮಾಣವು ಕ್ಷೀಣಗೊಳ್ಳಬಹುದಾದ ಕಾರಣ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು ಕೊರತೆಯಿಂದ ತುಂಬಿದ್ದಿರಬಹುದಾಗಿದೆ.

**ಅಂಗೀಕಾರ್ಹ ಅಭಿಪ್ರಾಯ**

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ ಹಾಗೂ ನಮ್ಮ ಪರಿಶೋಧನೆಯನ್ನು ಆಧರಿಸಿ, 2019ರ ಮಾರ್ಚ್ 31ಕ್ಕೆ ಇದ್ದಂತೆ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಯ ಮೇಲಿನ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ, ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ಅಗತ್ಯ ಪ್ರಮಾಣದಲ್ಲಿರುವಿಕೆಗೆ ಸಂಬಂಧಿಸಿದಂತೆ ಕೆಳಕಂಡ ಭೌತಿಕ ಕೊರತೆಯನ್ನು ಗುರುತಿಸಲಾಗಿದೆ:

**ಆಸ್ತಿ ಸ್ಥಾವರ ಮತ್ತು ಉಪಕರಣ: (ಪಿಪಿಇ):**

i) ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ:

   a. ಕಾಲ ಕಾಲಕ್ಕೆ ಆಸ್ತಿ ಪುಸ್ತಕಗಳನ್ನು ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ಮಾಹಿತಿಯೊಂದಿಗೆ ನವೀಕರಿಸದಿರುವುದು.

   b. ವರದಿಯ ದಿನಾಂಕದಂದು ದುರ್ಬಲಗೊಂಡ ಆಸ್ತಿಗಳ ಗುರುತಿಸುವಿಕೆ.

   c. ಚರಾಸ್ತಿಗಳನ್ನು ಹೊರತುಪಡಿಸಿ ಸ್ಥಿರಾಸ್ಥಿಗಳ ಭೌತಿಕ ಪರಿಶೀಲನೆ ವರದಿ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯರೂಪ ಇಲ್ಲದೆ ಇರುವುದು.

d. ಚರಾಸ್ತಿ ಪರೀಶೀಲನಾ ಮಾಹಿತಿಯನ್ನು ಆಸ್ತಿ ಪುಸ್ತಕದೊಂದಿಗೆ ಸಮನ್ವಯಗೊಳಿಸದೇ ಇರುವುದು.

e. ಬಂಡವಾಳೀಕರಿಸುವ ಸಮಯದಲ್ಲಿ ಕಾರ್ಯಸ್ಥಗಿತ ವೆಚ್ಚವನ್ನು (Decommissioning Cost) ಅಂದಾಜಿಸಿ ಆಸ್ತಿ ಸ್ಥಾವರ ಮತ್ತು ಉಪಕರಣದ ಭಾಗವಾಗಿ ಪರಿಗಣಿಸದೇ ಇರುವುದು.

ಮೇಲಿನ ಕೊರತೆಗಳು ಹಣಕಾಸಿನ ನಿರೂಪಣಾಪಟ್ಟಿಯಲ್ಲಿನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಹಾಗೂ ಅದಕ್ಕೆ ಸಂಬಂಧಿಸಿದ ಸವಕಳಿ ಮತ್ತು ನಿರ್ವಹಣ ವೆಚ್ಚಗಳ ಬಗ್ಗೆ ಗಮನಾರ್ಹ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಡಬಹುದಾಗಿದೆ.

ii) ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲದ ಕಾರಣ, ಭೂಮಿಯ ಮಾಲಿಕತ್ವ ಗುರುತಿಸುವಿಕೆಯಲ್ಲಿ, ಭೂಮಿ ದಾಸ್ತಾವೇಜುಗಳು, ಭೂಮಿಯ ಮೌಲ್ಯಮಾಪನ, ಭೂಮಿಯನ್ನು ಸೂಕ್ತವಾಗಿ ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಭೂಮಿ ಎಂದು ವರ್ಗೀಕರಿಸದ ಕಾರಣ ಹಾಗೂ ಅದರ ಋಣಮುಕ್ತತೆಯ ಬಗ್ಗೆ ಹಣಕಾಸಿನ ನಿರೂಪಣಾಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.

iii) ಕಂಪನಿಯು ರಿಯಾಯಿತಿ ದರದಲ್ಲಿ / ಉಚಿತವಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND-AS 20 'ಸರ್ಕಾರದ ಧನ ಸಹಾಯಕ್ಕಾಗಿ ಲೆಕ್ಕ ಪತ್ರ ನಿರ್ವಹಣೆ ಮತ್ತು ಸರ್ಕಾರಿ ಕೊಡುಗೆ ಬಹಿರಂಗ ಪಡಿಸುವಿಕೆಯ' '(Accounting for Government Grants and Disclosure of Government Assistance)' ಬಗ್ಗೆ ಪರಿಣಾಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ನಿರೂಪಣಾ ಪಟ್ಟಿಗಳಲ್ಲಿ ಪಿಪಿಇ, ಋಣಮುಕ್ತತೆ (Amortization), ಕೊಡುಗೆ ಮತ್ತು ಇತರೆ ಆದಾಯಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

iv) ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ಆಂತರಿಕ ಹಣಕಾಸು ನಿಯಂತ್ರಣ ವಿಧಾನ ಮತ್ತು ವ್ಯವಸ್ಥೆಗಳನ್ನು ಒಳಗೊಂಡಿರುವುದಿಲ್ಲ.

ಅ) ಆಸ್ತಿಯ ವೆಚ್ಚವು ಸಂಪೂರ್ಣವಾಗಿ ಆಸ್ತಿ, ಸ್ಥಾವರ ಮತ್ತು ಉಪಕರಣ ಕಾರ್ಯಾಚರಣೆಯಾಗುವ ದಿನದವರೆಗೆ ಪರಿಗಣಿಸುವ ಬಗ್ಗೆ.

ಆ) ಕಂಪನಿಯ ನಿಯಮದ ಪ್ರಕಾರ ವೆಚ್ಚ ನಮೂದು ಪುಸ್ತಕದ ಸಮರ್ಪಕ ನಿರ್ವಹಣೆ

ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ, ಅದರ ಮೇಲಿನ ಸವಕಳಿ, ಗುತ್ತಿಗೆದಾರರ ಹೊಣೆಗಾರಿಕೆಗಳು ಅತಿ ಕಡಿಮೆ/ ಹೆಚ್ಚು ಬಿಂಬಿಸಿದಂತಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

v) ಕಂಪನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ವಿಧಾನದ (Weighted Average) ಆಧಾರದ ಮೇಲೆ 2015ರಡಿಯಲ್ಲಿ ಹೊರಡಿಸಿರುವ IND AS 23 Borrowing Cost ಅನ್ವಯ ಕಂಪನಿಯ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಮೇಲಿನ ಸವಕಳಿಗಳು, ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

vi) ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಬಂಡವಾಳೀಕರಿಸುವಾಗ ಸಿಬ್ಬಂದಿ ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಅನುಪಾತದಲ್ಲಿ ಹಂಚಿಕೆ ಮಾಡುವಾಗ ಅಸಂಗತವಾಗಿ ಒಂದೊಂದು ಘಟಕದಲ್ಲಿ ಒಂದೊಂದು ರೀತಿಯಲ್ಲಿ ಪಾಲಿಸಲಾಗುತ್ತಿದ್ದು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

vii) ಕಂಪನಿಯು ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರವನ್ನು ನಿಗಧಿತ ಅವಧಿಯಲ್ಲಿ ನೀಡುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ನಿರ್ಮಾಣ ಹಂತದಲ್ಲಿರುವ ವೆಚ್ಚಗಳು (EDC), ಸಾಲಗಳ ವೆಚ್ಚಗಳನ್ನು ಒಳಗೊಂಡಂತೆ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಕಾರ್ಯಾರಂಭ ಪ್ರಮಾಣ ಪತ್ರವು ಮುಂಚಿತವಾಗಿ/ ವಿಳಂಬವಾಗಿ ನೀಡುವುದರಿಂದ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

viii) ಕಂಪನಿಯು  ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆದು  ಆಸ್ತಿಗಳನ್ನು ಇಳಿಸಿದ ಮೌಲ್ಯದಲ್ಲಿ ಬೇರೆ ಲೆಕ್ಕ ಘಟಕಕ್ಕೆ ವರ್ಗಾಯಿಸಿದಲ್ಲಿ ಅದರ ಮೇಲಿನ ಸವಕಳಿಯನ್ನು ಹಾಗೂ ಆಸ್ತಿಯ ಬೆಲೆಯನ್ನು ಸೂಕ್ತವಾಗಿ ಪರಿಗಣಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ix) ಕಂಪನಿಯ ಸಿಬ್ಬಂದಿ ವೆಚ್ಚವನ್ನು ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮೇಲ್ವಿಚಾರಣ ಶುಲ್ಕದೊಂದಿಗೆ ನಿವ್ವಳಗೊಳಿಸುತ್ತಿರುವುದನ್ನು ತಾಂತ್ರಿಕವಾಗಿ ರೂಪಿಸುವ ವಿಷಯಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾದ ನಿಯಮ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೇಲೆ ಸಿಬ್ಬಂದಿ ವೆಚ್ಚವನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡದೆ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಸಿಬ್ಬಂದಿ ವೆಚ್ಚವು ಉತ್ಪ್ರೇಕ್ಷಿತವಾಗಿ (Over Statement) ಹಣಕಾಸಿನ ಹೇಳಿಕೆಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

x) ಕಂಪನಿಯಲ್ಲಿ ಯೋಜನೆಗಳ ಸಮೀಕ್ಷ ವರದಿ/ಕಾರ್ಯಸಾಧ್ಯತೆಗಳನ್ನು ನಿಯತಕಾಲಿಕವಾಗಿ ಪರಾಮರ್ಶಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ನಿವ್ವಳ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xi) ಕಂಪನಿಯು ಬಾಡಿಗೆ ನೀಡಿರುವ ಕಛೇರಿ  ಕಟ್ಟಡಗಳು/ಸಿಬ್ಬಂದಿಯ ವಸತಿ ಗೃಹಗಳನ್ನು ಹೂಡಿಕೆ ಮಾಡಲಾಗಿರುವ ಆಸ್ತಿಗಳೆಂದು ಪರಿಗಣಿಸುವ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ಹೂಡಿಕೆ ಆಸ್ತಿಗಳ ವಿಷಯದಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xii) ಡಿಪಿಆರ್ ತಯಾರಿಸಿದ ನಂತರ ವಿನ್ಯಾಸ, ಬೆಲೆ ವ್ಯತ್ಯಾಸ ಮತ್ತು ಪ್ರಮಾಣ ವ್ಯತ್ಯಾಸಗಳಲ್ಲಿನ ಬದಲಾವಣೆಯಿಂದಾಗಿ ಆದ ಬದಲಾವಣೆಗಳನ್ನು ಪರಿಗಣಿಸಲು ವೆಚ್ಚ ಲಾಭ ವಿಶ್ಲೇಷಣೆ, ಐಆರ್‌ಆರ್ ಮತ್ತು ಮರುಪಾವತಿಯ ಅವಧಿಯನ್ನು ಪರಿಷ್ಕರಿಸಲು ಕಂಪನಿಯು ಸಾಕಷ್ಟು ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದು ನಿಜವಾದ ವೆಚ್ಚ-ಲಾಭ, ಐಆರ್‌ಆರ್ ಮತ್ತು ಮರುಪಾವತಿ ಅವಧಿಯ ಮೇಲೆ ಪರಿಣಾಮ ಬೀರಬಹುದು.

**ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು:**

xiii) ಕಂಪನಿಯು ಪ್ರತಿಯೊಂದು ಸ್ವಯಂ ನಿರ್ವಹಣ ಕಾಮಗಾರಿವಾರು(SEW's) ಮತ್ತು ಠೇವಣಿವಂತಿಗೆ ಕಾಮಗಾರಿವಾರು (DCW's) ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸುವ, ಜಂಟಿ ದಾಸ್ತಾನು ತೆಗೆದುಕೊಳ್ಳುವುದರೊಂದಿಗೆ ಮತ್ತು ಖಚಿತಪಡಿಸಿಕೊಳ್ಳುವ  ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ  ಮತ್ತು ನಿಗಧಿತ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ, ಆದಾಯ ಮತ್ತು ವೆಚ್ಚಗಳನ್ನು ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xiv) ಕಂಪನಿಯು ಕರ್ನಾಟಕ ವಿದ್ಯುತ್ ಗ್ರಿಡ್ ಕೋಡ್, 2015ರನ್ವಯ ಗ್ರಿಡ್ ಸಂಪರ್ಕಿಸುವ ಅರ್ಜಿದಾರರಿಗೆ ಸೂಕ್ತ ಅಂತರ್‌ಸಂಪರ್ಕ ಅನುಮೋದನೆಯ ಹಂಚಿಕೆಗೆ ಸಂಬಂಧಿಸಿದಂತೆ ಪರಸ್ಪರ ಸಂಪರ್ಕದ ಒಪ್ಪಂದ ಸಹಿ ಮಾಡುವಿಕೆಯ ಬಗ್ಗೆ ಹಾಗೂ ಮೌಲ್ಯ ಮತ್ತು ಸಮಯೋಚಿತ ಆಧಾರದಲ್ಲಿ ಮೂಲಸೌಕರ್ಯಗಳ  ಮೌಲ್ಯಮಾಪನವನ್ನು ನ್ಯಾಯೋಚಿತವಗಿ ಕಂಪನಿಗೆ ಹಸ್ತಾಂತರಿಸುವ ವಿಷಯದಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಸ್ವವೆಚ್ಚ ಕಾಮಗಾರಿಗಳು/ ಠೇವಣಿವಂತಿಗೆ ಕಾಮಗಾರಿಗಳ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ, ಗ್ರಾಹಕರ ಕೊಡುಗೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚವನ್ನು ಸಂಗ್ರಹಿಸುವ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xv) IND AS 115-(Revenue from contracts with customers) ರನ್ವಯ ಕಂಪನಿಯು ಮೇಲ್ವಿಚಾರಣಾ ಶುಲ್ಕವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಮುಂಚಿತವಾಗಿಯೇ ಆದಾಯವೆಂದು ಗುರುತಿಸಲಾಗುತ್ತಿದೆ ಇದರಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xvi) ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ಕಾರ್ಯ ಮತ್ತು ಪಾಲನ ವೆಚ್ಚಗಳನ್ನು ನಿಗದಿತ ಅವಧಿಯಲ್ಲಿ ಬೇಡಿಕೆ ಅಕರಣೆ ಮಾಡಿ ವಸೂಲಾತಿ ಮಾಡಿ, ಕಾರ್ಯ ಮತ್ತು ಪಾಲನ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಗಳ ಬಗ್ಗೆ ಪರೀಶೀಲನೆ ಮಾಡುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ, ಬಂಡವಾಳ ವೆಚ್ಚವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಕಂಪನಿಯ ಲಾಭಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xvii) ಕಂಪನಿಯು ಸ್ವ ವೆಚ್ಚ ಕಾಮಗಾರಿಗಳಲ್ಲಿ ಗ್ರಾಹಕರಿಂದ ಪಡೆದ ಕೊಡುಗೆಯನ್ನು ಠೇವಣಿವಂತಿಗೆ ಕಾಮಗಾರಿಗಳಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ (IPP) ಭೂಮಿ ಒದಗಿಸುವಲ್ಲಿನ ಹಿಂದಿರುಗಿಸದ ಒಂದು ಬಾರಿ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ, ಪೂರ್ಣಗೊಂಡ ಸ್ವ ವೆಚ್ಚ/ ಠೇವಣಿವಂತಿಗೆ ಕಾಮಗಾರಿಗಳ ಮೌಲೀಕರಣದ ಬಗ್ಗೆ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015, IND AS 115–(Revenue from contracts with customers) ರಲ್ಲಿ ಸೂಚಿಸಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಆದಾಯ ಗುರುತಿಸುವಿಕೆ, ಗ್ರಾಹಕರ ಸ್ವೀಕೃತಿಗಳು/ ಪಾವತಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xviii) ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರ (IPP) ಸ್ವ ವೆಚ್ಚ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅದರ ಮೌಲ್ಯವನ್ನು ವಸೂಲಾತಿ ಮಾಡುವ ವಿಷಯದಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಉಪಕರಣ, ಅದರ ಸವಕಳಿಗಳ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಮೇಲ್ವಿಚಾರಣಾ ಶುಲ್ಕಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

**ಕಾಮಗಾರಿ ಬಿಲ್ಲುಗಳ ಪ್ರಕ್ರಿಯೆ ಕುರಿತು:**

xix) ಕಂಪನಿಯು ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲಾಗಿರುವುದಿಲ್ಲ.

ಅ. ಕಾಮಗಾರಿಗಳ ಅಳತೆಗೆ ಸಂಬಂಧವಾಗಿ, ಕವಿಪ್ರನಿನಿಯ ಅಳತೆ ನಿಯಮ ಪುಸ್ತಕದ ಕಲಮು–5ರ ಪ್ರಕಾರ, ಎಲ್ಲಾ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲೇ, ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸತಕ್ಕದ್ದು. ಆದರೆ, ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಬಿಲ್ಲುಗಳನ್ನು ಸಿದ್ದಪಡಿಸಿ/ಸ್ವೀಕರಿಸಿದ ನಂತರವಷ್ಟೇ ಅಳತೆ ಪುಸ್ತಕದಲ್ಲಿ ದಾಖಲಿಸಿ ಪರಿಪೂರ್ಣಗೊಳಿಸಲಾಗುತ್ತಿದೆ.

ಆ. ಲೆಕ್ಕ ಪತ್ರಗಳ ವರದಿಯ ದಿನಾಂಕದಂದು ಪೂರ್ಣಗೊಂಡ ಬಂಡವಾಳ ಕಾಮಗಾರಿಗಳು/ನವೀಕರಿಸಲಾದ ಮತ್ತು ಆಧುನಿಕರೀಸಲಾದ ಕಾಮಗಾರಿಗಳು/ ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿಗಳು (ಪ್ರಮಾಣ ವ್ಯತ್ಯಾಸದ ಬಿಲ್ಲುಗಳನ್ನು ಒಳಗೊಂಡಂತೆ) ಪೂರ್ಣಗೊಂಡ ಬಗ್ಗೆ ಲೆಕ್ಕಗಳಲ್ಲಿ ಸೂಕ್ತವಾದ ಅವಕಾಶ ಕಲ್ಪಿಸಲಾಗಿರುವುದಿಲ್ಲ.

ಇ. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪ್ರಕ್ರಿಯೆಗೊಳಿಸದಿರುವ ಬಗ್ಗೆ.

ಈ. ಪ್ರಗತಿಯಲ್ಲಿರುವ ಕಾಮಗಾರಿಗಳ ಬಿಲ್ಲುಗಳನ್ನು ಆಂತರಿಕ ಪರಿಶೋಧಕರು ಪರಿಶೀಲಿಸುತ್ತಿಲ್ಲ, ಕೇವಲ ಅಂತಿಮ ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ.

ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು ಮತ್ತು ಅವಕಾಶಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು, ಸ್ಥಿರಾಸ್ತಿಗಳು, ನಿರ್ಮಾಣ ಸಮಯದಲ್ಲಿ ಖರ್ಚಿನ ಹಂಚಿಕೆ (EDC) ಸಾಲಗಳ ವೆಚ್ಚ, ಸವಕಳಿ ಮತ್ತು ಆಸ್ತಿ ನಿರ್ವಹಣೆ ವೆಚ್ಚಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

xx) ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ದರ / ಮಾರುಕಟ್ಟೆ ದರದ ಬದಲಾಗಿ ಒಪ್ಪಂದದ ದರಗಳ ಮೇಲೆ ಬೆಲೆ ವ್ಯತ್ಯಾಸದ ಹಕ್ಕುಗಳು ಮತ್ತು ಪ್ರಮಾಣ ವ್ಯತ್ಯಾಸದ ಹಕ್ಕುಗಳನ್ನು ಪರಿಗಣಿಸಲಾಗುತ್ತಿದೆ. ಇದು ಸಿಡಬ್ಲ್ಯುಐಪಿ, ಪಿಪಿಇ, ಪಾವತಿ ಮತ್ತು ಸ್ವೀಕೃತಿ, ಸವಕಳಿ ಮತ್ತು ಹಣಕಾಸು ವೆಚ್ಚದ ಮೇಲೆ ಪರಿಣಾಮಕಾರಿಯಾದ ಪರಿಣಾಮವನ್ನು ಬೀರುತ್ತಿದ್ದು ಕಂಪನಿಯು ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯವಿಧಾನಗಳು ಮತ್ತು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿಲ್ಲ.

xxi) ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ ವಿನ್ಯಾಸ / ರೇಖಾಚಿತ್ರದಲ್ಲಿನ ತಿದ್ದುಪಡಿಯಿಂದಾಗಿ ಪ್ರಮಾಣಗಳು ಮತ್ತು ಒಪ್ಪಂದದ ಬೆಲೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಮತ್ತು ತಿದ್ದುಪಡಿ ಮಾಡಿದ ವಿನ್ಯಾಸಕ್ಕೆ ಅನುಗುಣವಾಗಿ ರವಾನೆ ಸೂಚನೆಗಳನ್ನು ನೀಡಲು ಮತ್ತು ಅದರ ಪ್ರಕಾರ, ಪ್ರಮಾಣಗಳಿಗೆ ಪಾವತಿಯನ್ನು ನಿರ್ಬಂಧಿಸುವುದು ಸಿಡಬ್ಲ್ಯುಐಪಿ, ಪಿಪಿಇ, ಪಾವತಿ ಮತ್ತು ಸ್ವೀಕೃತಿ, ಸವಕಳಿ ಮತ್ತು ಹಣಕಾಸು ವೆಚ್ಚದ ಮೇಲೆ ಪರಿಣಾಮಕಾರಿಯಾದ ಪರಿಣಾಮವನ್ನು ಬೀರುತ್ತಿದ್ದು ಕಂಪನಿಯು ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯವಿಧಾನಗಳು ಮತ್ತು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿಲ್ಲ.

xxii) ಟರ್ನ್‌ಕೀ ಒಪ್ಪಂದದ ನಿರ್ಮಾಣದ ಭಾಗದಲ್ಲಿ ಶುದ್ಧ ಕಾರ್ಮಿಕ ವೆಚ್ಚ ಮಾತ್ರ ಒಳಗೊಂಡಿರುತ್ತದೆ ಆದರೆ ಬೆಲೆ ಬದಲಾವಣೆಯ ಹಕ್ಕುಗಳ ಅನ್ವಯಕ್ಕೆ ಸಂಬಂಧಿಸಿದಂತೆ ಟೆಂಡರ್ ದಾಖಲೆಗಳಲ್ಲಿ ಮತ್ತು ಸಂಬಂಧಿಸಿದ ಸುತ್ತೋಲೆಗಳಲ್ಲಿ ಸ್ಪಷ್ಟತೆ ಇಲ್ಲದ ಕಾರಣ ಸಿಡಬ್ಲ್ಯುಐಪಿ, ಪಿಪಿಇ, ಪಾವತಿ ಮತ್ತು ಸ್ವೀಕೃತಿ, ಸವಕಳಿ ಮತ್ತು ಹಣಕಾಸು ವೆಚ್ಚದ ಮೇಲೆ ಪರಿಣಾಮಕಾರಿಯಾದ ಪರಿಣಾಮವನ್ನು ಬೀರುತ್ತಿದ್ದು ಕಂಪನಿಯು ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯವಿಧಾನಗಳು ಮತ್ತು ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿಲ್ಲ.

**ಆಂತರಿಕ ಪರಿಶೋಧನೆ ವ್ಯವಸ್ಥೆ**

xxiii) ಸೂಕ್ತವಾದ ಮತ್ತು ಗುಣಮಟ್ಟದ ಮಾನವಶಕ್ತಿಯ, ಲಭ್ಯತೆ ವ್ಯವಹಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೋಧನೆ ಇಲಾಖೆಯನ್ನು ಬಲಪಡಿಸಬೇಕಾಗಿದೆ. ಆಂತರಿಕ ಲೆಕ್ಕ ಪರಿಶೋಧಕರು, ಪ್ರಗತಿಯಲ್ಲಿರುವ ಬಿಲ್ಲುಗಳನ್ನು ಪರಿಶೀಲಿಸುವುದಿಲ್ಲ. ಆದರೆ ಅಂತಿಮ ಬಿಲ್ಲುಗಳನ್ನು ಮಾತ್ರ ಪರಿಶೀಲಿಸುತ್ತಾರೆ. ಮುಂದುವರೆದು, ಪ್ರಸ್ತುತ ಅತ್ಯಂತ ಪ್ರಮುಖ ಕ್ಷೇತ್ರಗಳಾದ ಆಸ್ತಿಯ ಬಂಡವಾಳೀಕರಣ, ಆದಾಯ ಮತ್ತು ಖರ್ಚಿನ ಗುರುತಿಸುವಿಕೆಗೆ ಸಂಬಂಧಿಸಿದಂತೆ ಇದರ ಕಾರ್ಯವ್ಯಾಪ್ತಿಯು, ಆಂತರಿಕ ಪರಿಶೋಧನೆಗೆ ಒಳಪಟ್ಟಿರುವುದಿಲ್ಲ. ಆಂತರಿಕ ಪರಿಶೋಧನೆ ಸಿಬ್ಬಂದಿಗಳಿಗೆ ನಿರಂತರವಾಗಿ ಸೂಕ್ತವಾದ ಕೌಶಲ್ಯಗಳು ಹಾಗೂ ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ತರಬೇತಿಗೊಳಿಸುವಂತೆ ಯೋಜನೆಯನ್ನು ಸಿದ್ದಪಡಿಸಿಕೊಳ್ಳಬೇಕಾಗಿರುತ್ತದೆ.

xxiv) ಕಂಪನಿಯಲ್ಲಿ ಶಾಸನಬದ್ಧ ಬಾಕಿಯನ್ನು ಸಕಾಲಿಕ ಸಮಯದಲ್ಲಿ ಲೆಕ್ಕೀಕರಿಸಿ ಪಾವತಿಯ ವಿಷಯದಲ್ಲಿ ಪರಿಣಾಮಕಾರಿಯಾದ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಈ ಸಂಭಾವ್ಯವಾಗಿ ಅನ್ವಯವಾಗುವ ಬಡ್ಡಿ ಇತರೆ ಶುಲ್ಕದೊಂದಿಗೆ ಶಾಸನ ಬದ್ಧ ಬಾಕಿಗಳ ವಿಳಂಬಿತ ಪಾವತಿಗೆ ಕಾರಣವಾಗುತ್ತದೆ.

**ಕಂದಾಯ :**

xxv) ಕಂಪನಿಯು (ಓ & ಎಂ) ಶುಲ್ಕಗಳು, ಪ್ರಸರಣ ಶುಲ್ಕಗಳು, ಮೇಲ್ವಿಚಾರಣೆ ಶುಲ್ಕಗಳು, ಪ್ರೋತ್ಸಾಹಕ ಧನಗಳು, ದಂಡ ವಸೂಲಾತಿ ಮುಂತಾದ ಇತರೆ ಆದಾಯಗಳನ್ನು ಗುರುತಿಸಿ ಲೆಕ್ಕಗಳಲ್ಲಿ ಆಕರಣೆ ಮಾಡಿ ಸಂಚಿತ ಆಧಾರದ ಮೇಲೆ ನಿಖರತೆ ಮತ್ತು ಸಂಪೂರ್ಣತೆಯ ಬಗ್ಗೆ ಲೆಕ್ಕೀಕರಿಸುವ ವಿಷಯದಲ್ಲಿ ಸೂಕ್ತ ಆಂತರಿಕ ನಿಯಂತ್ರಣವನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಆಸ್ತಿ/ಹೊಣೆಗಾರಿಕೆಗಳ, ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

xxvi) ವಿದ್ಯುತ್ ಸರಬರಾಜು ಕಂಪನಿ ಮತ್ತು ಕೆಇಆರ್‌ಸಿ (ಪ್ರಸರಣ ದರಗಳ ನಡುವೆ ನಿರ್ಧರಿಸುವ ನಿಬಂಧನೆಗಳು ಮತ್ತು ಷರತ್ತುಗಳು) ನಿಬಂಧನೆ 2006ರನ್ವಯ ಇರುವ ಪ್ರಸರಣ ಒಪ್ಪಂದದ ಅನ್ವಯ ವಿಳಂಬವಾಗಿ ಪಾವತಿಸಲ್ಪಟ್ಟ (surcharge)/ರಿಯಾಯಿತಿಗಳನ್ನು ಸಂಗ್ರಹಿಸಲು ಅಥವಾ ಪಾವತಿಸಲು ಕಂಪನಿಯಲ್ಲಿ ಸೂಕ್ತವಾದ ಕಾರ್ಯ ನೀತಿಗಳು, ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಆಸ್ತಿ/ಹೊಣೆಗಾರಿಕೆಗಳ, ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

xxvii) ಪ್ರಸರಣ ಶುಲ್ಕಗಳ ಲೆಕ್ಕಾಚಾರದ ಸಂಪೂರ್ಣತೆ ಮತ್ತು ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಆಯಾ ನಿಯಮಗಳ ಅನ್ವಯ ಕಂಪನಿಯಲ್ಲಿ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದು ಹಣಕಾಸಿನ ಹೇಳಿಕೆಯಲ್ಲಿ ಪಡೆಯಬಹುದಾದ ಆದಾಯ ಮತ್ತು ವ್ಯಾಪಾರದ ಸ್ವೀಕೃತಿಗಳ ಮೇಲೆ ಕಂಪನಿಯಲ್ಲಿ ತಪ್ಪು ವರದಿಗೆ ಕಾರಣವಾಗಬಹುದು.

**ಇತರೆ :**

xxviii) ಕಂಪನಿಯಲ್ಲಿ IND AS ಅನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವ ಬಗ್ಗೆ ಕಂಡುಕೊಳ್ಳಲು ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವಿಧಾನವನ್ನು ಹೊಂದಿಲ್ಲ.

xxix) ಕಂಪನಿಯ ಟೆಂಡರಿಂಗ್ ಮತ್ತು ಖರೀದಿ ಶಾಖೆಯು ಅನುಸರಿಸುವ ಕಾರ್ಯವಿಧಾನಗಳ ಸೂಕ್ತತೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ನಿಖರವಾದ ಕಾರ್ಯವಿಧಾನವಿಲ್ಲದಿರುವುದು ಮತ್ತು ಕರ್ನಾಟಕ ಪಾರದರ್ಶಕತೆಯ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ರಲ್ಲಿನ ನಿಯಮಗಳನ್ನು ಕಂಪನಿಯು ಕಾರ್ಯಾಚರಣಾ ವಿಧಾನವನ್ನು ಹೊಂದಿಲ್ಲ.

xxx) ಕಂಪನಿಯು ಗುತ್ತಿಗೆದಾರರಿಂದ ಪಡೆದ ಇ ಎಮ್ ಡಿ ಮತ್ತು ಇತರೆ ಠೇವಣಿಗಳ ಕುರಿತು ದೃಢೀಕರಣ ಮತ್ತು ಸಮನ್ವಯದ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಕಂಪನಿಯ ನಿಯಮಗಳನ್ವಯ ಇ ಎಮ್ ಡಿ/ ಇತರೆ ಠೇವಣಿಗಳನ್ನು ನಿಗದಿತ ಅವಧಿಯಲ್ಲಿ ಮರುಪಾವತಿಸುವ ಪ್ರಕ್ರಿಯೆಯನ್ನು ನಿಖರವಾಗಿ ಖಚಿತಪಡಿಸಿಕೊಳ್ಳದಿರುವುದರಿಂದ ಆರ್ಥಿಕ ಪಟ್ಟಿಯಲ್ಲಿ ಪ್ರಸ್ತುತ ಹೊಣೆಗಾರಿಕೆ ಮತ್ತು ಆದಾಯದಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

xxxi) ಕಂಪನಿಯು, ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್ 2006ರ ಅಡಿ ಗುತ್ತಿಗೆದಾರರನ್ನು ಗುರುತಿಸಿ ಆರ್ಥಿಕ ಪಟ್ಟಿಯಲ್ಲಿ ಮಾಹಿತಿಯನ್ನು ಬಹಿರಂಗಪಡಿಸಲು ಸೂಕ್ತವಾದ ಯಾವುದೇ ಕಾರ್ಯನೀತಿ ಮತ್ತು ಕಾರ್ಯವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಗುತ್ತಿಗೆದಾರರ ಮಾಹಿತಿಯು ಬಹಿರಂಗಗೊಳ್ಳದೆ ತಪ್ಪು ಉಂಟಾಗುವ ಸಾಧ್ಯತೆ ಇದೆ.

xxxii) ಕಂಪನಿಯು ಪ್ರಚಲಿತ/ ಪ್ರಚಲಿತವಲ್ಲದ ಆಸ್ತಿ/ಹೊಣೆಗಾರಿಕೆಗಳನ್ನು ಗುರುತಿಸಲು ಯಾವುದೇ ಕಾರ್ಯನೀತಿ, ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಗಳ ಪ್ರಸ್ತುತ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

xxxiii) ಕಂಪನಿಯು ಹಿಂದಿನ ಅವಧಿಯ ವೆಚ್ಚಗಳು/ ಜಮೆಗಳು ಗುರುತಿಸುವಿಕೆ ಮತ್ತು ವರದಿ ಮಾಡುವ ಬಗ್ಗೆ ಸೂಕ್ತವಾದ ಕಾರ್ಯನೀತಿ ಮತ್ತು ಕಾರ್ಯವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

xxxiv) ಕಂಪನಿಯು, ಸಿಇಆರ್‌ಸಿ/ಕೆಇಆರ್‌ಸಿ/ಇತರೆ ಅನ್ವಯಿಸುವ ಶಾಸನದಿಂದ ನಿಯಮಿತವಾಗಿ ಹೊರಡಿಸುವ ಹೊಸನಿಯಮಾವಳಿಗಳು/ಅಧಿಸೂಚನೆ/ಸುತ್ತೋಲೆಗಳು/ಆದೇಶಗಳು/ನಿರ್ದೇಶನ/ಯಾವುದೇ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಸೂಕ್ತವಾದ ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂದಾಯ ಮತ್ತು ಪ್ರಸ್ತುತ ಆಸ್ತಿಗಳ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

xxxv) ಕಂಪನಿಯು, ಗುತ್ತಿಗೆದಾರರಿಂದ ಬಂದಿರುವ ವಿಳಂಬ ಮನ್ನಾ ಅರ್ಜಿಗಳನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ನಿರ್ವಹಿಸಲು ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನು ಸಂಬಂಧಪಟ್ಟ ವಿಭಾಗಗಳ ಮಟ್ಟದಲ್ಲಿ ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ದಂಡ ಮುರಿದುಕೊಳ್ಳುವಿಕೆ ಮತ್ತು ಕಂದಾಯ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

xxxvi) ಕಂಪನಿಯು IND AS ನಿಯಮಗಳು 2015ರ ಅಡಿಯಲ್ಲಿ ನೀಡಿರುವ IND AS 19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವನೀಯ ಹೊಣೆಗಾರಿಕೆ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ.

xxxvii) ವಿವಿಧ ಪ್ರಾಧಿಕಾರಿಗಳಿಂದ ಪಡೆದ ಅನುದಾನದ ವಿಷಯದಲ್ಲಿ ಮೇಲ್ವಿಚಾರಣೆ, ಲೆಕ್ಕಪತ್ರ ನಿರ್ವಹಣೆ, ರಶೀದಿಯ ಅನುಸರಣೆ ಮತ್ತು ಅನುದಾನದ ಬಳಕೆಗೆ ಸಂಬಂಧಿಸಿದಂತೆ ಕಂಪನಿಯು ಸಾಕಷ್ಟು ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ.

xxxviii) ಕಂಪನಿಯು, ಇತರರಿಂದ (Form 26 AS) ಟಿಡಿಎಸ್ ಮುರಿಕೆ ಮಾಡಿರುವ ಲೆಕ್ಕ ಮತ್ತು ಸಮನ್ವಯಗಳ ಬಗ್ಗೆ ಯಾವುದೇ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಮುಂಚಿತವಾಗಿ ತೆರಿಗೆ ಪಾವತಿಸಿರುವ ಬಗ್ಗೆ, ಆದಾಯ, ಗ್ರಾಹಕರಿಂದ ಪಡೆದ ಮುಂಗಡ, ಮತ್ತು ವ್ಯವಹಾರ ಸ್ವೀಕೃತಿಗಳು ತಪ್ಪಾಗುವ ಸಾಧ್ಯತೆ ಇದೆ.

xxxix) ಕಂಪನಿಯು ಸಾಮಗ್ರಿಗಳ ಬಿಡಿಭಾಗಗಳನ್ನು ಖರೀದಿಸುವ ಸಮಯದಲ್ಲಿ ಬಂಡವಾಳೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ದಾಸ್ತಾನು ಮೌಲ್ಯದ ಸ್ಥಿರತೆಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು, ಸಂಪೂರ್ಣ/ಬಳಕೆಯಲ್ಲಿಲ್ಲದ ದಾಸ್ತಾನುಗಳನ್ನು ಸಮಯೋಚಿತ ಆಧಾರದ ಮೇಲೆ ಆಂತರಿಕ ನಿಯಂತ್ರಣಗಳನ್ನಾಗಲಿ ಹೊಂದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಲೆಕ್ಕಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಇದರಿಂದ ಸಾಮಗ್ರಿ ವಿವರಣಾ ಪಟ್ಟಿಯಲ್ಲಿ ಹೆಚ್ಚು ವಿವರಣೆ ಮತ್ತು ಕ್ಯಾಪಿಟಲ್ ವರ್ಕ್ಸ್ ಇನ್ ಪ್ರೋಗ್ರೆಸ್‌ಗಳ ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

XL) ಸಂಬಂಧಿಸಿದ ಗ್ರಾಹಕರು/ಗುತ್ತಿಗೆದಾರರು/ ಸರಬರಾಜುದಾರರ ವರದಿಯ ದಿನಾಂಕದಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದಕ್ಕೆ ಕಂಪನಿಯು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಯಲ್ಲಿ ಹೆಚ್ಚು/ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

XLi) ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಕವಿಪ್ರನಿನಿಯ ವಸತಿ ಗೃಹದ ನವೀಕರಣ ಹಾಗೂ ನಿರ್ವಹಣೆ ವೆಚ್ಚವನ್ನು ಹಂಚಿಕೊಳ್ಳದೆ ಹಾಗೂ ಕಂಪನಿಯ ಲೆಕ್ಕ ಪತ್ರಗಳಲ್ಲಿ ಬೇಡಿಕೆ ಮತ್ತು ವಸೂಲಾತಿಗಳನ್ನು ಮಾಡದೇ ಇರುವುದು ಕಂಪನಿಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿರ್ವಹಣೆ ವೆಚ್ಚದಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

XLii) ಕಂಪನಿಯು ವರದಿಯ ದಿನಾಂಕದಂದು ಅನಿಶ್ಚಿತ ಹೊಣೆಗಾರಿಕೆಗಳನ್ನು ಕಲ್ಪಿಸಿ ಬಹಿರಂಗಪಡಿಸುವಿಕೆಯ ಕುರಿತು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ ಮತ್ತು ವರದಿ ಮಾಡುವ ದಿನಾಂಕದಂದು ಅಸ್ತಿತ್ವದಲ್ಲಿರುವ ಬ್ಯಾಂಕ್ ಗ್ಯಾರಂಟಿ ಹಾಗು ಕ್ರೆಡಿಟ್ ಪತ್ರದ ಸಂಪೂರ್ಣತೆಯನ್ನು ಖಚಿತ ಪಡಿಸುವುದು.

XLiii) ಅಗೋಚರ ಸ್ವತ್ತುಗಳ ಗುರುತಿಸುವಿಕೆ /ಅಳತೆ/ಬಂಡವಾಳೀಕರಣ/ಋಣಮುಕ್ತತೆಗೆ ಸಂಬಂಧಿಸಿದಂತೆ ಪರಿಣಾಮಕಾರಿ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆ ಇರುವುದರಿಂದ ತಿಳಿಯಲಾಗದ ಅಗೋಚರ ಸ್ವತ್ತುಗಳ ಮತ್ತು ಋಣಮುಕ್ತತೆಯಿಂದ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

**ಸಂಸ್ಥೆ ವರದಿ ಮಾಡುವ ರಚನೆ:**

XLiv) ಪ್ರತಿ ವಿಭಾಗದ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ವರದಿ ಮಾಡುತ್ತಾರೆ, ಪ್ರತಿ ವೃತ್ತದ ಉಪಲೆಕ್ಕನಿಯಂತ್ರಣಾಧಿಕಾರಿಗಳು ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ್(ವಿ)ರವರಿಗೆ ವರದಿ ಮಾಡುತ್ತಾರೆ, ಪ್ರತಿ ವಲಯದ ನಿಯಂತ್ರಣಾಧಿಕಾರಿಗಳು ಸಂಬಂಧಪಟ್ಟ ಮುಖ್ಯ ಇಂಜಿನಿಯರ್(ವಿದ್ಯುತ್)ರವರಿಗೆ ವರದಿ ಮಾಡುತ್ತಾರೆ.

ಮೇಲಿನ ವರದಿಯ ರಚನೆಯು ಬಿಲ್ ಪ್ರಕ್ರಿಯೆ ಮತ್ತು ಪಾವತಿಯ ವ್ಯವಸ್ಥೆಯಲ್ಲಿ ಲೆಕ್ಕಾಧಿಕಾರಿಗಳ ಸ್ವಾತಂತ್ರ್ಯವನ್ನು ದುರ್ಬಲಗೊಳಿಸಬಹುದು, ಕ್ರಿಯಾತ್ಮಕವಾಗಿ ಆಡಳಿತಾತ್ಮಕ ವರದಿಯ ರಚನೆಯನ್ನು ಮಾಡುವಾಗ ಲೆಕ್ಕಾಧಿಕಾರಿಗಳು

ಉಪಲೆಕ್ಕನಿಯಂತ್ರಣಾಧಿಕಾರಿಯವರಿಗೆ, ಉಪಲೆಕ್ಕನಿಯಂತ್ರಣಾಧಿಕಾರಿಯವರು ನಿಯಂತ್ರಣಾಧಿಕಾರಿಯವರಿಗೆ ಮತ್ತು ನಿಯಂತ್ರಣಾಧಿಕಾರಿಯವರು ಆರ್ಥಿಕ ಸಲಹೆಗಾರರು(ಆ& ಸಂ)ರಿಗೆ ವರದಿ ಮಾಡುವಂತೆ ರಚನೆಯನ್ನು ಮಾಡಬಹುದು.

**ಗಣಕೀಕರಣ:**

XLv) ಕಂಪನಿಯ ಲೆಕ್ಕ ಪತ್ರಗಳನ್ನು ಗಣಕೀಕರಣಗೊಳಿಸುವುದರಿಂದ ಲೆಕ್ಕ ಪತ್ರ ವ್ಯವಸ್ಥೆಯಲ್ಲಿ ನಿಖರತೆ, ಸಮಯೋಚಿತ ಹಣಕಾಸು ವರದಿ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಹಾಗು ನಿಗಮ ಕಛೇರಿಯ ವರದಿಗಳಿಗೆ ಸಂಬಂದಿಸಿದಂತೆ ಲೆಕ್ಕ ಪತ್ರ ನಿರ್ವಹಣೆ ಮತ್ತು ಗಣನೆಗೆ ತೆಗೆದುಕೊಳ್ಳಲು ಪರಿಣಾಮಕಾರಿ ಕಾರ್ಯವಿಧಾನ ಮತ್ತು ಆಂತರಿಕ ಆರ್ಥಿಕ ನಿಯಂತ್ರಣವನ್ನು ವಿಕಸಿಸಬಹುದು. ಗಣಕೀಕರಣದ ಅನುಪಸ್ಥಿತಿಯಿಂದ ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

XLvi) ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ, ಸರಕುಗಳ ನಿರ್ವಹಣೆ ವ್ಯವಸ್ಥೆ, ಕಂದಾಯ ವೆಚ್ಚಗಳ ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ, ಯೋಜನೆ ಮೇಲ್ವಿಚಾರಣೆ ವ್ಯವಸ್ಥೆಯಂತಹ ಅಸ್ತಿತ್ವದಲ್ಲಿರುವ ಅಪ್ಲಿಕೇಶನ್/ಮಾಹಿತಿ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಹಾಗು ಉದ್ದೇಶಿತ ಪ್ರಯೋಜನಗಳನ್ನು ಅರಿತುಕೊಳ್ಳಲ್ಲು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಮತ್ತು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಕಂಪನಿಯು ಸಾಕಷ್ಟು ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ.

ಆರ್ಥಿಕ ನಿರೂಪಣಾ ಪಟ್ಟಿಗಳ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ "ಭೌತಿಕ ಹೀನತೆಯು" ಒಂದು ಕೊರತೆ ಅಥವಾ ಕೊರತೆಗಳ ಸಂಯೋಗವಾಗಿದ್ದು, ಇದರಿಂದ, ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ಭೌತಿಕವಾಗಿ ನೈಜವಲ್ಲದ ನಿರೂಪಣೆಗೆ ಸಹಜ ಅವಕಾಶವಾಗಬಹುದಾಗಿದ್ದು, ಇದನ್ನು ಕಾಲಾನುಕ್ರಮವಾಗಿ ತಡೆಯಲಾಗುವುದಿಲ್ಲ ಅಥವಾ ಕಂಡುಹಿಡಿಯಲಾಗುವುದಿಲ್ಲ.

ನಮ್ಮ ಅಭಿಪ್ರಾಯದ ಪ್ರಕಾರ, ನಿಯಂತ್ರಣ ಅಂಶಗಳ ಉದ್ದೇಶಗಳ ಸಾಧನೆಯ ಮೇಲೆ ಬೀರಬಹುದಾದ ಮೇಲೆ ಸೂಚಿಸಿರುವ ಭೌತಿಕ ಕೊರತೆಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ಕಂಪನಿಯು ಎಲ್ಲಾ ಭೌತಿಕ ವಿಷಯಗಳಲ್ಲಿ, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗೆ ಸಂಬಂಧವಾಗಿ ಅಗತ್ಯ ಪ್ರಮಾಣದ ಆಂತರಿಕ ಆರ್ಥಿಕ ನಿಯಂತ್ರಣವನ್ನು ನಿರ್ವಹಿಸುತ್ತಿದ್ದು, ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಅಂತಹ ಆಂತರಿಕ ನಿಯಂತ್ರಣಗಳು 2019 ರ ಮಾರ್ಚ್ 31ರಂತೆ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ಪಟ್ಟಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅಳವಡಿಸಿಕೊಂಡಿರುವ ಆರ್ಥಿಕ ನಿರೂಪಣಾ ಪಟ್ಟಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಅಂಶಗಳನ್ನು ಆಧರಿಸಿ ಪರಿಣಾಮಕಾರಿಯಾಗಿ ನಿರ್ವಹಿತಗೊಳ್ಳುತ್ತಿವೆ.

2019 ರ ಮಾರ್ಚ್ 31ರಂತೆ, ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ನಮ್ಮ ಪರಿಶೋಧನೆಯಲ್ಲಿ ಅನ್ವಯಿಸಿರುವ ಸ್ವರೂಪ, ಕಾಲಬದ್ಧತೆ ಹಾಗೂ ಪರಿಶೋಧನಾ ಪರೀಕ್ಷೆಯನ್ನು ಗೊತ್ತುಪಡಿಸಿಕೊಳ್ಳುವುದಕ್ಕೆ ಮೇಲೆ ವರದಿ ಮಾಡಿ ಗುರುತಿಸಲ್ಪಟ್ಟಿರುವ ಭೌತಿಕ ಕೊರತೆಗಳನ್ನು ನಾವು ಪರಿಗಣಿಸಿದ್ದು, ಇಂತಹ ಭೌತಿಕ ಕೊರತೆಗಳು ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಅಭಿಪ್ರಾಯಗಳಿಗೆ ಪರಿಣಾಮ ಬೀರಿರುವೆಡೆಯಲ್ಲೆಲ್ಲಾ, ನಾವು ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ನೀಡಿದ್ದೇವೆ.

**ಬಿ.ಪಿ.ರಾವ್ ಮತ್ತು ಕಂಪನಿ**
ಸನ್ನದಿತ ಲೆಕ್ಕಿಗರು
ಸಂಸ್ಥೆ ನೋ.ಸಂ:003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

**ಅನುಬಂಧ –"ಸಿ": ನಮ್ಮ ಸಮ ದಿನಾಂಕದ ವರದಿಯ ಪ್ರಕರಣದ ಕಂಡಿಕೆ 2(i) ರಲ್ಲಿ ಉಲ್ಲೇಖಿಸಿರುವಂತೆ ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳು" ವಿಷಯಗಳ ಮೇಲಿನ ವರದಿ**

(ಸಿ & ಎಜಿ ಅವರ ವರದಿ ಮೇಲೆ/ನಿರ್ದೇಶನಗಳಿಗೆ ಉತ್ತರಗಳು/ಹೆಚ್ಚುವರಿ ನಿರ್ದೇಶನಗಳಿಗೆ ಇಟಾಲಿಕ್ಸ್ ಅಕ್ಷರಗಳಲ್ಲಿ ಉತ್ತರ ನೀಡಲಾಗಿದೆ)

**ಎ. ನಿರ್ದೇಶನಗಳು:**

**(ನಮ್ಮ ಸಮ ದಿನಾಂಕದ ವರದಿ 31ನೇ ಮಾರ್ಚ್ 2019, ಕಂಪನಿಯ ಕಾಯ್ದೆ 2013 ಸೆಕ್ಷನ್ 143 (5) ರಡಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸದಸ್ಯರಿಗೆ ನೀಡಿದ ನಿರ್ದೇಶನಗಳು)**

| ಕ್ರ.ಸಂ. | ನಿರ್ದೇಶನಗಳು | ಉತ್ತರಗಳು |
|---|---|---|
| 1. | ಐಟಿ ವ್ಯವಸ್ಥೆ ಮೂಲಕ ಎಲ್ಲಾ ಅಕೌಂಟಿಂಗ್ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಲು ಕಂಪನಿಯು ವ್ಯವಸ್ಥೆಯನ್ನು ಹೊಂದಿದೆಯೇ? ಹೌದಾದರೆ, ಐಟಿ ವ್ಯವಸ್ಥೆಯ ಹೊರಗಿನ ಲೆಕ್ಕಪರಿಶೋಧಕ ವಹಿವಾಟುಗಳನ್ನು ಪ್ರಕ್ರಿಯೆಯ ಪರಿಣಾಮಗಳ ಜೊತೆಗೆ ಖಾತೆಗಳ ಸಮಗ್ರತೆಯ ಮೇಲೆ ಹಣಕಾಸಿನ ಪರಿಣಾಮಗಳು ಯಾವುದಾದರೂ ಇದ್ದರೆ ಹೇಳಬಹುದು. | ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಖಾತೆಗಳು ಮತ್ತು ದಾಖಲೆಗಳ ಪುಸ್ತಕಗಳನ್ನು ಕೈಪಿಡಿಯಿಂದ ನಿರ್ವಹಿಸಲಾಗುತ್ತಿದೆ. ಆದಾಗ್ಯೂ, ಕವಿಪ್ರನಿನಿಯಲ್ಲಿ ಈ ಕೆಳಕಂಡ ಪ್ರಮುಖ ಸ್ವ–ನಿರ್ವಹಿತ ಪ್ರಕ್ರಿಯೆಗಳನ್ನು ಬಳಸಲಾಗುತ್ತಿದೆ.<br>1. ಇ–ಪ್ರೊಕ್ಯೂರ್‌ಮೆಂಟ್<br>2. ಲೆಕ್ಕಗಳನ್ನು ಅಂತಿಮವಾಗಿ ಸಮನ್ವಯಗೊಳಿಸುವುದು – ಡಿ.ಎಸ್.ಎಸ್.ತಂತ್ರಾಂಶ.<br>3. ಅಂ.ಘ ಲೆಕ್ಕ ವ್ಯವಹರಣೆ ಮತ್ತು ತೀರುವಳಿ<br>4. ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ.<br>5. ಕಂದಾಯ ವೆಚ್ಚಗಳ ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ., ಇತ್ಯಾದಿ.<br>ವ್ಯವಸ್ಥೆಯ ಉದ್ದೇಶಿತ ಪ್ರಯೋಜನಗಳನ್ನು ಸಾಧಿಸಲು ಮೇಲಿನ ಮಾಹಿತಿ ವ್ಯವಸ್ಥೆಯ ಅನುಷ್ಠಾನ ಮತ್ತು ನಿರಂತರ ಮೇಲ್ವಿಚಾರಣೆ ಮಾಡಲಾಗುತ್ತಿದೆ.<br>ಕೈಗೆತ್ತಿಕೊಂಡ ಕಾಮಗಾರಿಗಳ ವೆಚ್ಚ ರಿಜಿಸ್ಟರ್ (ಸಿ ರಿಜಿಸ್ಟರ್)ನ್ನು ಹಸ್ತಚಾಲಿತವಾಗಿ ನಿರ್ವಹಿಸಲಾಗುತ್ತಿದೆ. ಕಂಪನಿಯ ನೀತಿಯ ಪ್ರಕಾರ ಸಾಕಷ್ಟು ಸಿ ರಿಜಿಸ್ಟರ್‌ನ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಲೆಕ್ಕಪತ್ರ ನಿರ್ವಹಣೆ, ವರದಿ ಮಾನಿಟರಿಂಗ್ ನಿಯಂತ್ರಣಗಳನ್ನು ಬಲಪಡಿಸಬೇಕು. ಆದ್ದರಿಂದ ಕಂಪನಿಯು ಸಿ ರಿಜಿಸ್ಟರ್‌ನ ನಿರ್ವಹಣೆ, ಹಂಚಿಕೆ ಮತ್ತು ನಿರ್ಮಾಣದ ಸಮಯದಲ್ಲಿ ಮಾಡಿದ ಖರ್ಚಿನ ಹಂಚಿಕೆ ಮತ್ತು ಬಂಡವಾಳೀಕರಣದ ಇತರೆ ಸಂಬಂಧಿತ ಪ್ರಕ್ರಿಯೆಯನ್ನು ಸಂಯೋಜಿಸಲು ಮತ್ತು ಗಣಕೀಕರಿಸಲು ಯೋಜಿಸಬೇಕಾಗಿದೆ.<br>ಕಂಪನಿಯು ಖಾತೆಗಳ ಗಣಕೀರಣದಲ್ಲಿ ಸಮಗ್ರ ವ್ಯವಸ್ಥೆಗೆ ನಿರ್ವಹಣೆ ಯೋಜಿಸುತ್ತಿದೆ. ಇಆರ್‌ಪಿ (ERP) ಅನುಷ್ಠಾನಕ್ಕೆ ಡಿಪಿಆರ್ ಅನುಮೋದನೆ ನೀಡಲಾಗಿದ್ದು ಮತ್ತು ಟೆಂಡರಿಂಗ್ ಪ್ರಕ್ರಿಯೆಯಲ್ಲಿದೆ. |
| 2 | ಸಾಲವನ್ನು ಮರುಪಾವತಿಸಲು ಕಂಪನಿಯು ಹೊಣೆಗಾರಿಕೆಯಿಂದಾಗಿ ಸಾಲಗಾರರು ಕಂಪನಿಗೆ ಅಸ್ತಿತ್ವದಲ್ಲಿರುವ ಸಾಲದ ಯಾವುದೇ ಪುನರ್‌ರಚನೆ ಅಥವಾ ಮನ್ನಾ ಪ್ರಕರಣಗಳು/ಸಾಲಗಳು/ಸಾಲಗಳನ್ನು ತೊಡೆದು ಹಾಕುವಿಕೆ/ಬಡ್ಡಿ ಇತ್ಯಾದಿಗಳನ್ನು ಮಾಡಿರುವುದೇ? ಹೌದು ಎಂದಾದರೆ, ಹಣಕಾಸಿನ ಪರಿಣಾಮವನ್ನು ಹೇಳಬಹುದು. | ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಯಾವುದೇ ಸಾಲ ಮನ್ನಾ/ ಸಾಲಗಳ ವಜಾ/ ಸಾಲಗಳನ್ನು ತೊಡೆದುಹಾಕುವುದು/ ಬಡ್ಡಿಗಳು ಇತರೆ, ಪ್ರಕರಣಗಳು ಇರುವುದಿಲ್ಲ. |

| | | |
|---|---|---|
| 3 | ಕೇಂದ್ರ / ರಾಜ್ಯ ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕರಿಸಿದ/ ಪಡೆಯಬಹುದಾದ ಹಣವನ್ನು ಅದರ ಅವಧಿ ಮತ್ತು ಷರತ್ತುಗಳ ಪ್ರಕಾರ ಸರಿಯಾಗಿ ಲೆಕ್ಕಹಾಕಲಾಗಿದೆಯೇ/ ಬಳಸಲಾಗಿದೆಯೇ? ಉಲ್ಲಂಘನೆಯಾದ ಪ್ರಕರಣವನ್ನು ಪಟ್ಟಿ ಮಾಡಿ. | ಆಡಳಿತ ಮಂಡಳಿಯು ಒದಗಿಸಿದ ಮಾಹಿತಿಯ ಪ್ರಕಾರ ಮತ್ತು ನಮ್ಮ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯು 31.03.2019 ರವರೆಗೆ PSDF ನಿಂದ ರೂ.5437.60 ಲಕ್ಷ ಹಣವನ್ನು ಪಡೆಯಲಾಗಿದೆ ಅದರಲ್ಲಿ ಕವಿಪ್ರನಿನಿಯು ಈ ವರ್ಷದಲ್ಲಿ ರೂ.3625.00ಲಕ್ಷ ಸ್ವೀಕರಿಸಿದೆ ಮತ್ತು ಕಂಪನಿಯು NCEF ನಿಂದ ರೂ.17119.10 ಲಕ್ಷ ಹಣವನ್ನು ಪಡೆಯಲಾಗಿದೆ, ಅದರಲ್ಲಿ ಕವಿಪ್ರನಿನಿಯು ಈ ವರ್ಷದಲ್ಲಿ ರೂ.6785.80ಲಕ್ಷ ಸ್ವೀಕರಿಸಿದೆ.<br><br>PSDF ಮತ್ತು NCEF ನಿಂದ ಯೋಜನೆಗಳಿಗೆ ಸಂಬಂಧಿಸಿದಂತೆ ಪಡೆದ ಅನುದಾನ, ಬಳಕೆ ಮತ್ತು ಖರ್ಚು ಮಾಡಿರುವ ಖರ್ಚಿನ ಸಮನ್ವಯವನ್ನು ಕಂಪನಿಯು ಒದಗಿಸಿರುವುದಿಲ್ಲ. ಅದರ ಪ್ರಕಾರ ಹಣಕಾಸು ಹೇಳಿಕೆಯಲ್ಲಿ ಅದರ ಸೂಕ್ತತೆಯನ್ನು ಖಚಿತಪಡಿಕೊಳ್ಳಲು ನಮಗೆ ಸಾಧ್ಯವಾಗುತ್ತಿಲ್ಲ.<br><br>ಮೇಲಿನ ಉಲ್ಲೇಖಿತ ಯೋಜನೆಗಳ ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಪ್ರತ್ಯೇಕ ಲೆಕ್ಕಪತ್ರಗಳನ್ನು ಕಂಪನಿಯು ನಿರ್ವಹಿಸಿರುವುದಿಲ್ಲ.<br><br>ಜಕಾತಿ ಅರ್ಜಿ 2019 ರಲ್ಲಿ ಕಂಪನಿಯು ಪ್ರತ್ಯೇಕವಾಗಿ ಧನಸಹಾಯ ನೀಡಿದ ಯೋಜನೆಯ ಭಾಗವನ್ನು ಬಹಿರಂಗಪಡಿಸಿಲ್ಲ.<br><br>ಇದಲ್ಲದೆ, ಸೂಕ್ತ ಪ್ರಾಧಿಕಾರಕ್ಕೆ ಉಪಯೋಗಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು, ಯೋಜನೆಯನ್ನು ಸಮಂಯೋಚಿತವಾಗಿ ಪೂರ್ಣಗೊಳಿಸುವುದು, ಒಪ್ಪಂದ ಮತ್ತು ಮಂಜೂರಾತಿ ಪತ್ರದ ಪ್ರಕಾರ ಇತರೆ ವರದಿ ಮತ್ತು ಅನುಸರಣೆ ಅಗತ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳು ಮತ್ತು ಷರತ್ತುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸಿಲ್ಲ. ಅಂತೆಯೇ, ನಿಯಮಗಳು ಮತ್ತು ಷರತ್ತುಗಳ ಅನುಸರಣೆ ಕುರಿತು ಪ್ರಕ್ರಿಯಿಸಲು ನಮಗೆ ಸಾಧ್ಯವಾಗುತ್ತಿಲ್ಲ. |

**ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು:**

**(ನಮ್ಮ ಸಮ ದಿನಾಂಕದ ವರದಿ 31ನೇ, ಮಾರ್ಚ್ 2019 ರ ವರದಿಯ ಅನುಬಂಧದಲ್ಲಿ ಸೂಚಿಸಿದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸದಸ್ಯರಿಗೆ)**

| ನಿರ್ದೇಶನಗಳು | ಆಡಳಿತ ವರ್ಗದ ಉತ್ತರಗಳು |
|---|---|
| ಎ) ಕಂಪನಿಯ ಮಾಲೀಕತ್ವದಲ್ಲಿ ನಿರುಪಯುಕ್ತವಾದ ಜಮೀನಿನ ಅತಿಕ್ರಮಣವನ್ನು ನಿಲ್ಲಿಸಲು ಅಗತ್ಯ ಕ್ರಮವಹಿಸವುದನ್ನು ಪರಿಶೀಲಿಸಬಹುದಾಗಿದೆ. ಕಂಪನಿಯು ಜಮೀನು ಅತಿಕ್ರಮಣವಾಗಿದ್ದಲ್ಲಿ, ನ್ಯಾಯಾಲಯದಲ್ಲಿ ಪ್ರಕರಣ ಇದ್ದರೆ, ಉಪಯೋಗಿಸದೇ ಇದ್ದರೆ ಅಥವಾ ಹೆಚ್ಚುವರಿ ಎಂದು ಘೋಷಿಸಲ್ಪಟ್ಟರೆ, ವಿವರಗಳನ್ನು ಒದಗಿಸಬಹುದು: | ನಮಗೆ ತಿಳಿಸಿದಂತೆ ಒಟ್ಟು 189.42 ಎಕರೆ 387.35 ಗುಂಟೆಯನ್ನು ಅತಿಕ್ರಮಿಸಲಾಗಿದೆ ಮತ್ತು ಅತಿಕ್ರಮಣವನ್ನು ತೆರವುಗೊಳಿಸಲು ಅಗತ್ಯ ಪ್ರಯತ್ನ ಮತ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. |
| ಬಿ) ಪ್ರಸರಣೆಗಾಗಿ ಲಭ್ಯವಿರುವ ವಿದ್ಯುತ್ತಿಗೆ ಎದುರಾಗಿ, ವಿದ್ಯುತ್ ಬಳಕೆಯ ಪದ್ಧತಿಯು ಉತ್ಪಾದನಾ ಕಂಪನಿಗಳೊಂದಿಗೆ ಅನುಗುಣವಾಗಿದೆಯೇ? ಇಲ್ಲದಿದ್ದರೆ, ಯಾವುದೇ ನಷ್ಟದ ಪ್ರಯುಕ್ತ, ವಿದ್ಯುತ್ ಉತ್ಪಾದನಾ ಕಂಪನಿಗಳು ಮಾಡಿರುವ ಕ್ಲೇಮಿನ ಬಗ್ಗೆ ಅಭಿಪ್ರಾಯ ಸಲ್ಲಿಸಬಹುದಾಗಿದೆ. | ನಮಗೆ ತಿಳಿಸಿದಂತೆ ಪ್ರಸರಣೆಗಾಗಿ ಲಭ್ಯವಿರುವ ವಿದ್ಯುತ್ತಿಗೆ ಎದುರಾಗಿ, ವಿದ್ಯುತ್ ಬಳಕೆಯ ಪದ್ಧತಿಯು ಉತ್ಪಾದನಾ ಕಂಪನಿಗಳೊಂದಿಗೆ ಅನುಗುಣವಾಗಿದೆ. ವಿದ್ಯುತ್ ಉತ್ಪಾದನಾ ಕಂಪನಿಗಳು ನಷ್ಟದ ಪ್ರಯುಕ್ತ, ಯಾವುದೇ ಕ್ಲೇಮ್ ಸಲ್ಲಿಸಿರುವುದಿಲ್ಲ. |

| | |
|---|---|
| ಸಿ) ಪ್ರಸಕ್ತ ವರ್ಷದಲ್ಲಿ, ನಿಗದಿತ ಪ್ರಮಾಣಕ್ಕೆದುರಾಗಿ, ಅಧಿಕ್ಯವಾಗಿರುವ ಪ್ರಸರಣ ನಷ್ಟ ಪ್ರಮಾಣವನ್ನು ಎಷ್ಟರ ಮಟ್ಟಿಗೆ ಭರಿಸಲಾಗಿದೆ, ಹಾಗೂ ಲೆಕ್ಕಪುಸ್ತಕಗಳಲ್ಲಿ ಸೂಕ್ತ ಕ್ರಮದಂತೆ ಲೆಕ್ಕೀಕರಿಸಲಾಗಿದೆಯೇ? | ನಮಗೆ ನೀಡಿದ ಮಾಹಿತಿ ಮತ್ತು ವಿವರಣೆ ಪ್ರಕಾರ 2018–19ನೇ ಸಾಲಿನ ಆರ್ಥಿಕ ವರ್ಷಕ್ಕೆ ಪ್ರಸರಣ ನಷ್ಟ ಶೇ.3.161% ಇದ್ದು ಕೆ.ಇ.ಆರ್.ಸಿ. ಇಂದ ಅನುಮೋದಿಸಲ್ಪಟ್ಟ ಶೇ.3.27% ರ ಮಿತಿಯೊಳಗಿದೆ. |
| ಡಿ) ಸಾಲ/ಅನುದಾನ/ಸಹಾಯಧನದ ಪರಿಣಾಮಕಾರಿ ಬಳಕೆಯ ಬಗ್ಗೆ ಪರಿಶೀಲಿಸುವುದು. ನಿಧಿ ಬಳಕೆಯಲ್ಲಿ ಮಾರ್ಪಾಡಾಗಿರುವ ಪ್ರಕರಣಗಳ ಪಟ್ಟಿ ಮಾಡುವುದು. | ಕಂಪನಿಯು ನಮಗೆ ಒದಗಿಸಿದ ಮಾಹಿತಿ ಮತ್ತು ನಮ್ಮ ಪರಿಶೀಲನೆ ಪ್ರಕಾರ ಅನುದಾನ/ಸಾಲದ ಬಳಕೆ ಮಾಡಲು ಪರಿಣಾಮಕಾರಿ ವ್ಯವಸ್ಥೆ ಇದೆ. ಅವಧಿ ಸಾಲಗಳ ಮೂಲಕ ಮಾಡಲಾದ ಸಾಲಗಳನ್ನು ಸಾಮಾನ್ಯವಾಗಿ ಸಾಲ ಪಡೆದ ಉದ್ದೇಶಕ್ಕಾಗಿಯೇ ಬಳಸಿಕೊಳ್ಳಲಾಗಿದೆ. ಕೆಲವು ಪ್ರಕರಣಗಳಲ್ಲಿ, ಅವಧಿ ಸಾಲಗಳನ್ನು ಯಾವ ಯೋಜನೆಗೋಸ್ಕರ ಸಾಲ ಮಂಜೂರಾಗಿದೆಯೋ ಆ ಉದ್ದೇಶಕ್ಕೆ ಸಂಪೂರ್ಣವಾಗಿ ಬಳಕೆಯಾಗಿರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ತೆಗೆದುಕೊಂಡ ಅಲ್ಪಾವಧಿಯ ಸಾಲಗಳನ್ನು ಬಂಡವಾಳ ಕಾಮಗಾರಿಗಳಿಗೆ ಮತ್ತು ಧೀರ್ಘಾವಧಿ ಸಾಲಗಳನ್ನು ಮರುಪಾವತಿಗಾಗಿ ಬಳಸಿಕೊಳ್ಳಲಾಗಿದೆ.<br><br>ಕಂಪನಿಯು, ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಗೆ ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಸಕ್ತ ವರ್ಷದಲ್ಲಿ ರೂ.6785.80 ಲಕ್ಷ ಹಾಗೂ ಹಿಂದಿನ ವರ್ಷಕ್ಕೆ ರೂ.2652.30 ಲಕ್ಷಗಳನ್ನು ಪಡೆಯಲಾಗಿದೆ. ಮುಂದುವರೆದು, ಸದರಿ ಅನುದಾನದ ಠೇವಣಿಯಿಂದ ಬಂದ ಬಡ್ಡಿ ರೂ.24.93 ಲಕ್ಷಗಳನ್ನು ಸಹ ಅನುದಾನಕ್ಕೆ ಜಮೆ ಮಾಡಲಾಗಿದೆ.<br><br>ಕಂಪನಿಯು ಪ್ರಸಕ್ತ ವರ್ಷದಲ್ಲಿ ಪಿ.ಎಸ್.ಡಿ.ಎಫ್. ಯೋಜನೆ ಅಡಿಯಲ್ಲಿ 400 ಕೆವಿ ಮತ್ತು 220 ಕೆವಿ ಸಬ್ ಸ್ಟೇಷನ್‌ಗಳಲ್ಲಿ ನವೀಕರಣ ಮತ್ತು ರಕ್ಷಣಾ ವ್ಯವಸ್ಥೆಯ ಉನ್ನತೀಕರಣಕ್ಕಾಗಿ ರೂ. 3625.00 ಲಕ್ಷಗಳನ್ನು ಹಾಗೂ ಹಿಂದಿನ ವರ್ಷದಲ್ಲಿ ರೂ.1208.40 ಲಕ್ಷಗಳನ್ನು ಸ್ವೀಕರಿಸಲಾಗಿರುತ್ತದೆ.<br><br>ಈ ನಿಟ್ಟಿನಲ್ಲಿ ನಮ್ಮ ನಿರ್ದೇಶನಗಳು ಕ್ರಮ ಸಂಖ್ಯೆ.3ರನ್ನು ಗಮನಿಸುವುದು. ನಿರ್ದೇಶನದಲ್ಲಿ ಉಲ್ಲೇಖಿಸಿದ ಅನುಬಂಧ "ಸಿ" ನಮ್ಮ ಸಮ ದಿನಾಂಕದ ವರದಿಯ ಪ್ರಕರಣದ ಕಂಡಿಕೆ 2(h) ರಲ್ಲಿ ಉಲ್ಲೇಖಿಸಿರುವಂತೆ ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳು" ವಿಷಯಗಳ ಮೇಲಿನ ವರದಿ |
| ಇ) ಐ.ಆರ್.ಆರ್. ಹಾಗೂ ಹಿಂಪಾವತಿ ಅವಧಿಯನ್ನೂ ಒಳಗೊಂಡಂತೆ ಪ್ರಮುಖ ಬಂಡವಾಳ ವೆಚ್ಚಗಳು/ ವಿಸ್ತರಣೆಯ ವೆಚ್ಚ ಪ್ರಯೋಜನ ವಿಶ್ಲೇಷಣೆಯನ್ನು ತಪಾಸಣೆಗೊಳಿಸಿ | ವಿದ್ಯುತ್ ಸರಬರಾಜು ಕಂಪನಿಗಳ ಮನವಿಯ ಮೇರೆಗೆ ಸಬ್–ಸ್ಟೇಷನ್‌ನ ಪ್ರಸರಣ ಮೂಲಸೌಕರ್ಯ ಮತ್ತು ಸಂಬಂದಿಸಿದ ಮಾರ್ಗ ಕಾಮಗಾರಿಗಳನ್ನು ಕಂಪನಿಯು ಸೃಷ್ಟಿಸಿದೆ ಎಂದು ಆಡಳಿತಮಂಡಳಿಯು ನಮಗೆ ತಿಳಿಸಿರುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಎಆರ್‌ಆರ್‌ನ್ನು ಆಧರಿಸಿ ಎಲ್ಲಾ ದರಗಳನ್ನು ನಿಗಧಿಪಡಿಸುತ್ತದೆ, ಅದು ಸಂಬಂಧಿಸಿದ ಎಲ್ಲಾ ಕಾರ್ಯಾಚರಣೆ ವೆಚ್ಚಗಳನ್ನು ಮತ್ತು ಬಂಡವಾಳ ವೆಚ್ಚದ ಕಡೆಗೆ ಸವಕಳಿಯನ್ನು ಒಳಗೊಂಡಿರುತ್ತದೆ. ಆದ್ದರಿಂದ, ನಮ್ಮ |

| | |
|---|---|
| | ಅಭಿಪ್ರಾಯದಲ್ಲಿ ಕಂಪನಿಯು ಕೆ.ಇ.ಆರ್.ಸಿ. ಯಿಂದ ನಿಗಧಿಪಡಿಸಲಾದ ಜಕಾತಿಯ ಭಾಗವಾಗಿ ಅದರ ಬಂಡವಾಳ ವೆಚ್ಚವನ್ನು ಮುಂಬರುವ ವರ್ಷಗಳಲ್ಲಿ ಪಡೆದುಕೊಳ್ಳುತ್ತದೆ.<br><br>ಅದಾಗ್ಯೂ, ಡಿಪಿಆರ್ ತಯಾರಿಸಿದ ನಂತರ ಈ ಕೆಳಗಿನ ಬದಲಾವಣೆಗಳನ್ನು ಪರಿಗಣಿಸಿ ಕಂಪನಿಯು ವೆಚ್ಚ ಲಾಭದ ವಿಶ್ಲೇಷಣೆ, ಐ.ಆರ್.ಆರ್. ಮತ್ತು ಮರುಪಾವತಿ ಅವಧಿಯನ್ನು ಪರಿಷ್ಕರಿಸುತ್ತಿಲ್ಲವಾದುದರಿಂದ ನಿಜವಾದ ವೆಚ್ಚ / ಐ.ಆರ್.ಆರ್. / ಮರುಪಾವತಿ ಅವಧಿಯನ್ನು ಹೆಚ್ಚಿಸಲು / ಕಡಿಮೆಯಾಗಲು ಕಾರಣವಾಗಬಹುದು.<br><br>1. ಯೋಜನೆಯ ವಿನ್ಯಾಸದಲ್ಲಿ ತಿದ್ದುಪಡಿ ಮತ್ತು ಯೋಜನೆಯ ವೆಚ್ಚದಲ್ಲಿನ ನಂತರದ ಬದಲಾವಣೆಯಿಂದಾಗಿ ಯೋಜನೆಯ ವೆಚ್ಚವನ್ನು ತಿದ್ದುಪಡಿ ಮಾಡದಿರುವುದು ಯೋಜನೆಯ ಒಟ್ಟು ವೆಚ್ಚದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಇದು ಕಾರ್ಯಗತಗೊಳಿಸುವಾಗ ಹೆಚ್ಚುವರಿ ಮುಂಗಡ ಪಾವತಿಗೆ ಕಾರಣವಾಗುತ್ತದೆ ಹಾಗೂ ಅದರ ವಸೂಲಿ ಕ್ಲೇಮ್‌ನ ಆಧಾರದ ಮೇಲೆ ಅವಲಂಬಿಸಿರುವುದರಿಂದ ಹಣಕಾಸು ವೆಚ್ಚದ ಮೇಲೆ ಪರಿಣಾಮಕಾರಿ ಪರಿಣಾಮ ಬೀರುತ್ತದೆ.<br><br>2. ಟರ್ನ್‌ಕೀ ಒಪ್ಪಂದಗಳಿಗೆ ಸಂಬಂಧಿಸಿದಂತೆ, ಚಾಲ್ತಿಯಲ್ಲಿರುವ ದರ / ಮಾರುಕಟ್ಟೆ ದರಪಟ್ಟಿಯ ಬದಲು ಒಪ್ಪಂದದ ದರಗಳ ಮೇಲೆ ಬೆಲೆ ವ್ಯತ್ಯಾಸದ ಹಕ್ಕುಗಳು ಮತ್ತು ಪ್ರಮಾಣ ಬದಲಾವಣೆಯ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ.<br><br>3. ಟರ್ನ್‌ಕೀ ಒಪ್ಪಂದದ ಟೆಂಡರ್ ದಾಖಲೆಗಳು ಮತ್ತು ಬೆಲೆ ಬದಲಾವಣೆಯ ಅನ್ವಯಿಕೆಗೆ ಸಂಬಂಧಿಸಿದ ಸುತ್ತೋಲೆಗಳಲ್ಲಿ ನಿರ್ಮಾಣದ ಮೇಲೆ ಬೆಲೆ ಬದಲಾವಣೆಯ ಪ್ರಕ್ರಿಯೆಗೆ ಸೂಕ್ತ ಸ್ಪಷ್ಟತೆ ಇಲ್ಲದಿರುವುದು ಮತ್ತು ಇದರಲ್ಲಿ ನಿರ್ಮಾಣದ ಭಾಗದಲ್ಲಿ ಶುದ್ಧ ಕಾರ್ಮಿಕ ವೆಚ್ಚ ಮಾತ್ರ ಒಳಗೊಂಡಿರುತ್ತದೆ. |

**ಬಿ.ಪಿ.ರಾವ್ ಮತ್ತು ಕಂಪನಿ**
ಸನ್ನದಿತ ಲೆಕ್ಕಿಗರು
ಸಂಸ್ಥೆ ನೋ.ಸಂ:003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಸ್ಥಳ : ಬೆಂಗಳೂರು**
**ದಿನಾಂಕ : 26.09.2019**

# ಅಂಕುಶ್ ಸೇಥಿ

**ಅಭ್ಯಾಸ ನಿರತಕಂಪನಿ ಕಾರ್ಯದರ್ಶಿ**

# 509, 2ನೇ ಮುಖ್ಯರಸ್ತೆ, 2 ನೇ ಬ್ಲಾಕ್,
ಹೆಚ್.ಎಂ.ಟಿ ಲೇಔಟ್, ನಾಗಸಂದ್ರ ಪೋಸ್ಟ್,
ಬೆಂಗಳೂರು – 560 073
ದೂರವಾಣಿ. ಸಂ : +91–9036806925.
ಮಿಂಚಂಚೆ: cs.ankushsethi@gmail.com.


## ನಮೂನೆ ಎಂ ಆರ್–3

## ಸೆಕ್ರೆಟೇರಿಯಲ್ ಪರಿಶೋಧನಾ ವರದಿ

## 2019ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ

[ಕಂಪನಿ ಕಾಯ್ದೆ 2013ರ ಪ್ರಕರಣ 204(1)ಹಾಗೂ ಕಂಪನಿ (ನೇಮಕಾತಿ ಮತ್ತು ಸಿಬ್ಬಂದಿಯ ಸಂಭಾವನೆ) ನಿಯಮಗಳು, 2014 ರ ನಿಯಮ 9ರ ಅನುಸಾರವಾಗಿ]

**ಗೆ,**

ಸದಸ್ಯರು,

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,**

ಸಿಐಎನ್: ಯು40109ಕೆಎ1999ಎಸ್‌ಜಿ.ಸಿ025521,

ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–09.

ನಾನು ಮಾರ್ಚ್ 31, 2019 ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷಕ್ಕೆ ('ಲೆಕ್ಕ ಪರಿಶೋಧಕ ಅವಧಿ') ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಇನ್ನು ಮುಂದೆ 'ಕಂಪನಿ' ಎಂದು ಕರೆಯಲಾಗುತ್ತದೆ) ಅನ್ವಯಿಸುವ ಶಾಸನಬದ್ಧ ನಿಬಂಧನೆಗಳ ಅನುಸರಣೆ ಮತ್ತು ಉತ್ತಮ ಕಾರ್ಪೋರೇಟ್ ಅಭ್ಯಾಸಗಳಿಗೆ ಅನುಸಾರವಾಗಿ ಸೆಕ್ರೆಟೇರಿಯಲ್ ಆಡಿಟ್‌ನ್ನು ನಡೆಸಿದ್ದೇನೆ. ಸಾಂಸ್ಥಿಕ ನಡವಳಿಕೆಗಳು/ಶಾಸನಬದ್ಧ ಅನುಸರಣೆಯನ್ನು ಮೌಲ್ಯಮಾಪನ ಮಾಡಲು ಮತ್ತು ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಮಗೆ ಸಮಂಜಸವಾದ ಆಧಾರವನ್ನು ಒದಗಿಸುವ ರೀತಿಯಲ್ಲಿ ಸೆಕ್ರೆಟರಿಯಲ್‌ಆಡಿಟ್ ನಡೆಸಲಾಯಿತು.

ಕಂಪನಿಯ ಲೆಕ್ಕಪುಸ್ತಕ, ಕಾಗದ ಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ಕಂಪನಿಯು ನಿರ್ವಹಿಸಿರುವ ಇತರೆ ದಾಖಲೆಗಳು, ಸೆಕ್ರೆಟೇರಿಯಲ್ ಪರಿಶೋಧನೆಯ ಸಮಯದಲ್ಲಿ ಕಂಪನಿ, ಕಂಪನಿಯ ಅಧಿಕಾರಿಗಳು, ಕಾರ್ಯಭಾರಿಗಳು, ಅಧಿಕೃತ ಪ್ರತಿನಿಧಿಗಳು ಒದಗಿಸಿರುವ ಮಾಹಿತಿಗಳ ಬಗ್ಗೆ ನಡೆಸಿದ ನನ್ನ ವರದಿಯನ್ನು ಆಧರಿಸಿ, ನನ್ನ ಅಭಿಪ್ರಾಯದ ಪ್ರಕಾರ, 2019ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷದ ಪರಿಶೋಧನೆಯ ಸಮಯದಲ್ಲಿ, ಕಂಪನಿಯು ಕೆಳಗೆ ತಿಳಿಸಿರುವ ಶಾಸನಬದ್ಧ ಅವಕಾಶಗಳನ್ನು ಪಾಲಿಸಿದೆ, ಹಾಗೂ ಈ ಮುಂದೆ ಸಲ್ಲಿಸಿರುವ ವರದಿಗೆ ಒಳಪಟ್ಟಂತೆ, ಆ ಮಟ್ಟಿಗೆ ಸೂಕ್ತ ನಿಗಮ ವ್ಯವಹರಣೆ ಹಾಗೂ ಅನುಸರಣಾ ಯಾಂತ್ರಿಕತೆಯ ಕಾರ್ಯಪ್ರಕ್ರಿಯೆಯನ್ನು ಹೊಂದಿದೆ.

ಕೆಳಕಂಡ ಅವಕಾಶಗಳ ಪ್ರಕಾರ, 2019ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ ಕಂಪನಿಯು ನಿರ್ವಹಿಸಿರುವ ಲೆಕ್ಕಪುಸ್ತಕ, ಕಾಗದಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ನಿರ್ವಹಿತ ಇತರೆ ದಾಖಲೆಗಳನ್ನು ತಪಾಸಣೆಗೊಳಪಡಿಸಿದ್ದೇವೆ:

i. ಕಂಪನಿ ಕಾಯ್ದೆ, 2013('ಕಾಯ್ದೆ') ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು;

ii. ಸೆಕ್ಯುರಿಟೀಸ್ ಒಪ್ಪಂದಗಳ (ನಿಬಂಧನೆಗಳು) ಕಾಯ್ದೆ, 1956 ('ಎಸ್‌ಸಿಆರ್‌ಎ') ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು–**ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ಯಾವುದೇ ವರದಿ ಮಾಡಬಹುದಾದ ಘಟನೆ ಇಲ್ಲದಿರುವುದರಿಂದ ಅನ್ವಯಿಸುವುದಿಲ್ಲ;**

iii. ವಿದೇಶಿ ವಿನಿಮಯ ನಿರ್ವಹಣೆಕಾಯ್ದೆ, 1999 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು, ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಹಾಗೂ ಬಾಹ್ಯ ವಾಣಿಜ್ಯ ಸಾಲ ಪಡೆಯುವಿಕೆಯ ಮಟ್ಟಿಗೆ – **ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ಯಾವುದೇ ವರದಿ ಮಾಡಬಹುದಾದ ಘಟನೆ ಇಲ್ಲದಿರುವುದರಿಂದ ಅನ್ವಯಿಸುವುದಿಲ್ಲ;**

iv. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013

v. ಸರಕು ಮತ್ತು ಸೇವೆಗಳ ಕಾಯ್ದೆ 2017–ರಿಟರ್ನ್ಸ್ ಸಲ್ಲಿಸುವಮಟ್ಟಿಗೆ.

vi. ಆದಾಯ ತೆರಿಗೆ ಕಾಯ್ದೆ, 1962.

ಕಂಪನಿಗೆ ಅನ್ವಯವಾಗುವ ಕಾಯ್ದೆ, ಕಾನೂನುಗಳು, ನಿಯುಮಗಳು ಮಾರ್ಗಸೂಚಿಗಳ ಅಡಿಯಲ್ಲಿ ಅನುಸರಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವ ಬಗ್ಗೆ ನಾನು ಕಂಪನಿಯು ಸ್ಥಾಪಿಸಿರುವ ವ್ಯವಸ್ಥೆಗಳನ್ನು ಹಾಗೂ ಕಾರ್ಯವಿಧಾನಗಳನ್ನು ಪರಿಶೀಲಿಸಿದ್ದೇನೆ ಮತ್ತು ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

1. ಗಾಳಿ (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1961
2. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974
3. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್‌ಕಾಯ್ದೆ, 1977
4. ಪರಿಸರ (ರಕ್ಷಣೆ) ಕಾಯ್ದೆ, 1986
5. ಗ್ರಾಹಕ ರಕ್ಷಣೆ ಕಾಯ್ದೆ, 1986
6. ಕೈಗಾರಿಕ ವಿವಾದಗಳ ಕಾಯ್ದೆ, 1947
7. ಕಾರ್ಖಾನೆಗಳ ಕಾಯ್ದೆ, 1948
8. ಮಾತೃತ್ವ ಸೌಲಭ್ಯಕಾಯ್ದೆ
9. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯ್ದೆ, 1970 –ವಿಷಯವು ಉಪನ್ಯಾಯವಾದ್ದರಿಂದ ಅದರ ಬಗ್ಗೆ ಪ್ರತಿಕ್ರಿಯಿಸಲು ದೂರವಿರುತ್ತೇವೆ
10. ಬೋನಸ್ ಪಾವತಿಕಾಯ್ದೆ, 1956
11. ವೇತನ ಪಾವತಿಕಾಯ್ದೆ, 1936

ಕಂಪನಿಗೆ ನಿರ್ದಿಷ್ಟವಾಗಿ ಅನ್ವಯವಾಗುವ ಈ ಕೆಳಕಂಡ ಕಾಯ್ದೆ, ಕಾನೂನುಗಳನ್ನು ಆಡಳಿತ ವರ್ಗದವರು ಗುರುತಿಸಿ ಖಚಿತಪಡಿಸಿರುತ್ತಾರೆ.

a. ವಿದ್ಯುಚ್ಛಕ್ತಿ ಕಾಯ್ದೆ, 2003 ಮತ್ತು ಅದರಡಿಯಲ್ಲಿ ರೂಪಿಸಿರುವ ನಿಯಮಗಳು ಮತ್ತು ನಿರ್ದಿಷ್ಟವಾಗಿ ಕವಿನಿ ಆಯೋಗದ (ಕೆಇಆರ್‌ಸಿ) ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಮತ್ತು ನಿಯಂತ್ರಣ ಕಾರ್ಯವಿಧಾನ.

b. ಕೇಂದ್ರ ವಿದ್ಯುತ್‌ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಮತ್ತು ಮಾನದಂಡಗಳು) ನಿಯಮಗಳು 2010

c. ಕೇಂದ್ರ ವಿದ್ಯುತ್ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು 2010

d. ಭಾರತೀಯ ವಿದ್ಯುತ್‌ಗ್ರಿಡ್‌ಕೋಡ್ ನಿಯಮಗಳು 2010

e. ಕೇಂದ್ರ ವಿದ್ಯುತ್ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಮತ್ತು ಮಾರ್ಗಗಳ ನಿರ್ಮಾಣ, ಕಾರ್ಯಾಚರಣೆಗಳು ಮತ್ತು ನಿರ್ವಹಣೆಗೆ ಸುರಕ್ಷತಾ ಅವಶ್ಯಕತೆಗಳು) ನಿಯಮಗಳು 2011

f. ಇಂಧನ ಸಂರಕ್ಷಣಾ ಕಾಯ್ದೆ, 2011

g. ಕವಿನಿ ಆಯೋಗ (ಸಾಮಾನ್ಯ ಮತ್ತು ನಡವಳಿಕೆಯ ನಡಾವಳಿಗಳು) ನಿಯಮಗಳು, 2000

h. ಕವಿನಿ ಆಯೋಗ (ಪರವಾನಗಿ) ನಿಯಮಗಳು, 2000

i. ಕವಿನಿ ಆಯೋಗ (ಶುಲ್ಕ) ನಿಯಮಗಳು, 2016

j. ಕವಿನಿ ಆಯೋಗ (ದರಪಟ್ಟಿ) ನಿಯಮಗಳು, 2000

k. ಕವಿನಿ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿನ ವೆಚ್ಚವನ್ನು ಮರುಪಡೆದುಕೊಳ್ಳುವುದು) ನಿಯಮಗಳು, 2004

l. ಕವಿನಿ ಆಯೋಗ (ವಿದ್ಯುತ್ ಸರಬರಾಜು) ಕೋಡ್, 2004

m. ಕರ್ನಾಟಕ ವಿದ್ಯುಚ್ಛಕ್ತಿಗ್ರಿಡ್‌ಕೋಡ್, 2005

n. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಸೇವಾ ನಿಯಮಗಳು.

o. ಅರಣ್ಯ (ಸಂರಕ್ಷಣೆ) ಕಾಯ್ದೆ, 1980

p. ಕರ್ನಾಟಕ ರಾಜ್ಯದ ವಿತರಣಾ ಪರವಾನಗಿದಾರರ ವಿದ್ಯುತ್ ಸರಬರಾಜು ನಿಯಮಗಳು, ಗೆಜೆಟ್ ಅಧಿಸೂಚನೆ ದಿನಾಂಕ:17.06.2006

q. ಕವಿನಿ ಆಯೋಗದ ಅಧಿಸೂಚನೆ ಸಂಖ್ಯೆ: ಕವಿನಿಆ/ಸಿಐಎಸ್/ಡಿ/07/10 ದಿನಾಂಕ:01.07.2016.

ನಾನು ಈ ಕೆಳಗಿನವುಗಳ ಅನುಪಾಲನೆಯನ್ನು ಸಹ ಪರಿಶೀಲಿಸಿದ್ದೇನೆ.

I. ಇನ್ಸ್ಟಿಟ್ಯೂಟ್‌ಆಫ್ ಕಂಪನಿ ಸೆಕ್ರೆಟರೀಸ್‌ಆಫ್‌ಇಂಡಿಯಾ ಹೊರಡಿಸಿದ ನಿರ್ದೇಶಕರ ಮಂಡಳಿಯ ಸಭೆಗಳು (ಎಸ್‌ಎಸ್–1) ಮತ್ತು ಸಾಮಾನ್ಯ ಸಭೆಗಳ (ಎಸ್‌ಎಸ್–2)ಗೆ ಸಂಬಂಧಿಸಿದ ಕಾರ್ಯದರ್ಶಿ ಮಾನದಂಡಗಳು.

II. ಸ್ಟಾಕ್‌ಎಕ್ಸ್ಚೇಂಜ್(ಗಳ) ನೊಂದಿಗೆ ಕಂಪನಿಯು ನಮೂದಿಸಿದ ಪಟ್ಟಿ ಒಪ್ಪಂದಗಳು – **ಕಂಪನಿ ಭದ್ರತೆಗಳನ್ನು ಯಾವುದೇ ಸ್ಟಾಕ್ ಎಕ್ಸ್ಚೇಂಜ್‌ಗಳಲ್ಲಿ ಪಟ್ಟಿ ಮಾಡದ ಕಾರಣ ಅನ್ವಯಿಸುವುದಿಲ್ಲ**.

ಪರಿಶೀಲನೆಯ ಅವಧಿಯಲ್ಲಿ, ಕಂಪನಿಯು ಈ ವರದಿಯ ಅನುಬಂಧದಲ್ಲಿ ಒದಗಿಸಲಾಗಿರುವುದನ್ನು ಹೊರತುಪಡಿಸಿ, ಮೇಲೆ ತಿಳಿಸಲಾದ ಕಾಯಿದೆ, ನಿಯಮಗಳು, ಮಾರ್ಗಸೂಚಿಗಳು. ಮಾನದಂಡಗಳು ಇತ್ಯಾದಿಗಳನ್ನು ಅನುಸರಿಸಿದೆ.

**ನಾನು ವರದಿಯನ್ನು ಮುಂದುವರಿಸಿ ತಿಳಿಸುವುದೇನೆಂದರೆ**

- ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕೇತರ ನಿರ್ದೇಶಕರು, ಸ್ವಾಯತ್ತ ನಿರ್ದೇಶಕರು ಮತ್ತು ಮಹಿಳಾ ನಿರ್ದೇಶಕರ ಸರಿಯಾದ ಸಮತೋಲನದೊಂದಿಗೆ ಕಂಪನಿಯ ನಿರ್ದೇಶಕರ ಮಂಡಳಿಯನ್ನು ರಚಿಸಲಾಗಿದೆ.
- ಕಂಪನಿಯು, ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ.
  - ಲೆಕ್ಕ ಪರಿಶೋಧನಾ ಸಮಿತಿ
  - ಸಾಲ ಪಡೆಯುವಿಕೆ ಉಪ ಸಮಿತಿ
  - ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ
  - ಸಂಯೋಜಿತ ಕೇಂದ್ರ ಖರೀದಿ ಸಮಿತಿ
- ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ನಿರ್ದೇಶಕರ ಮಂಡಳಿಯ ಬದಲಾವಣೆಗಳನ್ನು (ಸಮಿತಿಗಳ ಪರಿಣಾಮದಿಂದಾಗಿ) ಕಾಯ್ದೆಯ ನಿಬಂಧನೆಗಳಿಗೆ ಅನುಸಾರವಾಗಿ ನಡೆಸಲಾಯಿತು.
- ಮಂಡಳಿ ಮತ್ತು ಅದರ ಸಮಿತಿಯ ಎಲ್ಲಾ ನಿರ್ಧಾರಗಳನ್ನು ಅಗತ್ಯ ಬಹುಮತದೊಂದಿಗೆ ನಡೆಸಲಾಯಿತು.
- ಎಲ್ಲಾ ಸಭೆಯ (ಗಳ) ನಡಾವಳಿಗಳನ್ನು ಸರಿಯಾಗಿ ನಿರ್ವಹಿಸಲಾಗುತ್ತಿದೆ.
- ಸಂಸ್ಥೆಯ ರಚನೆಯ ಕಾರಣ; ಮಂಡಳಿಯ ಸಭೆಗಳಿಗೆ ಸಾಕಷ್ಟು ಸೂಚನೆ ನೀಡಲಾಗುತ್ತದೆ ಮತ್ತು ಅಗತ್ಯವಾದ ಅಜೆಂಡಾ ಪತ್ರಿಕೆಗಳನ್ನು ಮುಂಚಿತವಾಗಿಯೇ ಕಳುಹಿಸಲಾಗಿದೆ.

**ನಾನು ವರದಿಯನ್ನು ಮುಂದುವರಿಸಿ ತಿಳಿಸುವುದೇನೆಂದರೆ**

ಕಂಪನಿಯು ಸ್ಥಾಪಿಸಿದ ಅನುಸರಣೆ ಕಾರ್ಯವಿಧಾನದ ಪರಿಶೀಲನೆಯ ಆಧಾರದ ಮೇಲೆ, ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಖಚಿತಪಡಿಸಿಕೊಳ್ಳಲು ಕಂಪನಿಯು ಅದರ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಅನುಗುಣವಾಗಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು ಜಾರಿಯಲ್ಲಿವೆ ಎಂದು ನಾನು ಅಭಿಪ್ರಾಯಪಟ್ಟಿದ್ದೇನೆ.

**ನಾನು ವರದಿಯನ್ನು ಮುಂದುವರಿಸಿ ತಿಳಿಸುವುದೇನೆಂದರೆ**

ಲೆಕ್ಕಪರಿಶೋಧನೆಯ ಅವಧಿಯಲ್ಲಿ ಮೇಲೆ ತಿಳಿಸಲಾದ ಕಾನೂನುಗಳು, ನಿಯಮಗಳು, ಮಾರ್ಗಸೂಚಿಗಳು, ಮಾನದಂಡಗಳು ಇತ್ಯಾದಿಗಳ ಅನುಸಾರವಾಗಿ ಕಂಪನಿಯ ವ್ಯವಹಾರಗಳ ಮೇಲೆ ಯಾವುದೇ ಪ್ರಮುಖ ಘಟನೆಗಳು / ಕಾರ್ಯಗಳು ಇರಲಿಲ್ಲ.

ಸಹಿ/–

**ಅಂಕುಶ್ ಸೇತಿ**

ಎಂಇಎಂ ಸಂಖ್ಯೆ: 42050

ಸಿ.ಪಿ. ಸಂಖ್ಯೆ: 15741

**ಸ್ಥಳ : ಬೆಂಗಳೂರು**

**ದಿನಾಂಕ : 11–11–2019**

# ಅನುಬಂಧ– ಎ

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ,**

**ಸಮ ದಿನಾಂಕದ ನನ್ನ ವರದಿಯನ್ನು ಈ ಪತ್ರದೊಂದಿಗೆ ಪರಾಮರ್ಶಿಸುವುದು.**

1. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ನಿರ್ವಹಣೆಯು ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ನಾವು ನಡೆಸಿದ ಪರಿಶೋಧನೆಯಲ್ಲಿ ಒಳಪಡಿಸಿದ ಈ ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನಮ್ಮ ಜವಾಬ್ದಾರಿಯಾಗಿರುತ್ತದೆ.
2. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿನ ಅಂಶಗಳ ನಿಖರತೆಯ ಬಗ್ಗೆ ಯುಕ್ತ ಖಚಿತತೆಯನ್ನು ಪಡೆದುಕೊಳ್ಳಲು ಯುಕ್ತವಾದ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳನ್ನು ಅನುಸರಿಸಿದ್ದೇನೆ. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿ ನಿಖರ ಅಂಶಗಳನ್ನು ಬಿಂಬಿಸಿರುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ಆಧಾರದ ಮೇಲೆ ಪರಿಶೀಲನೆಯನ್ನು ನಡೆಸಲಾಯಿತು. ನಾವು ಅನುಸರಿಸಿದ ಯುಕ್ತ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳು ನಮ್ಮ ಅಭಿಪ್ರಾಯ ಸಲ್ಲಿಕೆಗೆಯುಕ್ತ ಆಧಾರಗಳಾಗಿವೆ ಎಂದು ನಂಬಿದ್ದೇನೆ.
3. ಕಂಪನಿಯ ಲೆಕ್ಕಪತ್ರಗಳು ಹಾಗೂ ಆರ್ಥಿಕ ನಿರೂಪಣಾ ಪಟ್ಟಿಗಳ ಯುಕ್ತತೆ ಹಾಗೂ ನಿಖರತೆಯನ್ನು ನಾವು ಪರಿಶೀಲಿಸಿರುವುದಿಲ್ಲ.
4. ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು ಹಾಗೂ ಮಹತ್ವ ಸಂಭವಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವೆಡೆಯಲ್ಲೆಲ್ಲಾ ವ್ಯವಸ್ಥಾಪಕ ಮಂಡಳಿಯ ಹೇಳಿಕೆಗಳನ್ನು ಪಡೆದುಕೊಂಡಿದ್ದೇವೆ.
5. ನಿಗಮದ ಅವಕಾಶಗಳು ಹಾಗೂ ಇತರ ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು, ನಿರ್ದಿಷ್ಟತೆಗಳನ್ನು ವ್ಯವಸ್ಥಾಪಕ ಮಂಡಳಿಯು ಪಾಲಿಸತಕ್ಕದ್ದು. ನಮ್ಮ ಪರಿಶೀಲನೆಯು ಪರೀಕ್ಷಾ ಆಧಾರದಂತೆ ಕಾರ್ಯಪ್ರಕ್ರಿಯೆಯನ್ನು ಪರಿಶೀಲಿಸುವುದಕ್ಕೆ ಸೀಮಿತವಾಗಿತ್ತು.
6. ಸೆಕ್ರೆಟೇರಿಯಲ್ ಪರಿಶೋಧನಾ ವರದಿಯು, ಭವಿಷ್ಯದಲ್ಲಿ ಕಂಪನಿಯ ಕಾರ್ಯಸಾಧ್ಯತೆಯನ್ನು ಖಚಿತಪಡಿಸುವ ಅಥವಾ ವ್ಯವಸ್ಥಾಪಕ ಮಂಡಳಿಯು ಕಂಪನಿಯ ವ್ಯವಹರಣೆಗಳನ್ನು ಪರಿಣಾಮಕಾರಿಯಾಗಿ ಅಥವಾ ದಕ್ಷತಾಬದ್ಧವಾಗಿ ನಡೆಸಿರುವ ಸಂಬಂಧವಾಗಿಲ್ಲ.

ಸಹಿ/–

**ಅಂಕುಶ್ ಸೇತಿ**

ಎಂಇಎಂ ಸಂಖ್ಯೆ: 42050

ಸಿ.ಪಿ. ಸಂಖ್ಯೆ: 15741

**ಸ್ಥಳ : ಬೆಂಗಳೂರು**

**ದಿನಾಂಕ : 11–11–2019**

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಆಯವ್ಯಯ ಪಟ್ಟಿ 31.03.2019 ರಂದು ಇದ್ದಂತೆ

(ಮೊಬಲಗು ರೂ.ಗಳಲ್ಲಿ)

| ವಿವರಗಳು | ಟಿಪ್ಪಣಿ ಸಂಖ್ಯೆ | ಲೆಕ್ಕ ಸಂಕೇತ | 31 ಮಾರ್ಚ್–2019 ರ ವರ್ಷಾಂತ್ಯಕ್ಕೆ ಇದ್ದಂತೆ | | 31 ಮಾರ್ಚ್–2018 ರ ವರ್ಷಾಂತ್ಯಕ್ಕೆ ಇದ್ದಂತೆ | |
|---|---|---|---|---|---|---|
| **ಆಸ್ತಿಗಳು** | | | | | | |
| **ಪ್ರಸಕ್ತವಲ್ಲದ ಆಸ್ತಿಗಳು** | | | | | | |
| (a) ಸ್ಥಾವರ ಸ್ವತ್ತು ಮತ್ತು ಸಲಕರಣೆ | 2 | 10, 12 & 16.2 | 11609 58 79 870 | | 10624 47 99 800 | |
| (b) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು | 3 | 14 & 15 | 3625 25 38 940 | | 3083 26 45 509 | |
| (c) ಇತರೆ ಅಮೂರ್ತ ಸ್ವತ್ತುಗಳು | 3A | 18 | 1 08 69 755 | | – | |
| (d) ವಹಿವಾಟಿನ ವರ್ಗಾವಣೆ ಹಕ್ಕು | | | | | | |
| (e) ಆರ್ಥಿಕ ಆಸ್ತಿಗಳು | | | | | | |
| (1) ಇತರೆ | 4 | 25 to 27 & 28 | 114 11 42 938 | | 92 04 72 840 | |
| (f) ಇತರೆ ಪ್ರಸಕ್ತವಲ್ಲದ ಆಸ್ತಿಗಳು | 5 | 17,25,26,27,28,28.4 to 28.9 & 31 to 37 | 726 11 66 741 | 16076 15 98 244 | 652 71 13 917 | 14452 50 32 066 |
| **ಪ್ರಸಕ್ತ ಆಸ್ತಿಗಳು** | | | | | | |
| (a) ದಾಸ್ತಾನು | 6 | 22 & 16.1 | 72 93 06 821 | | 60 81 41 199 | |
| (b) ಆರ್ಥಿಕ ಸ್ವತ್ತುಗಳು | | | | | | |
| (i) ವ್ಯವಹಾರದ ಸ್ವೀಕೃತಿಗಳು | 7 | 23 & 28.1 | 676 96 36 612 | | 661 95 30 785 | |
| (ii) ನಗದು ಮತ್ತು ನಗದಿಗೆ ಸಮಾನವಾದದ್ದು | 8 | 20 & 24 | 52 74 59 151 | | 130 31 40 350 | |
| (iii) ಇತರೆ ಬ್ಯಾಂಕ್ ಉಳಿಕೆಗಳು | 9 | 24.8 & 20.2 | 106 95 97 056 | | 90 30 80 779 | |
| (iv) ಸಾಲಗಳು | 10 | 25 & 27 | 9 78 61 258 | | 3 31 84 657 | |
| (v) ಇತರೆ ಆರ್ಥಿಕ ಆಸ್ತಿಗಳು | 11 | 28 | 251 17 72 777 | | 234 05 72 280 | |
| (c) ಇತರೆ ಪ್ರಸಕ್ತ ಆಸ್ತಿಗಳು | 12 | 16,28.1 to 28.9 | 6 99 73 910 | 1177 56 07 585 | 3 91 39 724 | 1184 67 89 774 |
| **ಒಟ್ಟು ಆಸ್ತಿಗಳು** | | | | **17253 72 05 829** | | **15637 18 21 840** |
| **ಸ್ವಾಮ್ಯ & ಹೂಣೆಗಾರಿಕೆಗಳು** | | | | | | |
| **ಸ್ವಾಮ್ಯ** | | | | | | |
| (a) ಸ್ವಾಮ್ಯ ಷೇರು ಬಂಡವಾಳ | 13 | 52.301 | 2182 32 25 000 | | 2182 32 25 000 | |
| (b) ಇತರೆ ಸ್ವಾಮ್ಯ | 14 | 55 to 58 | 2305 87 28 881 | | 2093 70 23 942 | |
| **ಒಟ್ಟು ಸ್ವಾಮ್ಯ** | | | | **4488 19 53 881** | | **4276 02 48 942** |
| **ಪ್ರಸಕ್ತವಲ್ಲದ ಹೊಣೆಗಾರಿಕೆಗಳು** | | | | | | |
| (a) ಆರ್ಥಿಕ ಹೊಣೆಗಾರಿಕೆಗಳು | | | | | | |
| (i) ಸಾಲಗಳು | 15 | 51 to 54 | 5258 77 81 522 | | 4619 88 66 775 | |
| (ii) ಇತರ ಹಣಕಾಸಿನ ಹೊಣೆಗಾರಿಕೆಗಳು | 15A | | 253 61 09 195 | | 461 06 57 919 | |
| (b) ಹವಣಿಕೆಗಳು | 16 | 44 | 226 67 84 131 | | 173 14 76 182 | |
| (c) ಮುಂದೂಡಿದ ತೆರಿಗೆ ಹೊಣೆ (ನಿವ್ವಳ) | 17 | 46.802 | 950 84 29 826 | | 898 22 89 128 | |
| (d) ಇತರೆ ಪ್ರಸಕ್ತವಲ್ಲದ ಹೊಣೆಗಾರಿಕೆಗಳು | 18 | 42 to 53 | 1893 06 89 813 | 8582 97 94 487 | 1670 64 29 666 | 7822 97 19 670 |
| **ಪ್ರಸಕ್ತ ಹೊಣೆಗಾರಿಕೆಗಳು** | | | | | | |
| (a) ಆರ್ಥಿಕ ಹೊಣೆಗಾರಿಕೆಗಳು | | | | | | |
| (i) ಸಾಲಗಳು | 19 | 51 to 54 | 150 00 20 000 | | 158 33 33 123 | |
| (ii) ವ್ಯವಹಾರದ ಪಾವತಿಗಳು | 20 | 41 | 684 26 61 486 | | 710 60 58 214 | |
| (iii) ಇತರೆ ಆರ್ಥಿಕ ಹೊಣೆಗಾರಿಕೆಗಳು | 21 | 46.9 | 2095 99 46 913 | | 1409 76 74 473 | |
| (b) ಇತರೆ ಪ್ರಸಕ್ತ ಹೊಣೆಗಾರಿಕೆಗಳು | 22 | 42 to 46 | 295 57 92 606 | | 280 59 41 424 | |
| (c) ಹವಣಿಕೆಗಳು | 23 | 42,44,46 | 956 70 36 456 | | 934 52 90 638 | |
| (d) ಪ್ರಸ್ತುತ್ತ ಆದಾಯ ತೆರಿಗೆ ಹೊಣೆಗಾರಿಕೆಗಳು (ನಿವ್ವಳ) | 24 | 46.8 | | 4182 54 57 461 | 44 35 55 356 | 3538 18 53 228 |
| **ಒಟ್ಟು ಸ್ವಾಮ್ಯ ಮತ್ತು ಹೂಣೆಗಾರಿಕೆಗಳು** | | | | **17253 72 05 829** | | **15637 18 21 840** |

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು
1 – 37 ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
**ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
**(ಡಾ॥ ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಆರ್. ನಾಗರಾಜ)**
ನಿರ್ದೇಶಕರು (ಹಣಕಾಸು)

ಸಹಿ/–
**(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## 31.03.2019 ರ ವರ್ಷಾಂತ್ಯದ ಲಾಭ ಮತ್ತು ನಷ್ಟ ಖಾತೆ

(ಮೊಬಲಗು ರೂ.ಗಳಲ್ಲಿ)

| ವಿವರಗಳು | ಟಿಪ್ಪಣಿ ಸಂಖ್ಯೆ | ಲೆಕ್ಕ ಸಂಕೇತ | ಪ್ರಸ್ತುತ ವರ್ಷ 2018–19 | ಕಳೆದ ವರ್ಷ 2017–18 |
|---|---|---|---|---|
| I ಕಾರ್ಯಾಚರಣೆಯಿಂದ ಬಂದ ಕಂದಾಯ (ವಿದ್ಯುತ್ ಪ್ರಸರಣ ಕಾರ್ಯದಿಂದ) | 25 | 61 & 62 | 2952 12 24 471 | 2859 53 10 195 |
| II ಇತರೆ ಆದಾಯ | 26 | 62 | 175 11 15 107 | 235 11 23 563 |
| **III ಒಟ್ಟು ಆದಾಯ (I + II)** | | | **3127 23 39 578** | **3094 64 33 758** |
| **ವೆಚ್ಚ** | | | | |
| 1. ಸಿಬ್ಬಂದಿ ವೆಚ್ಚಗಳು | 27 | 75 | 1144 24 47 087 | 873 66 92 644 |
| 2. ದುರಸ್ತಿ ಮತ್ತು ನಿರ್ವಹಣೆ | 28 | 74 | 272 43 19 852 | 215 26 46 336 |
| 3. ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು | 29 | 76 | 115 77 26 312 | 104 98 05 266 |
| 4. ಹಣಕಾಸು ವೆಚ್ಚಗಳು | 30 | 78 | 391 54 38 678 | 366 58 56 674 |
| 5. ಸವಕಳಿ ಮತ್ತು ಋಣಮುಕ್ತತೆ ವೆಚ್ಚಗಳು | 31 | 77 | 854 74 90 522 | 716 23 68 414 |
| 6. ಇತರೆ ವೆಚ್ಚಗಳು | 32 | 77, 79 & 80 | 8 31 95 031 | 5 55 35 350 |
| **IV ಒಟ್ಟು ವೆಚ್ಚಗಳು** | | | **2787 06 17 482** | **2282 29 04 684** |
| **ವಿಶೇಷ ಮತ್ತು ಅಸಾಧಾರಣ ಅಂಶಗಳು ಮತ್ತು ತೆರಿಗೆ ಮುಂಚಿನ ಲಾಭ (III – IV + V)** | | | 340 17 22 096 | 812 35 29 074 |
| ಕೂಡಿರಿ/(ಕಳೆಯಿರಿ)ಅಸಾಧಾರಣ ಅಂಶಗಳು (ಹಿಂಪಡೆಯಲಾದ ಆದಾಯ) | 34 | 62 | | |
| **ಲಾಭ/ನಷ್ಟ ತೆರಿಗೆಯ ಮುಂಚೆ** | | | 340 17 22 096 | 812 35 29 074 |
| ಪ್ರಸಕ್ತ ತೆರಿಗೆ | 35,36 | 81.1, 81.201 | 125 91 70 989 | 584 52 01 799 |
| **ಪ್ರಸಕ್ತ ಅವಧಿಯ ಲಾಭ/ನಷ್ಟ** | | | **214 25 51 107** | **227 83 27 275** |
| **ಇತರೆ ಸಮಗ್ರ ಆದಾಯ** | | | | |
| ಎ. (1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರುಹಂಚಿಕೊಳ್ಳದ ವಸ್ತುಗಳು | | | – | – |
| ಎ. (2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ | | | – | – |
| ಬಿ. (1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರುಹಂಚಿಕೊಳ್ಳುವ ವಸ್ತುಗಳು | | | – | – |
| ಬಿ. (2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ | | | – | – |
| **ವರ್ಷದ ಒಟ್ಟು ಇತರೆ ಸಮಗ್ರ ಆದಾಯ/ನಷ್ಟ (ನಿವ್ವಳ ತೆರಿಗೆ)** | | | – | – |
| **ವರ್ಷದ ಒಟ್ಟು ಸಮಗ್ರ ಆದಾಯ / (ನಷ್ಟ)** | | | **214 25 51 107** | **227 83 27 275** |

| | | |
|---|---|---|
| **ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆ (INR ನಲ್ಲಿ)** | | |
| ಷೇರಿನ ಮುಖಬೆಲೆ : INR 1,000 / – | | |
| ಮೂಲ | 98.18 | 105.73 |
| ಗುಣ ತಗ್ಗಿದ | 98.18 | 104.40 |
| **ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆಯನ್ನು ಲೆಕ್ಕಿಸಲು ಸರಾಸರಿ ತೂಕದ ಮೇಲಿನ ಸ್ವಾಮ್ಯ ಷೇರುಗಳು** | | |
| ಮೂಲ | 2 18 23 225 | 2 15 47 663 |
| ಗುಣ ತಗ್ಗಿದ | 2 18 23 225 | 2 18 23 225 |

ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕ ಪತ್ರಗಳ ಮೇಲೆ ಟಿಪ್ಪಣಿಗಳು
1 – 37 ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

**ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
**(ಡಾ॥ ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಆರ್. ನಾಗರಾಜ)**
ನಿರ್ದೇಶಕರು (ಹಣಕಾಸು)

ಸಹಿ/–
**(ರೂತ್.ಜಿ. ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ

(ಮೊಬಲಗು ರೂ.ಗಳಲ್ಲಿ)

| ವಿವರಗಳು | A. ಸ್ವಾಮ್ಯ ಷೇರು ಬಂಡವಾಳ | B.ಇತರೆ ಸ್ವಾಮ್ಯ | | | |
|---|---|---|---|---|---|
| | | ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ | ಮೀಸಲು ಮತ್ತು ಹೆಚ್ಚುವರಿ: ಬಂಡವಾಳ ಮೀಸಲು | ಮೀಸಲು ಮತ್ತು ಹೆಚ್ಚುವರಿ: ಉಳಿಸಿದ ಗಳಿಕೆ | ಒಟ್ಟು |
| ವರದಿ ಅವಧಿಯ ಆರಂಭಿಕ ಶಿಲ್ಕು (01/04/2017) | 2075 32 25 000 | 107 00 00 000 | 7 45 46 563 | 187 410 29 918 | 1988 55 76 481 |
| ಸೇರಿಸಿ / (ಕಳೆಯಿರಿ): 2017–18ರ ನಿವ್ವಳ ಹಿಂದಿನ ಅವಧಿಯ ಆದಾಯ/ (ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ) | – | | | –15 68 79 814 | –15 68 79 814 |
| **ಹೊಂದಾಣಿಕೆಯದ ಆರಂಭಿಕ ಬಾಕಿಯ ವರದಿ ಮಾಡುವ ಅವಧಿಯ ಆರಂಭದಲ್ಲಿ (01/04/2017)** | **2075 32 25 000** | **107 00 00 000** | **7 45 46 563** | **1858 41 50 104** | **1972 86 96 667** |
| ಸೇರಿಸಿ: ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2017–18ನೇ ಸಾಲಿಗೆ) | – | | – | 227 83 27 275 | 227 83 27 275 |
| 2017–18ನೇ ಸಾಲಿನಲ್ಲಿ ಹಂಚಿಕೆಯಾದ ಷೇರುಗಳು | 107 00 00 000 | –107 00 00 000 | – | – | –107 00 00 000 |
| **ವರದಿ ಅವಧಿಯ ಆರಂಭದಲ್ಲಿ (01/04/2018) ಮರು–ಹೊಂದಾಣಿಕೆಯಾದ ಆರಂಭಿಕ ಬಾಕಿ** | **2182 32 25 000** | | **7 45 46 563** | **2086 24 77 379** | **2093 70 23 942** |
| ಸೇರಿಸಿ / (ಕಳೆಯಿರಿ): 2018–19ರ ನಿವ್ವಳ ಪೂರ್ವ ಅವಧಿಯ ಆದಾಯ / (ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ) | | | | –208 46 168 | –208 46 168 |
| ಸೇರಿಸಿ: ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2018–19ನೇ ಸಾಲಿನ) | | | | 214 25 51 107 | 214 25 51 107 |
| **ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (31/03/2019)** | **2182 32 25 000** | | **7 45 46 563** | **2298 41 82 318** | **2305 87 28 881** |

ಗಮನಿಸಿ: ಕಂಪನಿಯು ಹಿಂದಿನ ವರ್ಷ ಮತ್ತು ಪ್ರಸಕ್ತ ವರ್ಷದ ನಿವ್ವಳ ಪೂರ್ವ ಅವಧಿಯ ಅಂಕಿಅಂಶಗಳನ್ನು ಮೀಸಲು ಮತ್ತು ಹೆಚ್ಚುವರಿ (ಉಳಿಸಿಕೊಂಡಿರುವ ಗಳಿಕೆ) ಗೆ ಹೊಂದಿಸಿದೆ (ಟಿಪ್ಪಣಿ ಸಂಖ್ಯೆ 33 ನೋಡಿ)

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

**ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
**(ಡಾ॥ ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಆರ್. ನಾಗರಾಜ)**
ನಿರ್ದೇಶಕರು (ಹಣಕಾಸು)

ಸಹಿ/–
**(ರೂತ್.ಜಿ. ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## 31 ಮಾರ್ಚ್–2019 ರ ಅಂತ್ಯಕ್ಕೆ ನಗದು ಹರಿವಿನ ಪಟ್ಟಿ

(ಮೊಬಲಗು ರೂ.ಗಳಲ್ಲಿ)

| | ವಿವರಗಳು | 31 ಮಾರ್ಚ್–2019 ರ ವರ್ಷಾಂತ್ಯಕ್ಕೆ ಇದ್ದಂತೆ | 31 ಮಾರ್ಚ್–2018 ರ ವರ್ಷಾಂತ್ಯಕ್ಕೆ ಇದ್ದಂತೆ |
|---|---|---|---|
| **I** | **ಕಾರ್ಯಾಚರಣೆಯಿಂದ ಬಂದ ನಗದು ಹರಿವು** | | |
| | ತೆರಿಗೆಯ ಪೂರ್ವ ಲಾಭ/ನಷ್ಟ | 340 17 22 096 | 812 35 29 074 |
| | ಹೊಂದಾಣಿಕೆಗಳು: | | |
| i | ಸವಕಳಿ ಮತ್ತು ಋಣಮುಕ್ತತೆ ವೆಚ್ಚ | 854 74 90 522 | 716 23 68 412 |
| ii | ಹಿಂದಿನ ವರ್ಷದ ಹೆಚ್ಚುವರಿ ಹವಣಿಕೆಗಳನ್ನು ಹಿಂಪಡೆಯುವುದು | – 85 60 724 | –4 91 49 633 |
| iii | ಗ್ರಾಹಕರ ಕೊಡುಗೆಯಿಂದ ಬಂದ ಆಸ್ತಿಗಳ ಮೇಲಿನ ಸವಕಳಿ | –72 05 43 501 | –49 95 48 093 |
| iv | ಉಗ್ರಾಣ ಕೊರತೆಗೆ ಹವಣಿಕೆ | 13 53 256 | 49 55 669 |
| v | ದಾಸ್ತಾನುಗಳ ಮಾರಾಟದಿಂದ ಬಂದ ಲಾಭ | – 91 36 105 | – 17 66 314 |
| vi | ನಿರುಪಯುಕ್ತ ಸಾಮಗ್ರಿಗಳ ಮಾರಾಟದಿಂದ | – 16 39 246 | – 27 34 759 |
| vii | ಬಿಡುಗಡೆ ಹೊಂದಿದ ಆಸ್ತಿಗಳ ಮಾರಾಟದಿಂದ ಬಂದ ಆದಾಯ | –5 85 12 783 | –4 29 19 440 |
| viii | ಇತರೆ ಸ್ವೀಕೃತಿಗಳು ತೊಡೆದು ಹಾಕಿರುವುದು & ವಿಶೇಷ ಅಂಶಗಳು | 3 19 29 556 | 70 99 383 |
| ix | ಬಡ್ಡಿಯಿಂದ ಬಂದ ಆದಾಯ | –5 00 90 743 | –6 00 16 200 |
| x | ಹಿಂದಿನ ಅವಧಿಯ ಹೊಂದಾಣಿಕೆ | –2 08 46 168 | –15 68 79 814 |
| xi | ಆರ್ಥಿಕ ವೆಚ್ಚಗಳು | 391 54 38 678 | 366 58 56 674 |
| | **ಕಾರ್ಯನಿರತ ಬಂಡವಾಳದ ಬದಲಾವಣೆಗೆ ಮುಂಚಿನ ಕ್ರಿಯಾತ್ಮಕ ಲಾಭ/ನಷ್ಟ** | **1502 86 04 838** | **1815 07 94 959** |
| | ಕಾರ್ಯಾಚರಣೆಯಿಂದ ಬದಲಾವಣೆ ಹೊಂದಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು | | |
| i | ಸ್ವೀಕೃತಿಗಳಲ್ಲಿನ ಹೆಚ್ಚಳ/ಕಡಿಮೆ | –15 01 05 827 | 68 90 34 618 |
| ii | ದಾಸ್ತಾನುಗಳಲ್ಲಿನ ಹೆಚ್ಚಳ/ಕಡಿಮೆ | –12 25 18 878 | 39 52 991 |
| iii | ಪ್ರಸಕ್ತ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ | –16 46 76 103 | –28 34 10 878 |
| iv | ಪ್ರಸಕ್ತ ಹೊಣೆಗಾರಿಕೆಗಳ/ ಹವಣಿಕೆಗಳಲ್ಲಿನ ಹೆಚ್ಚಳ/ಕಡಿಮೆ | 670 83 35 661 | 113 79 59 170 |
| v | ಪ್ರಸಕ್ತವಲ್ಲದ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ | –95 47 22 922 | 53 72 24 340 |
| vi | ಪ್ರಸಕ್ತವಲ್ಲದ ಬಾಧ್ಯತೆಗಳ/ ಹೊಣೆಗಾರಿಕೆಗಳಲ್ಲಿನ ಹೆಚ್ಚಳ/ಕಡಿಮೆ | 174 82 14 658 | 242 00 79 123 |
| vii | ಪ್ರಸ್ತುತವಲ್ಲದ ಹಣಕಾಸು ಹೊಣೆಗಾರಿಕೆಗಳಲ್ಲಿ ಹೆಚ್ಚಳ/(ಕಡಿಮೆಯಾದ) | –207 45 48 725 | 136 29 52 964 |
| viii | ಸಾಲಗಳಲ್ಲಿನ ಹೆಚ್ಚಳ/ಕಡಿಮೆ | –6 46 76 601 | 5 76 396 |
| | **ಕಾರ್ಯಾಚರಣೆಯಿಂದ ಉದ್ಭವಿಸಿದ ನಗದು** | **1995 39 06 101** | **2401 91 63 684** |
| | ಸೇರಿಸಿ/ಕಳೆಯಿರಿ:ಪಾವತಿಸಿದ ಆದಾಯ ತೆರಿಗೆ (ಮರುಪಾವತಿಯ ನಿವ್ವಳ) | –90 58 87 872 | –425 98 24 236 |
| | **ಕಾರ್ಯಚರಣೆಯಿಂದ ಬಂದ ನಿವ್ವಳ ಹಣದ ಒಳ ಹರಿವು (ಎ)** | **1904 80 18 229** | **1975 93 39 448** |
| **II** | **ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು** | | |
| i | ಪಿಪಿಇ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ | –2305 18 32 464 | –2113 13 79 526 |
| ii | ಬ್ಯಾಂಕ್ ಠೇವಣಿಗಳಿಂದ (3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳ ನಿವ್ವಳ ಹೆಚ್ಚಳ/ಕಡಿಮೆ) | –16 65 16 277 | –10 25 75 564 |
| iii | ಬಡ್ಡಿಯಿಂದ ಬಂದ ಆದಾಯ | 5 00 90 743 | 6 00 16 200 |
| | **ಹೂಡಿಕೆಯ ಚಟುವಟಿಕೆಗಳಿಂದ ನಿವ್ವಳ ಹಣದ ಒಳ ಹರಿವು (ಬಿ)** | **–2316 82 57 998** | **–2117 39 38 889** |
| **III** | **ಆರ್ಥಿಕ ಚಟುವಟಿಕೆಗಳಿಂದ ಹಣದ ಹರಿವು** | | |
| i | ಬಂಡವಾಳ ಕಾಮಗಾರಿಗಳಿಗಾಗಿ ಪಡೆದ ದೇಣಿಗೆ ಮತ್ತು ಅನುದಾನ | 173 18 96 938 | 88 57 80 595 |
| ii | ಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | 639 48 14 747 | 255 31 00 534 |
| iii | ಅಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | –8 92 13 123 | 157 73 92 402 |
| iv | ಆರ್ಥಿಕ ಮತ್ತು ಇತರೆ ಖರ್ಚುಗಳು | –469 29 39 992 | –426 21 71 174 |
| | **ಆರ್ಥಿಕ ಚಟುವಟಿಕೆಗಳಿಂದ ನಿವ್ವಳ ನಗದು ಒಳ ಹರಿವು (ಸಿ)** | **334 45 58 570** | **75 41 02 357** |
| | **ನಿವ್ವಳ ಬದಲಾವಣೆ ನಗದು ಮತ್ತು ನಗದಿಗೆ ಸರಿಸಮಾನವಾದುದು (ಎ+ಬಿ+ಸಿ)** | **–77 56 81 199** | **–66 04 97 085** |
| | ಕೂಡಿರಿ: ಆರಂಭಿಕ ನಗದು ಮತ್ತು ನಗದಿಗೆ ಸರಿಸಮಾನವಾದುದು 01.04.2018 ರಂತೆ | 130 31 40 350 | 196 36 37 435 |
| | **ಮುಕ್ತಾಯ ನಗದು ಮತ್ತು ನಗದಿಗೆ ಸರಿಸಮಾನವಾದುದು 31.03.2019 ರಂತೆ** | **52 74 59 151** | **130 31 40 350** |

ಟಿಪ್ಪಣಿ: 1 ಹಣ ಚಲಾವಣೆ ವಿವರಣೆ ಅನುಬಂಧವನ್ನು "ಪರೋಕ್ಷ ವಿಧಾನದಲ್ಲಿ" ಲೆಕ್ಕ ಪದ್ದತಿ–7 "ಹಣ ಚಲಾವಣೆ ವಿವರಣೆಗಳೂ" ಪ್ರಕಾರ ಪರೋಕ್ಷ ವಿಧಾನದಲ್ಲಿ ಸಿದ್ದಪಡಿಸಲಾಗಿದೆ.

ಟಿಪ್ಪಣಿ –2) ಕಂಪನಿಯು ಹೊಂದಿರುವ ನಗದು ಮತ್ತು ನಗದು ಸಮನಾದ ಬಾಕಿಗಳು 4,19,268/– ರೂ. (ಹಿಂದಿನ ವರ್ಷ: INR 5,23,940/–) ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಮತ್ತು INR 20,607/– (ಹಿಂದಿನ ವರ್ಷ : INR 13,623/–) ಫ್ಯಾಮಿಲಿ ಬೆನಿಫಿಟ್ ಫಂಡ್‌ಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನತೆಗಳು INR 7,57,47,477/– (ಹಿಂದಿನ ವರ್ಷ: INR 2,25,29,289/–) ಅಲ್ಪಾವಧಿಯ ಮುಕ್ತ ಪ್ರವೇಶ ಗ್ರಾಹಕರಿಂದ UI ಶುಲ್ಕಗಳಿಗೆ ಸಂಗ್ರಹಿಸಲಾಗಿದೆ, ಇದು ESCOM ಗೆ ಪಾವತಿಸಬೇಕಾಗುತ್ತದೆ / ಹೊಂದಿಸಬಹುದಾಗಿದೆ. ನಗದು ಮತ್ತು ನಗದು ಸಮಾನವಾದ ಐಎನ್‌ಆರ್ 5,99,461/– (ಹಿಂದಿನ ವರ್ಷ: ಐಎನ್‌ಆರ್ 25,000/–) ಮತ್ತು ಐಎನ್‌ಆರ್ 61,831/– (ಹಿಂದಿನ ವರ್ಷ: ಐಎನ್‌ಆರ್ 52,131/–) ಕ್ರಮವಾಗಿ ಜಿಇಸಿ ಮತ್ತು ಪಿಎಸ್‌ಡಿಎಫ್ ಅನುದಾನಕ್ಕೆ ಮೀಸಲಿಡಲಾಗಿದೆ

ಲಗತ್ತಿಸಲಾದ ದಿನಾಂಕದ ನಮ್ಮ ವರದಿಯ ಪ್ರಕಾರ
ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

**ಬಿ. ಪಿ. ರಾವ್ ಮತ್ತು ಕಂಪನಿ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116S

ಸಹಿ/–
**ಬಿ. ಸತೀಶ್‌ರಾವ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. : 024559

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
**(ಡಾ॥ ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಆರ್. ನಾಗರಾಜ)**
ನಿರ್ದೇಶಕರು (ಹಣಕಾಸು)

ಸಹಿ/–
**(ರೂತ್.ಜಿ. ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

**ಸ್ಥಳ : ಬೆಂಗಳೂರು**
ದಿನಾಂಕ : 26.09.2019

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಟಿಪ್ಪಣಿ : 1 ಕಂಪನಿಯ ಅವಲೋಕನ ಮತ್ತು ಗಮನಾರ್ಹ ಲೆಕ್ಕ ಪದ್ಧತಿ ನೀತಿಗಳು**

1.1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತದಲ್ಲಿ ನೆಲೆಸಿದೆ ಮತ್ತು ಸಂಘಟಿತವಾಗಿದೆ. ಇದು ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ.

ಕವಿಪ್ರನಿನಿಯು ಎಸ್ಕಾಂಗಳಿಗೆ ಹಾಗೂ ಮುಕ್ತ ಪ್ರವೇಶ ಗ್ರಾಹಕರಿಗೆ ಮತ್ತು ಇತರರಿಗೆ ವಿದ್ಯುತ್ ಪ್ರಸರಣ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿದೆ.

**1.2. ಆರ್ಥಿಕ ಪತ್ರ ಸಿದ್ಧಪಡಿಸುವಿಕೆಗೆ ಆಧಾರಗಳು**

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS) ಅನುಗುಣವಾಗಿ, ಐತಿಹಾಸಿಕ ವೆಚ್ಚ (Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ)ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು (ಟಿಪ್ಪಣಿ 1.10 (ಡಿ)ಗೆ ಒಳಪಟ್ಟಿರುತ್ತದೆ) ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ತಿದ್ದುಪಡಿ ನಿಯಮಗಳು, 2016ರಂತೆ, ಅಧಿನಿಯಮದ ಪ್ರಕರಣ 133ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. 31.03.2016ಕ್ಕೆ ಅಂತ್ಯಗೊಂಡಂತಹ ಅವಧಿಯ ಆರ್ಥಿಕ ಪಟ್ಟಿಗಳನ್ನು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ (ಹಿಂದಿನ ಭಾರತೀಯ ಜಿಎಎಪಿ) ನಿಯಮ 7ರೊಂದಿಗೆ ಓದಲಾದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚಯದ 133ರಡಿಯಲ್ಲಿ ಅಧಿಸೂಚಿತವಾದ ಲೆಕ್ಕಪತ್ರ ಮಾನದಂಡಗಳಿಗನುಗುಣವಾಗಿ ಸಿದ್ಧಪಡಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ಅಧಿಸೂಚಿಸಿದಂತೆ, ಕಡ್ಡಾಯ ಅವಶ್ಯಕತೆಗನುಸಾರವಾಗಿ, ಕಂಪನಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳ) ನಿಯಮಗಳು, 2015ರಡಿಯಲ್ಲಿ ಅಧಿಸೂಚಿತವಾದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS 101– ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆ) ಅನುಗುಣವಾಗಿ 31.03.2017ಕ್ಕೆ ಅಂತ್ಯವಾಗುವ ವರ್ಷಕ್ಕೆ ತನ್ನ ಆರ್ಥಿಕ ಪಟ್ಟಿಗಳನ್ನು ಸಿದ್ಧಪಡಿಸಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳಲ್ಲಿ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಪುನಃಸ್ಥಾಪಿಸಿ ಮಂಡಿಸಲಾಗಿದೆ. ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳಿಂದ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಸಹ ತಿಳಿಸಲಾಗಿದೆ.

ಸಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅದೃಶ್ಯವಿರುವ, ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳಿಗೆ ಪುನರಾವರ್ತನೆಯಾಗಿದೆಯೋ ಅಂತಹ ಸ್ಥಳಗಳನ್ನು ಬಿಟ್ಟು ಉಳಿದಿರುವೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಡಿ. ನಿಗಮದ ಕಾರ್ಯಾಚರಣೆ ಕಾಲಿಕವನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು, ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

**1.3. ಅಂದಾಜು ಪಟ್ಟಿಗಳ ಉಪಯೋಗ:**

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜುಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಸುವಿಕೆಗೆ ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಿಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಿಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳಲ್ಲಿ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

ಲೆಕ್ಕಶೀರ್ಷಿಕೆ "ಸಾಮಗ್ರಿಗಳ ಸರಬರಾಜಿನಲ್ಲಿ ಹಕ್ಕುಬಾಧ್ಯತೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ನಿಯಂತ್ರಣ ಲೆಕ್ಕಪತ್ರ"ದಡಿಯಲ್ಲಿ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, ಯಾವುದೇ ಕ್ಲೇಮು ಮಾಡಿಲ್ಲದ ಹಕ್ಕುಬಾಧ್ಯತೆ/ಚಾಲ್ತಿಯಲ್ಲಿರುವ ಹಕ್ಕುಬಾಧ್ಯತೆಗಳು, ಯಾವುದೇ ವಿವಾದವಿಲ್ಲದೇ 10 ವರ್ಷಗಳಿಗೂ ಮೀರಿದ ಅವಧಿಗೆ ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದಲ್ಲಿದ್ದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವುದು ಮುಂದುವರಿದರೆ, ಅವುಗಳನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗುವುದು.

**1.4. ದಾಸ್ತಾನುಗಳ ಮೌಲ್ಯೀಕರಣ:**

ಎ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ. ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.

ಬಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಿ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ 90ರ ದರದ ಪ್ರಕಾರ ಇಳಿತಗೊಳಿಸಿ, ಉಳಿದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

ಡಿ. ಬಳಕೆಯಲ್ಲಿಲ್ಲದ ಸ್ವತ್ತುಗಳ ತಗ್ಗಿದ ಮೌಲ್ಯದ ಮೇಲೆ 80%ರಷ್ಟು ದರದಂತೆ, ಬಳಕೆಯಲ್ಲಿಲ್ಲದ/ನಿರುಪಯುಕ್ತ ಸ್ವತ್ತುಗಳ ಮೇಲೆ, ನಿರ್ದಿಷ್ಟವಲ್ಲದ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗಿದೆ.

**1.5. ನಗದು ಹರಿವಿನ ವಿವರಣಾ ಪಟ್ಟಿ:**

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು –ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ, ಯಾವುದೇ ಮೂಂದೂಡಲ್ಪಡಬಹುದಾದ ಅಥವಾ ಹಿಂದಿನ ಅವಧಿಯ ಸಂಚಯನಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಹೊಂದಿರುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

**1.6. ಹಿಂದಿನ ಅವಧಿಯ ಬಾಬ್ತುಗಳು:**

ಕಂಪನಿಯು,– ಹಿಂದಿನ ಅವಧಿಯ ಗಣನೀಯವಾದ ತಪ್ಪುಗಳನ್ನು ಆವಿಷ್ಕಾರಗೊಂಡಾಗ ಅವುಗಳನ್ನು ಪೂರ್ವಾನ್ವಯವಾಗಿ ಮೊದಲ ಆರ್ಥಿಕ ವಿವರಣಾ ಪಟ್ಟಿಯ ಅನುಮೋದನೆ ನೀಡುವಾಗ ಈ ಕೆಳಕಂಡಂತೆ ಸರಿಪಡಿಸಲಾಗುವುದು.

ಎ) ತಪ್ಪು ಸಂಭವಿಸಿದ ಅವಧಿಯ/ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು ಅಥವಾ

ಬಿ) ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳೂ, ಬಾಧ್ಯತೆಗಳು ಮತ್ತು ಸ್ವಾಮ್ಯಗಳ ಪ್ರಾರಂಭಿಕ ಉಳಿಕೆಗಳನ್ನು ಪುನ: ಮಂಡಿಸುವುದು.

**1.7. ಆದಾಯ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ**

ಪ್ರಸ್ತುತ ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ. ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ. ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳಲಾಭದಿಂದ ಕಂಡುಹಿಡಿಯಲಾಗುತ್ತದೆ. ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಃಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ, ಕಂಡುಹಿಡಿಯಲಾಗುತ್ತದೆ. ವರದಿ ಮಾಡುವ ಪ್ರತೀ ದಿನಾಂಕದಂದು ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳನ್ನು ಪುನರ್ ಪರಿಶೀಲನೆ ಮಾಡಲಾಗುತ್ತದೆ ಮತ್ತು ಅದನ್ನು ಸಂಬಂಧಪಟ್ಟ ತೆರಿಗೆ ಲಾಭವನ್ನು ಅರಿಯುವ ಸಂಭವವಿಲ್ಲ ಎಂಬುವಷ್ಟರ ಮಟ್ಟಿಗೆ ಕಡಿಮೆಗೊಳಿಸಲಾಗುತ್ತದೆ. ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಬ್ಯಾಲೆನ್ಸ್ ಶೀಟ್‌ನ ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತಿ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತಿ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ. ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರಮಟ್ಟಿಗೆ ಕಂಡುಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ. ಇದಕ್ಕೆ ಪ್ರತಿಯಾಗಿ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

**1.8. ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)**

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿ ಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ

ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ. ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಕಾಮಗಾರಿ ವೃತ್ತ ಮತ್ತು ಬೃಹತ್ ಕಾಮಗಾರಿ ವಿಭಾಗದ ಸಿಬ್ಬಂದಿ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳು ನೇರವಾಗಿ ಸದರಿ ವಿಭಾಗದಲ್ಲಿ ನಿರ್ವಹಿಸಿದ ಬಂಡವಾಳ ಕಾಮಗಾರಿಗಳಿಗೆ ಸಂಬಂಧಪಟ್ಟಿರುತ್ತದೆ ಹಾಗೂ ಆಸ್ತಿ ಮೌಲ್ಯವನ್ನು ಒಳಗೊಂಡಿರುತ್ತದೆ. ಗುತ್ತಿಗೆದಾರರಿಗೆ ನೀಡಿದ ಕಾಮಗಾರಿಯನ್ನು ನಿಗಧಿತ ಅವಧಿಗಿಂತ ಮುಂಚಿತವಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆದಾರರಿಗೆ ನೀಡುವ ಪ್ರೋತ್ಸಾಹ ಧನವನ್ನು ಸದರಿ ಬಂಡವಾಳ ಕಾಮಗಾರಿಯ ವೆಚ್ಚಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಸಿ. ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ಅಂದಾಜು ಮೌಲ್ಯದ ಪ್ರಕಾರ ಲೆಕ್ಕಪುಸ್ತಕಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚು ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ. ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ'ಯಡಿಯಲ್ಲಿ ತೋರಿಸಲಾಗುತ್ತದೆ.

ಎಫ್. ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳು ಸದರಿ ವೆಚ್ಚದಿಂದ ಪಿಪಿಇಯ ಭವಿಷ್ಯದಲ್ಲಿ ಆರ್ಥಿಕ ಲಾಭವನ್ನು ಹೆಚ್ಚಿಸುವಂತಿದ್ದಲ್ಲಿ ಸದರಿ ವೆಚ್ಚವನ್ನು ವಿಶ್ವಾಸನೀಯವಾಗಿ ಲೆಕ್ಕ ಹಾಕಬಹುದಾದಾಗ ಮಾತ್ರ ಸದರಿ ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

ಜಿ. ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಃಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್. ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯಗೊಳಿಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವೂ (ನಿವ್ವಳ ವಿಲೇ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ) ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿ ಕಾರ್ಯ ಸ್ಥಗಿತಗೊಳಿಸುವ ಪ್ರಸ್ತುತ ವೆಚ್ಚವನ್ನು ಆಸ್ತಿ ಅಂದಾಜು ವೆಚ್ಚದ ಮೌಲ್ಯದಲ್ಲಿ ಪರಿಗಣಿಸಿ ಪಿ.ಪಿ.ಇ.ಗೆ ಆಸ್ತಿ ಕಾರ್ಯ ಸ್ಥಗಿತಗೊಳಿಸುವ ವೆಚ್ಚವನ್ನು ಬಂಡವಾಳೀಕರಣ ಮಾಡಲಾಗುವುದಿಲ್ಲ.

ಜೆ. Ind ASಗೆ ಬದಲಾವಣೆ:

IND-ASಗೆ ಬದಲಾವಣೆಯಾಗುವಾಗ, ಕಂಪನಿಯು ದಿನಾಂಕ 1ನೇ ಏಪ್ರಿಲ್, 2015ರಲ್ಲಿದ್ದಂತೆ, ಹಾಗೂ ಹಿಂದಿನ GAAPರನುಸಾರ ಲೆಕ್ಕ ಹಾಕಿದಂತೆ ತನ್ನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಯುವ ಮೌಲ್ಯವನ್ನು ಆರಿಸಿಕೊಂಡಿದ್ದು ಮತ್ತು ಆ ಮುಂದುವರಿಸಿದ ಮೌಲ್ಯವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ಭಾವಿತ ವೆಚ್ಚವೆಂದು ಪರಿಗಣಿಸಿ ಉಪಯೋಗಿಸಿಕೊಳ್ಳಲಾಗುವುದು.

**1.9. ಸವಕಳಿ:–**

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯನುಸಾರ, ಸವಕಳಿ ದರಗಳು ಈ ಕೆಳಗಿನಂತಿವೆ:

| ಕ್ರಮ ಸಂಖ್ಯೆ | ವಿವರಗಳು | ಸವಕಳಿ ದರಗಳು |
|---|---|---|
| 1. | ಕಟ್ಟಡಗಳು ಮತ್ತು ರಸ್ತೆಗಳು | 3.34% |
| 2. | ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಗ್ರಿಗಳು, ಪೀಠೋಪಕರಣಗಳು ಮತ್ತು ಅಳಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ರಿಜಿಸ್ಟ್ರೇರ್ಸ್ ಯಂತ್ರಗಳು, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು | 6.33% |
| 3. | ಟ್ರಕ್‌ಗಳು, ಟೆಂಪೋಗಳು, ಟ್ರಕ್ಕರ್‌ಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು  ಮತ್ತು ಇತರೆ ವಾಹನಗಳು | 9.50% |
| 4. | ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು | 15.00% |
| 5. | ಮರದ ರಚನೆಗಳಂತಹ ತಾತ್ಕಾಲಿಕ ರಚನೆ | 100.00% |
| 6. | ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು | 5.28% |

ಬಿ. ಆಸ್ತಿಗಳ ಮೌಲ್ಯದ ಶೇ.90ರ ವರೆಗೆ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 1.4.2007ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.3.2007ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ ವಿಸರ್ಜಿಸಿದ/ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.500/–ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಎಫ್. (i) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರೆ ಆಸ್ತಿ ಹಾಗೂ ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ90ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(ii) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100ರ ಪ್ರಮಾಣದಂತೆ, ಅಥವಾ ಭೋಗ್ಯಾಧಾರಿತ ಅವಧಿ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಕಾರ್ಯವಿಮುಕ್ತಿಗೊಳಿಸಿದ ಆಸ್ತಿಗಳ(ಬಳಕೆಯಲ್ಲಿಲ್ಲದ ಆಸ್ತಿಗಳು) ಹಾಗೂ ದುರಸ್ತಿಗಾಗಿ ಬಿಡುಗಡೆಗೊಳಿಸಿದ ಆಸ್ತಿಗಳ ಸವಕಳಿಯನ್ನು, ಅಂತಹ ಆಸ್ತಿಗಳ ಇಳಿತಗೊಂಡ ಮೌಲ್ಯದ ಮೇಲೆ ಸಾಮಾನ್ಯ ದರದ ಪ್ರಕಾರ ಒದಗಿಸಲಾಗಿದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೆವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣೆ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರೆ ಲಾಭ ಅಥವಾ ನಷ್ಟಗಳೊಳಗೆ ಲಾಭ/(ನಷ್ಟದಲ್ಲಿ) ಸೇರುತ್ತವೆ.

**1.10. ಕಂದಾಯ ಮಾನ್ಯತೆ:**

ಎ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಪರಿಗಣಿಸುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು(ಕ.ವಿ.ನಿ. ಆಯೋಗ), ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣೆಯ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಬಿ. ಐ.ಎಸ್.ಟಿ.ಎಸ್ ಮಾರ್ಗಗಳ ವಾರ್ಷಿಕ ಪ್ರಸರಣ ಶುಲ್ಕಗಳನ್ನು (ವೈಟಿಸಿ) ಕಾಲಕಾಲಕ್ಕೆ ಸಿ.ಇ.ಆರ್.ಸಿ ಆದೇಶದ ಪ್ರಕಾರ ಸಂಚಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.

ಸಿ. ಕಾರ್ಯಾನುಷ್ಠಾನಗೊಂಡ ಕಾಮಗಾರಿಗಳು/ ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ಮೂರನೇ ಪಕ್ಷಕಾರರು ನೀಡಿದ ವಂತಿಗೆಯಿಂದ ನಿರ್ಮಿಸಿ ನಿಗಮದ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು, ಅವುಗಳ ಪೂರ್ಣ ಮೌಲ್ಯದ ಪ್ರಕಾರ ಲೆಕ್ಕಪುಸ್ತಕದಲ್ಲಿ ಒಳಪಡಿಸಲಾಗಿದೆ. ಬಂಡವಾಳ ಅನುದಾನ/ನಿರ್ದಿಷ್ಟ ಆಸ್ತಿಗಳಿಗೆ ಸಂಬಂಧಿಸಿದ ಅನುದಾನ ಹಾಗೂ ಬಂಡವಾಳ ಆಸ್ತಿಗಳ ವೆಚ್ಚದ ಪ್ರಯುಕ್ತ ಗ್ರಾಹಕರಿಂದ ಕೊಡುಗೆ ಇವುಗಳನ್ನು ಆಸ್ತಿಗಳ ಮೌಲ್ಯದ ವೆಚ್ಚದಿಂದ ಕಡಿಮೆಗೊಳಿಸಿಲ್ಲ, ಆದರೆ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, "ವಂತಿಗೆ ಮತ್ತು ಬಂಡವಾಳ ಆಸ್ತಿಗಳ ನಿಮಿತ್ತ ಅನುದಾನ"ವೆಂದು ವರ್ಗೀಕರಿಸಿ, ನಂತರದಲ್ಲಿ ವಂತಿಗೆ/ಅನುದಾನದಿಂದ ಗಳಿಸಿದ ಆಸ್ತಿಗಳಿಗೆ ಕಲ್ಪಿಸುವ ಸವಕಳಿಗೆ ಸಮನಾದ ಆದಾಯ ಎಂದು ಹೊಂದಾಣಿಕೆ ಮಾಡಲಾಗಿದೆ.

ಡಿ. ನಗದು ಆಧಾರದಲ್ಲಿ ಲೆಕ್ಕೀಕರಿಸುವ ಮೇಲ್ವಿಚಾರಣ ಶುಲ್ಕಗಳು, ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು, ಠೇವಣಿ ಕೊಡುಗೆ ಕೆಲಸಗಳ ಮೇಲಿನ ಕನ್ಸಲ್ಟೆನ್ಸಿ ಶುಲ್ಕಗಳು, ಉಳಿದಿರುವ ಭೂಮಿಗೆ ಶುಲ್ಕಗಳು, ಕಾರಿಡಾರ್ ಶುಲ್ಕಗಳು ಮತ್ತು ಮಂಡಪ ಕೀಪರ್ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಿಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಇ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ, ಕಂಡು ಹಿಡಿಯಲಾಗುವುದು.

**1.11. ಗುತ್ತಿಗೆಗಳು**

**ಗುತ್ತಿಗೆದಾರರಾಗಿ**

ಕಂಪನಿಯು ಸ್ವತಂತ್ರವಾಗಿ ಮಾಲೀಕತ್ವದ ಎಲ್ಲಾ ಹೊಣೆಗಳನ್ನು ಮತ್ತು ಪ್ರತಿಫಲಗಳನ್ನು ಪಡೆದಿರುವ ಗುತ್ತಿಗೆಗಳನ್ನು ಆರ್ಥಿಕ ಗುತ್ತಿಗೆಗಳೆಂದು ವರ್ಗೀಕರಿಸಲಾಗುವುದು. ಸ್ವಾಧೀನ ಪಡಿಸಿಕೊಂಡಾಗ ಅಂತಹ ಸ್ವತ್ತುಗಳನ್ನು ನ್ಯಾಯಯುತ ಮೌಲ್ಯ ಅಥವಾ ಗುತ್ತಿಗೆಯ ಪ್ರಾರಂಭದಲ್ಲಿ ಕಡಿಮೆ ಗುತ್ತಿಗೆ ಪಾವತಿಯ ಪ್ರಸ್ತುತ ಮೌಲ್ಯದ ಆಧಾರಿತ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೂಲಧನವನ್ನಾಗಿ ಪರಿವರ್ತಿಸಲಾಗುವುದು.

ಕಾರ್ಯಪ್ರವೃತ್ತ ಗುತ್ತಿಗೆಗಳಡಿಯಲ್ಲಿನ ಗುತ್ತಿಗೆ ಪಾವತಿಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುತ್ತಿಗೆಯ ಅವಧಿಯ ಮೇಲೆ ನೇರಗೆರೆ ಆಧಾರಿತವಾದ ವೆಚ್ಚವೆಂಬಂತೆ ಅಂಗೀಕರಿಸಲಾಗುವುದು.

ಗುತ್ತಿಗೆ ಸ್ವತ್ತುಗಳಿಗೆ ಮಾಡಲಾದ ಅಭಿವೃದ್ಧಿ ವೆಚ್ಚವನ್ನು ಸ್ವತ್ತಿನ ಉಳಿದ ಗುತ್ತಿಗೆಯ ಅವಧಿಯಲ್ಲಿ ಸಮಾನ ಕಂತಿನಲ್ಲಿ ತೀರಿಸಲಾಗುವುದು.

**ಗುತ್ತಿಗೆ ನೀಡುವವರಾಗಿ**

ಕಂಪನಿಯು ಗುತ್ತಿಗೆ ನೀಡುವವರಾಗಿದ್ದಾಗ, ಗುತ್ತಿಗೆ ಪ್ರಾರಂಭವಾದಾಗಿನಿಂದ, ಗುತ್ತಿಗೆ ಆದಾಯವನ್ನು, ನಿರೀಕ್ಷಿತ ಹಣದುಬ್ಬರ ವೆಚ್ಚ ಏರಿಕೆಗಳನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ, ಅಲ್ಲಿಯೇ ಹೆಚ್ಚಲು ರಚನೆಗೊಂಡಿಲ್ಲದ ಹೊರತಾಗಿ, ನೇರಗೆರೆ ಆಧಾರದ ಮೇಲೆ ಆದಾಯವೆಂದು ಅಂಗೀಕರಿಸಲಾಗುವುದು.

**1.12. ಅನುದಾನ ಲೆಕ್ಕೀಕರಣ:**

ಎ) ಅನುದಾನವನ್ನು ಪರಿಗಣಿಸುವಲ್ಲಿ ಎಲ್ಲಾ ಸಂಯೋಜಿತ ಷರತ್ತುಗಳನ್ನು ಅನುಸರಿಸಲಾಗುತ್ತಿದೆ ಎಂಬ ಯುಕ್ತ ಆಶ್ವಾಸನೆ ಇದ್ದಾಗ ಅನುದಾನವನ್ನು ಪರಿಗಣಿಸಿ ಅಂಗೀಕರಿಸಲಾಗುತ್ತಿದೆ. ಆದಾಯ ಸಂಬಂಧಿಸಿದ ಅನುದಾನವನ್ನು ಉದ್ದೇಶಿಸಲಾಗಿರುವ ಸಂಬಂಧಿತ ವೆಚ್ಚಕ್ಕೆ ಖರ್ಚು ಮಾಡಲಾದ ಅವಧಿಗಳ ವ್ಯವಸ್ಥಿತ ಆಧಾರದ ಅನ್ವಯ ಆದಾಯವೆಂದು ಪರಿಗಣಿಸಿ ಅಂಗೀಕರಿಸಲಾಗಿರುತ್ತದೆ. ಒಂದು ಆಸ್ತಿಗೆ ಸಂಬಂಧಿಸಿದ ಅನುದಾನವನ್ನು ಸಂಬಂಧಿಸಿದ ಆಸ್ತಿಯ ನಿರೀಕ್ಷಿತ ಉಪಯುಕ್ತ ಬಳಕೆಯ ಮೇಲಿನ ಆದಾಯದ ಅವಧಿಯ ಸಮಾನ ಮೊತ್ತಕ್ಕೆ ಪರಿಗಣಿಸಿ ಅಂಗೀಕರಿಸಲಾಗುತ್ತದೆ.

ಬಿ) ತೆರಿಗೆ/ಸಂಯುಕ್ತ ಅನುದಾನಗಳನ್ನು ಅವುಗಳಿಗೆ ಲಗತ್ತಿಸಿದ ಬಾಧ್ಯತೆಗಳನ್ನು ಪೂರೈಸಿದ ಮೇಲೆ ಆದಾಯವೆಂದು ಪರಿಗಣಿಸಬೇಕು ಮತ್ತು ಅದನ್ನು ಸ್ವೀಕರಿಸುವುದು ನಿರ್ದಿಷ್ಟವಾದ ಮೇಲೆ ಆದಾಯವೆಂದು ಪರಿಗಣಿಸುವುದು.

**1.13. ಉದ್ಯೋಗಿ ಸೌಲಭ್ಯಗಳು:**

**ಎ. ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳು:**

ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳಾದ ವೇತನ, ಕೂಲಿ ಮತ್ತು ಇತರೆ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಖ್ತೆಯಲ್ಲಿ ರಿಯಾಯಿತಿ ನೀಡದ ಮೊತ್ತದ ಆಧಾರದಲ್ಲಿ ವೆಚ್ಚವೆಂದು ಪರಿಗಣಿಸಿ ಅಂಗೀಕರಿಸಲಾಗುತ್ತದೆ. ಸದರಿ ಅಲ್ಪಾವಧಿಯ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದ ಅವಧಿಗೆ ಅಂಗೀಕರಿಸಿ ಸಂಬಂದಿಸಿದ ಅವಧಿಯ ಲಾಭ ಮತ್ತು ನಷ್ಟ ತಖ್ತೆಯಲ್ಲಿ ಲೆಕ್ಕೀಕರಿಸಲಾಗಿದೆ.

**ಬಿ. ವ್ಯಾಖ್ಯಾನಿತ ಕೊಡುಗೆ ಯೋಜನೆ:**

ದಿನಾಂಕ 01.04.2006ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳು **"ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ"** ಹಾಗೂ ಕಂಪನಿಯು, ಸಂಬಳದ ಮೇಲೆ ಪಾವತಿಸುವ/ಒದಗಿಸುವ ನಿರ್ದಿಷ್ಟ ದರದ ಕೊಡುಗೆಯ ಯೋಜನೆಗೆ ಒಳಪಡುತ್ತಾರೆ.

**ಸಿ. ವ್ಯಾಖ್ಯಾನಿಸಿದ ಸೌಲಭ್ಯಗಳ ಯೋಜನೆಗಳು**

ದಿನಾಂಕ 31.3.2006 ರವರೆಗೆ ಕೆಲಸಕ್ಕೆ ಸೇರಿದ ಉದ್ಯೋಗಿಗಳನ್ನು ಒಳಪಡುವ ವಿವರಿತ ಉಪದಾನ ಹಾಗೂ ಪಿಂಚಣಿ ಸೌಲಭ್ಯ ನಿಮಿತ್ತದ ವೆಚ್ಚವನ್ನು, IND-AS-19ರ ಪ್ರಕಾರ ಕಾಲಕಾಲಕ್ಕೆ ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ನ್ಯಾಸವು (ಕೆ.ಇ.ಪಿ.ಜಿ.ಟಿ) ಸೂಚಿಸುವ ವಾಸ್ತವಿಕ ಮೌಲ್ಯಮಾಪನವನ್ನು ಆಧರಿಸಿದ ದರ/ಮೊಬಲಗಿನ ಪ್ರಕಾರ ಒದಗಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಡಿ. ರಜೆ ನಗದೀಕರಣ**

ದೀರ್ಘಾವಧಿ ಸೌಲಭ್ಯ: ಗಳಿಕೆ ರಜೆ ನಗದೀಕರಣವನ್ನು ಯೋಜಿತ ಯೂನಿಟ್ ಕ್ರೆಡಿಟ್ ಕ್ರಮಬದ್ಧತೆ ಲೆಕ್ಕಾಚಾರದ ಪ್ರಕಾರ ವಾಸ್ತವಿಕ ಮೌಲ್ಯಾಧಾರದಂತೆ ಗೊತ್ತುಪಡಿಸಿಕೊಂಡು ಪ್ರತಿ ಆರ್ಥಿಕ ವರ್ಷಾಂತ್ಯದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಇ. ಕುಟುಂಬ ಹಿತ ನಿಧಿ:–**

'ನೌಕರರ ಕುಟುಂಬ ಹಿತ ನಿಧಿ' ಯೋಜನೆಯನ್ನು ದಿನಾಂಕ: 01.07.1978 ರಿಂದ ಜಾರಿಗೆ ಬರುವಂತೆ ಪರಿಚಯಿಸಲಾಗಿದೆ. ಪ್ರತಿಯೊಬ್ಬ ನೌಕರನಿಂದ 200/– ರೂ.ಗಳನ್ನು ಕಡಿತಗೊಳಿಸಿ, ಈ ನಿಧಿಗೆ ಸಂದಾಯ ಮಾಡಲಾಗುತ್ತದೆ. ನೌಕರನು ಸೇವಾವಧಿಯಲ್ಲಿದ್ದಾಗಲೇ ಮರಣ ಹೊಂದಿದರೆ, ಅವನು ಕನಿಷ್ಠ 12 ತಿಂಗಳುಗಳು ಮಾತ್ರ 2,400/– ಹಣವನ್ನು ಸಂದಾಯಮಾಡಿದ್ದರೆ, ಅವನ ನ್ಯಾಯ ಸಮ್ಮತ ವಾರಸುದಾರರಿಗೆ ರೂ.2,00,000/–ಗಳನ್ನು ನೀಡಲಾಗುತ್ತದೆ. ಯೋಜನೆಯನುಸಾರ, ಕಂಪನಿಯು, ನೌಕರರ ಸಾವು/ನಿವೃತ್ತಿಯಾದ ಪಕ್ಷದಲ್ಲಿ, ಯೋಜನೆಯ ಷರತ್ತುಗಳನುಸಾರವಾಗಿ ಈ ನಿಧಿಗೆ ಕೊಡುಗೆ ನೀಡುತ್ತದೆ. ವಿಮಾ ಕಂತಿನ ಸಂಪಾದನೆಗಳು

ಅಥವಾ ನಷ್ಟಗಳನ್ನು ಅವುಗಳು ಕಂಡುಬರುವ ಅವಧಿಯ ಇತರೆ ಸಮಗ್ರ ಆದಾಯದಲ್ಲಿ ಗುರುತಿಸಲಾಗುತ್ತದೆ ಹಾಗೂ ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಎಫ್. ಪಿಂಚಣಿ ಸುರಕ್ಷಾ ನಿಧಿ:**

"ಕೆಇಬಿ ಪಿಂಚಣಿದಾರರ ಕುಟುಂಬ ಲಾಭ/ಸುರಕ್ಷಾನಿಧಿ"ಯನ್ನು ದಿನಾಂಕ:08.10.1998ರಂದು ಸ್ಥಾಪಿಸಲಾಯಿತು. ಈ ಯೋಜನೆಯ ಅನುಸಾರ, ಪ್ರತಿಯೊಬ್ಬ ಪಿಂಚಣಿದಾರ/ಕುಟುಂಬ ಪಿಂಚಣಿದಾರ ಈ ನಿಧಿಗೆ ರೂ.200/–ಗಳ ಮಾಸಿಕ ದೇಣಿಗೆಯನ್ನು ನೀಡಬೇಕು. ನಿಧಿಯ ಸದಸ್ಯ ಕನಿಷ್ಠ 12 ತಿಂಗಳುಗಳಿಗೆ ದೇಣಿಗೆ ನೀಡಿ ನಂತರ, ತೀರಿಕೊಂಡಾಗ ನಾಮನಿರ್ದೇಶಿತ/ರಿಗೆ ನಿಧಿಯಿಂದ ಒಟ್ಟು ಹಣವಾದ 75,000 ರೂ.ಗಳನ್ನು ನೀಡಲಾಗುತ್ತದೆ. ಕಂಪನಿಯು ಈ ನಿಧಿಗೆ ಯಾವುದೇ ದೇಣಿಗೆಯನ್ನು ನೀಡುವುದಿಲ್ಲ.

**1.14. ವಿದೇಶಿ ವಿನಿಮಯ ವ್ಯವಹಾರಗಳು**

**ಎ. ಕಾರ್ಯಪ್ರವೃತ್ತ ವಿನಿಮಯ**

ಕಂಪನಿಯ ಕಾರ್ಯಪ್ರವೃತ್ತ ಕರೆನ್ಸಿಯೆಂದರೆ ಭಾರತೀಯ ರೂಪಾಯಿ, ಈ ಆರ್ಥಿಕ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗುತ್ತದೆ.

**ಬಿ. ವ್ಯವಹಾರಗಳು ಮತ್ತು ಬದಲಾವಣೆಗಳು**

ವಿದೇಶಿ ಕರೆನ್ಸಿ ವರ್ಗದ ಆರ್ಥಿಕ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿರುವಂತೆ ಪರಿಣಾಮಕಾರಿಯಾಗಿ ಯುಕ್ತ ಕಾರ್ಯ ಪ್ರವೃತ್ತ ಕರೆನ್ಸಿಗೆ ಬದಲಾಯಿಸಲಾಗುವುದು. ಈ ಇಂತಹ ಬದಲಾವಣೆಗಳಿಂದ ದೊರೆಯುವ ಲಾಭಗಳು ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ನಿವ್ವಳ ಲಾಭದಲ್ಲಿ ಸೇರಿಸಲಾಗುವುದು.

ವಿದೇಶಿ ಕರೆನ್ಸಿ ಬದಲಾವಣೆಯಿಂದ ಇತ್ಯರ್ಥಗೊಳಿಸಿದ ವ್ಯವಹಾರಿಕ ಲಾಭ ಅಥವಾ ನಷ್ಟಗಳನ್ನು, ವ್ಯವಹಾರವು ಇತ್ಯರ್ಥವಾದ ಅವಧಿಯಲ್ಲಿನ ನಿವ್ವಳ ಲಾಭವನ್ನು ಕಂಡುಹಿಡಿಯುವುದರಲ್ಲಿ ಪರಿಗಣಿಸಲಾಗುತ್ತದೆ. ಕಂದಾಯ, ವೆಚ್ಚ ಮತ್ತು ವಿದೇಶಿ ಕರೆನ್ಸಿ ವರ್ಗಗಳಲ್ಲಿರುವ ಹಣದ ಹರಿವಿನ ಬಾಬ್ತುಗಳನ್ನು ವ್ಯವಹಾರ ನಡೆಸಿದ ದಿನಾಂಕದಂದು ಜಾರಿಯಲ್ಲಿರುವ ವಿನಿಮಯ ದರವನ್ನು ಉಪಯೋಗಿಸಿಕೊಂಡು ಯುಕ್ತ ಕಾರ್ಯಪ್ರವೃತ್ತ ಕರೆನ್ಸಿಗಳಿಗೆ ಬದಲಾವಣೆ ಮಾಡಬೇಕು.

**1.15. ಸಾಲದ ವೆಚ್ಚಗಳು**

ನಿರ್ಮಿತ/ಅರ್ಜಿತ ಅರ್ಹತಾದಾಯಕ ಆಸ್ತಿಗಳಿಗೆ ಸಂಬಂಧಿಸಿದ ಸಾಲದ ವೆಚ್ಚಗಳನ್ನು, ಅಂತಹ ಆಸ್ತಿಗಳ ಮೌಲ್ಯದ ಭಾಗವೆಂದು ಬಂಡವಾಳೀಕರಿಸಲಾಗುತ್ತದೆ. ಅರ್ಹತಾದಾಯಕ ಆಸ್ತಿ ಎಂದರೆ, ಉದ್ದೇಶಿತ ಬಳಕೆಗಾಗಿ ಸಿದ್ಧವಾಗಲು ಸಾಕಷ್ಟು ಅವಶ್ಯಕ ಅವಧಿಯನ್ನು ತೆಗೆದುಕೊಳ್ಳುವಂತಹದ್ದು.

ಸಾಲ ಪಡೆಯುವ ವೆಚ್ಚಗಳೆಂದರೆ ತನ್ನ ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸ್ವತ್ತಿನ ವೆಚ್ಚದ ಭಾಗವಾಗಿ ಬಂಡವಾಳವಾಗುವ ಅರ್ಹದಾಯ ಸ್ವತ್ತಿನ ಆರ್ಜನೆ, ನಿರ್ಮಾಣ, ತಯಾರಿಕೆಗೆ ನೇರವಾಗಿ ಕಾರಣವಾಗುವ ಯೋಗ್ಯವಾದ ವೆಚ್ಚಗಳು, ಕಂಪನಿಯು ಅಂತಹ ಖರ್ಚಿನ ಮೇಲೆ ಉಂಟಾಗುವ ವೆಚ್ಚಕ್ಕೆ ಬಂಡವಾಳೀಕರಣದ ದರವನ್ನು ಅನ್ವಯಿಸುವುದರ ಮೂಲಕ ಮೂಲಧನೀಕರಣಕ್ಕೆ ಅರ್ಹವಾದ ಸಾಲಪಡೆಯುವ ವೆಚ್ಚದ ಮೊತ್ತವನ್ನು ಕಂಡುಹಿಡಿಯಲಾಗುತ್ತದೆ. ಮೂಲಧನೀಕರಣದ ದರವನ್ನು ಅರ್ಹದಾಯಕ ಸ್ವತ್ತಿನ ಖರೀದಿಗೆ ನಿರ್ದಿಷ್ಟವಾಗಿ ಮಾಡಲಾದ ಸಾಲ ಪಡೆಯುವಿಕೆಯನ್ನು ಹೊರತುಪಡಿಸಿ, ಆ ಅವಧಿಯಲ್ಲಿ ಬಾಕಿಯಿರುವ ಕಂಪನಿಯ ಸಾಲಗಳಿಗೆ ಅನ್ವಯಿಸುಬಹುದಾದ ಸಾಲ ವೆಚ್ಚದ ಅಂದಾಜು ದರವನ್ನು ಆಧರಿಸಿ ಕಂಡುಹಿಡಿಯಲಾಗುವುದು. ಕಂಪನಿಯು ಆ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಸಾಲದ ವೆಚ್ಚದ ಮೊತ್ತವು ಅವಧಿಯಲ್ಲಿ ಉಂಟಾಗುವ ಸಾಲದ ವೆಚ್ಚದ ಮೊತ್ತವನ್ನು ಮೀರಬಾರದು. ಇತರ ಎಲ್ಲಾ ಸಾಲದ ವೆಚ್ಚಗಳನ್ನು, ಅವುಗಳು ಸಂಭವಿಸದ ಅವಧಿಯಲ್ಲಿ ಖರ್ಚು ಮಾಡಲಾಗುವುದು.

**1.16. ಪ್ರತೀ ಷೇರಿನ ಸಂಪಾದನೆ**

ಪ್ರತೀ ಷೇರಿನ ಮೂಲ ಸಂಪಾದನೆ

ಪ್ರತೀ ಷೇರಿನ ಮೂಲ ಸಂಪಾದನೆಯನ್ನು ಆರ್ಥಿಕ ವರ್ಷದ ಅವಧಿಯಲ್ಲಿ ಬಾಕಿಯಿರುವ ಸ್ವಾಮ್ಯ ಷೇರುಗಳ ವೇಯಿಟೆಡ್ ಸರಾಸರಿ ಸಂಖ್ಯೆಯಿಂದ ಕಂಪನಿಯ ಸ್ವಾಮ್ಯ ಷೇರುದಾರರಿಗೆ ಆರೋಪಯೋಗ್ಯವಾದ ಲಾಭವನ್ನು ಭಾಗಿಸುವುದರಿಂದ ಲೆಕ್ಕ ಹಾಕಲಾಗುತ್ತದೆ.

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆ

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆಯು ಎಲ್ಲಾ ಗುಣತಗ್ಗಿದ ಸಾಮರ್ಥ್ಯ ಸ್ವಾಮ್ಯ ಷೇರುಗಳ ಬದಲಾವಣೆಯನ್ನು ಪರಿಭಾವಿಸಿ, ಬಾಕಿಯಿರುವ ಆರ್ಥಿಕ ಸ್ವಾಮ್ಯ ಷೇರುಗಳು ಒಳಗೊಂಡಂತೆ, ಸ್ವಾಮ್ಯ ಷೇರುಗಳ ವೇಯಿಟೆಡ್ ಸರಾಸರಿ ಸಂಖ್ಯೆ ಮತ್ತು ಆನಂತರದ ಆದಾಯದ ಬಡ್ಡಿಯ ತೆರಿಗೆಯ ಪರಿಣಾಮ ಮತ್ತು ಗುಣತಗ್ಗಿದ ಸಾಮರ್ಥಿಕ ಸ್ವಾಮ್ಯ ಷೇರುಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತೀ ಷೇರಿನ ಮೂಲ ಸಂಪಾನದಯ ನಿರ್ಧರಣೆಯಲ್ಲಿ ಉಪಯೋಗಿಸುವ ಸ್ವಾಮ್ಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಲಾಗುತ್ತದೆ.

**1.17. ಪಿ.ಪಿ.ಇ. ಮತ್ತು ಸ್ಪರ್ಶಾತೀತ ಆಸ್ತಿಗಳ ದುರ್ಬಲತೆ: (Impairment of PPE and Intangible Assets)**

ಕಂಪನಿಯ ಸ್ವತ್ತುಗಳನ್ನು ಮುಂದುವರಿಸುವ ಮೊತ್ತದ ಯಾವುದೇ ದುರ್ಬಲತೆಯ ಸೂಚನೆಗಳಿವೆಯೇ ಎಂಬುದನ್ನು ನಿರ್ಧರಿಸಲು ಪ್ರತಿ ಆಯವ್ಯಯ ದಿನಾಂಕದಲ್ಲಿ ಪಿ.ಪಿ.ಇ.ಗಳ ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಮುಂದುವರಿಸುವ ಮೌಲ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಸೂಚನೆಗಳು ಅಸ್ತಿತ್ವದಲ್ಲಿದ್ದಲ್ಲಿ, ಸ್ವತ್ತುಗಳನ್ನು ಮರುಪಡೆದುಕೊಳ್ಳುವ ಮೊತ್ತವನ್ನು ಅಂದಾಜಿಸಲಾಗಿದೆ. ಆಸ್ತಿಯನ್ನು ಸಾಗಿಸುವ ಮೊತ್ತವು ಮರುಪಡೆದುಕೊಳ್ಳುವ ಮೊತ್ತವನ್ನು ಮೀರಿದ ಸಂದರ್ಭಗಳಲ್ಲಿ ದುರ್ಬಲ ನಷ್ಟವನ್ನು ಗುರುತಿಸಲಾಗುತ್ತದೆ. ಮರುಪಡೆಯಬಹುದಾದ ಮೊತ್ತವು ನಿವ್ವಳ ಮಾರಾಟ ದರ ಮತ್ತು ಅವುಗಳ ಬಳಕೆಯ ಮೌಲ್ಯಕ್ಕಿಂತ ಹೆಚ್ಚಾಗಿದೆ. ಸೂಕ್ತ ರಿಯಾಯಿತಿ ಅಂಶದ ಆಧಾರದ ಮೇಲೆ ಅವುಗಳ ಪ್ರಸ್ತುತ ಮೌಲ್ಯಕ್ಕೆ ಭವಿಷ್ಯದ ನಗದು ಹರಿವುಗಳನ್ನು ರಿಯಾಯಿತಿ ಮಾಡುವ ಮೂಲಕ ಬಳಕೆಯಲ್ಲಿರುವ ಮೌಲ್ಯವನ್ನು ನಿಗದಿ ಮಾಡಲಾಗುತ್ತದೆ. ಹಿಂದಿನ ಲೆಕ್ಕಪತ್ರ ಅವಧಿಗಳಲ್ಲಿ ಒಂದು ಸ್ವತ್ತಿಗಾಗಿ ಗುರುತಿಸಲ್ಪಟ್ಟ ದುರ್ಬಲ ನಷ್ಟವು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಅಥವಾ ಕಡಿಮೆಯಾಗಬಹುದೆಂಬ ಸೂಚನೆಯಿರುವಾಗ, ದುರ್ಬಲ ನಷ್ಟದ ಅಂತಹ ಹಿಮ್ಮುಖವು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲ್ಪಟ್ಟಿದೆ.

**1.18. ಹವಣಿಕೆಗಳು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳು:**

ಎ) ಹಿಂದಿನ ವ್ಯವಹರಣೆಗಳ ನಿಮಿತ್ತ ನಿಗಮವು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ತವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು, ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು, ಆ ಮಟ್ಟಿಗೆ ಒಂದು ಭರವಸಾಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಆಸ್ತಿ–ಹೊಣೆ ಪಟ್ಟಿ ದಿನಾಂಕದೊಂದಿಗೆ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವಾಗುವಂತೆ ಅತ್ಯುತ್ತಮ ಅಂದಾಜನ್ನು ಆಧರಿಸಿ ಅವಕಾಶವನ್ನು ಗೊತ್ತುಪಡಿಸಲಾಗಿದೆ. ಇವನ್ನು ಪ್ರತಿ ಆಸ್ತಿ–ಹೊಣೆ ಪಟ್ಟಿ ದಿನಾಂಕದಂದು ಪರಿಶೀಲನೆಗೊಳಪಡಿಸಿ, ವ್ಯವಸ್ಥೆಯ ಪ್ರಸಕ್ತ ಅಂದಾಜನ್ನು ಬಿಂಬಿಸಲು ಹೊಂದಾಣಿಕೆ ಮಾಡಲಾಗುತ್ತದೆ.

ಬಿ) ಸಾದಿಲ್ವಾರು ಹೊಣೆಗಾರಿಕೆಗಳನ್ನು ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಬಿಂಬಿಸಿಲ್ಲ, ಆದರೆ ಟಿಪ್ಪಣಿಗಳಲ್ಲಿ ಬಿಂಬಿಸಲಾಗಿದೆ. ಹಿಂದಿನ ಘಟನೆಗಳಿಂದ ಉಂಟಾದ ಸಂಭವನೀಯ ಬಾಧ್ಯತೆ ಸಾದಿಲ್ವಾರು ಹೊಣೆಗಾರಿಕೆಯಾಗಿದೆ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದು ಗುರುತಿಸಿರುವುದಿಲ್ಲ, ಏಕೆಂದರೆ (1) ಆರ್ಥಿಕ ಪ್ರಯೋಜನಗಳನ್ನು ಹೊಂದುವಂತಹ ಸಂಪನ್ಮೂಲಗಳ ಹೊರಹರಿವು ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಅಗತ್ಯವಿರುತ್ತದೆ ಎಂಬುದು ಸಂಭಾವ್ಯವಲ್ಲ ಅಥವಾ (2) ಹೊಣೆಗಾರಿಕೆಯ ಪ್ರಮಾಣವನ್ನು ಸಾಕಷ್ಟು ವಿಶ್ವಾಸಾರ್ಹತೆಯಿಂದ ಅಳೆಯಲಾಗುವುದಿಲ್ಲ.

ಸಿ) ಸಾದಿಲ್ವಾರು ಆಸ್ತಿಗಳ ಹಿಂದಿನ ಕಾರ್ಯಕ್ರಮಗಳಿಂದ ಉದ್ಭವಿಸುವ ಒಂದು ಸಂಭವನೀಯ ಆಸ್ತಿ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು

ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದನ್ನು ಆರ್ಥಿಕ ವಿವರಣಾ ಪಟ್ಟಿಯಲ್ಲಿ ಗುರುತಿಸಿರುವುದಿಲ್ಲ, ಆರ್ಥಿಕ ಪ್ರಯೋಜನೆಗಳ ಒಳಹರಿವು ಸಾಧ್ಯವಾದಾಗ ಸಾದಿಲ್ವಾರು ಆಸ್ತಿಗಳ ವಿವರಗಳನ್ನು ಟಿಪ್ಪಣಿಗಳಲ್ಲಿ ಬಹಿರಂಗಗೊಳಿಸಲಾಗುತ್ತದೆ.

ಡಿ) ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ವಿವರಣಾ ಪಟ್ಟಿಯಲ್ಲಿ ಸೂಕ್ತವಾಗಿ ಬಹಿರಂಗಪಡಿಸಲು/ಗುರುತಿಸಲು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

**1.19. ಸ್ಪರ್ಶಾತೀತ ಆಸ್ತಿಗಳು**

ಸ್ಪರ್ಶಾತೀತ ಆಸ್ತಿಗಳ ವೆಚ್ಚವನ್ನು ಆರಂಭಿಕ ಗುರುತಿಸುವಿಕೆಯ ಮೇಲೆ ಅಳೆಯಲಾಗುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ, ಸ್ಪರ್ಶಾತೀತ ಆಸ್ತಿಗಳನ್ನು ಯಾವುದೇ ಸಂಗ್ರಹವಾದ ಭೋಗ್ಯ ಮತ್ತು ಸಂಗ್ರಹವಾದ ದುರ್ಬಲತೆ ನಷ್ಟಗಳಿಗೆ ಕಡಿಮೆ ವೆಚ್ಚದಲ್ಲಿ ಸಾಗಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ಆಸ್ತಿಯಲ್ಲಿ ಸಾಕಾರಗೊಂಡ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ಹೆಚ್ಚಿಸಿದಾಗ ಮತ್ತು ಈಗಾಗಲೇ ನಿರೀಕ್ಷಿತ ಪ್ರಮಾಣದಲ್ಲಿ ಭೋಗ್ಯ ಪಡೆದಾಗ ಈಗಾಗಲೇ ಬಂಡವಾಳೀಕರಿಸಿದ ಸ್ಪರ್ಶಾತೀತ ಆಸ್ತಿಗಳ ನಂತರದ ಖರ್ಚು ದೊಡ್ಡದಾಗುತ್ತದೆ.

ಸ್ಪರ್ಶಾತೀತ ಆಸ್ತಿಗಳ ಶೀರ್ಷಿಕೆಯಡಿಯಲ್ಲಿ ಬಂಡವಾಳೀಕರಣಕ್ಕೆ ಅರ್ಹವಾದ ಖರ್ಚು, ಅಂತಹ ಸ್ವತ್ತುಗಳು ಅವುಗಳ ಉದ್ದೇಶಿತ ಬಳಕೆಗೆ ಸಿದ್ಧವಾಗುವವರೆಗೆ "ಅಭಿವೃದ್ಧಿಯ ಅಡಿಯಲ್ಲಿ ಸ್ಪರ್ಶಾತೀತ ಆಸ್ತಿಗಳು" ಎಂದು ಮುಂದುವರೆಸಲಾಗುತ್ತದೆ. ಸಂಶೋಧನೆಯ ವೆಚ್ಚವನ್ನು ಅದು ಮಾಡಿದಾಗ ಖರ್ಚು ಎಂದು ಗುರುತಿಸಲಾಗುತ್ತದೆ. IND AS 38 'ಸ್ಪರ್ಶಾತೀತ ಆಸ್ತಿಗಳು' ಪ್ರಕಾರ ಅರ್ಹತಾ ಮಾನದಂಡಗಳನ್ನು ಪೂರೈಸಿದರೆ ಅಭಿವೃದ್ಧಿಯ ವೆಚ್ಚವನ್ನು ಸ್ಪರ್ಶಾತೀತ ಆಸ್ತಿ ಎಂದು ಗುರುತಿಸಲಾಗುತ್ತದೆ, ಇಲ್ಲದಿದ್ದರೆ ಅದನ್ನು ಖರ್ಚಾಗಿ ಗುರುತಿಸಲಾಗುತ್ತದೆ.

ಸ್ಪರ್ಶಾತೀತ ಆಸ್ತಿಯ ವಸ್ತುವನ್ನು ವಿಲೇವಾರಿ ಮಾಡಿದ ನಂತರ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದ ಯಾವುದೇ ಆರ್ಥಿಕ ಪ್ರಯೋಜನೆಗಳನ್ನು ನಿರೀಕ್ಷಿಸದಿದ್ದಾಗ ಗುರುತಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಯ ಗುರುತಿಸುವಿಕೆಯಿಂದ ಉಂಟಾಗುವ ಲಾಭಗಳು ಅಥವಾ ನಷ್ಟಗಳನ್ನು ನಿವ್ವಳ ವಿಲೇವಾರಿ ಆದಾಯ ಮತ್ತು ಆಸ್ತಿಯ ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವೆಂದು ಅಳೆಯಲಾಗುತ್ತದೆ ಮತ್ತು ಆಸ್ತಿಯನ್ನು ಗುರುತಿಸದಿದ್ದಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುತ್ತದೆ.

ಸ್ಪರ್ಶಾತೀತ ಆಸ್ತಿಯಂತೆ ಬಂಡವಾಳಕರಿಸಿದ ಸಾಫ್ಟ್‌ವೇರ್ ವೆಚ್ಚವನ್ನು ಅಂದಾಜು ಉಪಯುಕ್ತ ಜೀವನದ ಅವಧಿಯಲ್ಲಿ **'Nil'** ಉಳಿದ ಮೌಲ್ಯದೊಂದಿಗೆ ಮನ್ನಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಯ ಭೋಗ್ಯ ಅವಧಿ ಮತ್ತು ಭೋಗ್ಯದ ವಿಧಾನವನ್ನು ಪ್ರತಿ ಹಣಕಾಸು ವರ್ಷಾಂತ್ಯದಲ್ಲಿ ಪರಿಶೀಲಿಸಲಾಗುತ್ತದೆ ಮತ್ತು IND AS 8 "ಅಕೌಂಟಿಂಗ್ ನೀತಿಗಳು, ಅಕೌಂಟಿಂಗ್ ಅಂದಾಜುಗಳು ಮತ್ತು ದೋಷಗಳಲ್ಲಿನ ಬದಲಾವಣೆಗಳು" ಗೆ ಅನುಗುಣವಾಗಿ ಅಕೌಂಟಿಂಗ್ ಅಂದಾಜುಗಳಲ್ಲಿನ ಬದಲಾವಣೆಯೆಂದು ಪರಿಗಣಿಸಲಾಗುತ್ತದೆ.

**1.20. ಆರ್ಥಿಕ ಸಾಧನಗಳು:**

ಒಂದು ಆರ್ಥಿಕ ಸಾಧನವು ಒಂದು ಘಟಕದ ಆರ್ಥಿಕ ಆಸ್ತಿಯ ಉಗಮವಾಗಿಸುವ ಒಂದು ಒಪ್ಪಂದ ಮತ್ತು ಆರ್ಥಿಕ ಹೊಣೆಗಾರಿಕೆ ಅಥವಾ ಮತ್ತೊಂದು ಘಟಕದ ಸ್ವಾಮ್ಯ ಸಾಧನವಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಸರಿದೂಗಿಸಲ್ಪಟ್ಟಿವೆ ಮತ್ತು ನಿವ್ವಳ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಗುರುತಿಸಲಾದ ಮೊತ್ತವನ್ನು ಸರಿದೂಗಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಸ್ವತ್ತುಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸಲು ಉದ್ದೇಶಿಸಿದೆ.

ಆರ್ಥಿಕ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗೀಕರಣವನ್ನು ಕಂಪನಿಯು ಆರಂಭದಲ್ಲಿ ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಗಳಿಗಾಗಿ ಯಾವುದೇ ಮರುವರ್ಗೀಕರಣವನ್ನು ಮಾಡಲಾಗುವುದಿಲ್ಲ ಇದನ್ನು FVTOCI ನಲ್ಲಿ ಸ್ವಾಮ್ಯ ಸಾಧನಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ಆರ್ಥಿಕ ಆಸ್ತಿಗಳು/ಹೊಣೆಗಾರಿಕೆಗಳನ್ನು

FVTPL ನಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸಿದೆ. ಆದಾಗ್ಯೂ, ಇತರ ಆರ್ಥಿಕ ಆಸ್ತಿಗಳನ್ನು ಕಂಪನಿಯ ವ್ಯಾಪಾರಿ ಮಾದರಿಯಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ ಮರುವರ್ಗೀಕರಿಸಬಹುದಾಗಿದೆ. ಕಂಪನಿಯು ಆರ್ಥಿಕ ಆಸ್ತಿಗಳನ್ನು ಮರುವರ್ಗೀಕರಿಸಿದಾಗ, ಅಂತಹ ಮರುವರ್ಗೀಕರಣಗಳನ್ನು ಮುಂದಿನ ವರದಿ ಅವಧಿಯ ಮೊದಲ ದಿನದಿಂದ ನಿರೀಕ್ಷಿತವಾಗಿ ಮಾಡಲಾಗುತ್ತದೆ. ಕಂಪನಿಯು ಹಿಂದೆ ಗುರುತಿಸಲಾದ ದುರ್ಬಲತೆ ಗಳಿಕೆಗಳು ಅಥವಾ ನಷ್ಟಗಳನ್ನೊಳಗೊಂಡಂತೆ ಯಾವುದೇ ಗಳಿಕೆಗಳು, ನಷ್ಟಗಳನ್ನು ಪುನರಾವರ್ತಿಸುವುದಿಲ್ಲ.

**ಎ. ಆರ್ಥಿಕ ಸ್ವತ್ತುಗಳು**

ಆರ್ಥಿಕ ಸ್ವತ್ತುಗಳು ಸ್ವಾಮ್ಯ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳು, ವ್ಯಾಪಾರ ಸ್ವೀಕೃತಿಗಳು, ನಗದು ಮತ್ತು ನಗದು ಸಮಾನ ಮತ್ತು ಇತರ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತವೆ.

ಆ ಹಣಕಾಸಿನ ಸ್ವತ್ತುಗಳು ಮತ್ತು ಅದರ ಒಪ್ಪಂದದ ನಗದು ಹರಿವಿನ ಗುಣಲಕ್ಷಣಗಳನ್ನು ನಿರ್ವಹಿಸಲು ವ್ಯವಹಾರ ಮಾದರಿ (i.e) ವ್ಯವಹಾರಗಳ ಸ್ವಭಾವವನ್ನು ಅವಲಂಬಿಸಿ, ಆರ್ಥಿಕ ಸ್ವತ್ತುಗಳನ್ನು ಮೊದಲಿಗೆ ನ್ಯಾಯೋಚಿತ ಮೌಲ್ಯದಲ್ಲಿ ಅಳೆಯಲಾಗುತ್ತದೆ ಮತ್ತು ತದನಂತರ ಈ ಕೆಳಗಿನವುಗಳಲ್ಲಿ ಅಳತೆ ಮತ್ತು ವರ್ಗೀಕರಣ ಮಾಡಲಾಗುತ್ತದೆ.

ಎ) ಋಣಮುಕ್ತತೆಯ ವೆಚ್ಚ; ಅಥವಾ

ಬಿ) ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ (Fair Value Through Other Comprehensive Income (FVTOCI)); ಅಥವಾ

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL)

ಮಿತವ್ಯಯದ ವೆಚ್ಚವು ಪ್ರಾರಂಭದಲ್ಲಿ ಗುರುತಿಸಲಾದ ನ್ಯಾಯೋಚಿತ ಮೌಲ್ಯದ ವ್ಯವಹಾರ ವೆಚ್ಚದ ಹೊರೆಯ ಮೊತ್ತವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುತ್ತದೆ.

